# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ನವೆಂಬರ್ 18 ಮಂಗಳವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 210 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ಹೈಕಮಾಂಡ್ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಶಿವಕುಮಾರ್ ವಾದ ಮಂಡನೆ

# ಕ್ಲೈಮ್ಯಾಕ್ಸ್ ನಿಗೂಢ!



ಬೆಂಗಳೂರು, ನ.17– ರಾಜ್ಯ ಕಾಂಗ್ರೆಸ್ ವಿದ್ಯಮಾನ ಕ್ಷಣ ಕ್ಷಣಕ್ಕೂ ಬದಲಾಗುತ್ತಿದ್ದು, ಸಚಿವ ಸಂಪುಟ ಪುನರ್ ರಚನೆಯಾಗುವುದೇ...! ಒಂದು ವೇಳೆ ಅದು ಸಾಧ್ಯವಾದರೆ, ಕಾಂಗ್ರೆಸ್‌ನಲ್ಲಿ ಕ್ರಾಂತಿ ಕತೆ ಏನು ಎಂಬ ವಿಚಾರ ದೆಹಲಿ ಮಟ್ಟದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದ್ದು, ಕ್ಲೈಮ್ಯಾಕ್ಸ್ ನಿಗೂಢವಾಗಿದೆ!

ನಿನ್ನೆ ಕಾಂಗ್ರೆಸ್ ಅದಿನಾಯಕ ರಾಹುಲ್‌ಗಾಂಧಿ ಅವರನ್ನು ಭೇಟಿಯಾಗಿದ್ದಂತಹ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಸಂಪುಟ ಪುನರ್‌ರಚನೆ ಸಂಬಂಧ ಪ್ರಸ್ತಾಪಿಸುವ ಪ್ರಯತ್ನ ಮಾಡಿದರಾದರೂ ಅದಕ್ಕೆ ಪರಿಸ್ಥಿತಿ ಅವಕಾಶ ಮಾಡಿಕೊಡಲಿಲ್ಲ. ಬರೀ ಬಿಹಾರ ಚುನಾವಣೆ, ಫಲಿತಾಂಶಕ್ಕೆ ಚರ್ಚೆ ಸೀಮಿತವಾಗಿತ್ತು. ಈ ಮಧ್ಯೆ ಸೋನಿಯಾಗಾಂಧಿ ಅವರು, ಸಿದ್ದರಾಮಯ್ಯ, ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಚರ್ಚಿಸಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಆಗಿ ಚರ್ಚಿಸುವಂತೆ ಸಲಹೆ ನೀಡಿದ್ದರೆನ್ನಲಾಗಿದೆ.

ಮತ್ತೊಮ್ಮೆ ದೆಹಲಿಗೆ ಬರುವ ನಿರ್ಧಾರದಂತೆ ಇಂದು ದೆಹಲಿಗೆ ಭೇಟಿ ನೀಡಿದ್ದ ಅವರು, ಪೂರ್ವನಿಗದಿಯಂತೆ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿ ಐದು ವಿಚಾರವಾಗಿ ಮನವಿ ಪತ್ರ ಸಲ್ಲಿಸಿದರು. ನಂತರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಗಂಟೆ ಕಾಲ ಸಮಾಲೋಚನೆ ನಡೆಸಿದರು.

**ಭೇಟಿ ನಂತರ ಮೌನ:** ಇಂದು ಖರ್ಗೆ ಭೇಟಿಗೂ ಮುನ್ನವೇ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಲ್ಕೈದು ತಿಂಗಳ ಹಿಂದೆಯೇ ಸಂಪುಟ ಪುನರ್ ರಚನೆಗೆ ಹೈಕಮಾಂಡ್ ಸೂಚಿಸಿತ್ತು. ಆ ವೇಳೆ ಸಂಪುಟ ಪುನರ್ ರಚನೆಗೆ ■ 6ನೇ ಪುಟಕ್ಕೆ

## ನವೆಂಬರ್–ಡಿಸೆಂಬರ್ ಒಳಗೆ ಸಿಎಂ ಸ್ಥಾನ ಕಲ್ಪಿಸಿ

**● ವರಿಷ್ಠರ ಬಳಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಕ್ಕೊತ್ತಾಯ ● ರಾಜ ಗುರು ಡಾ.ದ್ವಾರಕನಾಥ್ ಸೇರಿದಂತೆ ಮಠಾಧಿಪತಿಗಳ ಸಲಹೆಯಂತೆ ಸಿಎಂ ಗಾದಿಗೆ ಡಿಕೆಶಿ ಬಿಗಿಪಟ್ಟು**

ಬೆಂಗಳೂರು, ನ.17(ಕೆಎಂಶಿ)– ಕರ್ನಾಟಕದಲ್ಲಿ ಸರ್ಕಾರ ರಚನೆ ವೇಳೆ ತಮಗೆ ನೀಡಿರುವ ಭರವಸೆ ಈಡೇರಿಸುವಂತೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಕ್ಷದ ವರಿಷ್ಠರ ಮೇಲೆ ಒತ್ತಡ ಹೇರಿದ್ದಾರೆ.


ನವೆಂಬರ್–ಡಿಸೆಂಬರ್ ಒಳಗೆ ಮುಖ್ಯಮಂತ್ರಿ ಸ್ಥಾನ ದೊರಕಿಸಿ ಕೊಡಬೇಕೆಂದು ಮನವಿ ಮಾಡಿದ್ದಾರೆ. ಕಳೆದ ಮೂರು ದಿನಗಳಿಂದ ತಮ್ಮ ಸಹೋದರ ಮಾಜಿ ಸಂಸದ ಡಿ.ಕೆ. ಸುರೇಶ್ ಜೊತೆ ದೆಹಲಿಯಲ್ಲೇ ಬಿಡಾರ ಹೂಡಿರುವ ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ ಅವರನ್ನು ■ 6ನೇ ಪುಟಕ್ಕೆ

> ನಾನು ಅಧಿಕಾರಿಗಳ ಜೊತೆ ಚರ್ಚೆ ಮಾಡುವ ಸಲುವಾಗಿ ದೆಹಲಿಗೆ ತೆರಳಿದ್ದೆ. ಅಲ್ಲಿಗೆ ಹೋದಾಗ ಪಕ್ಷದ ವರಿಷ್ಠರನ್ನು ಭೇಟಿ ಮಾಡುವುದು ಸರ್ವೆ ಸಾಮಾನ್ಯ. ಅದರಂತೆ ಖರ್ಗೆ ಅವರನ್ನು ಭೇಟಿ ಮಾಡಿದ್ದೇನೆ. ಅವರ ಜೊತೆ ರಾಜಕೀಯ ಚರ್ಚೆ ಮಾಡಿಲ್ಲ. ಮಂತ್ರಿ ಆಗಬೇಕು ಎಂಬ ಆಸೆ ಎಲ್ಲಾ ಶಾಸಕರಿಗೂ ಇರುತ್ತದೆ. ಯಾರು ಏನೂ ಆಗಿಲ್ಲವೋ ಅವರನ್ನು ಮಂತ್ರಿ ಮಾಡುವ ಅಧಿಕಾರ ಮುಖ್ಯಮಂತ್ರಿಗಳಿಗೆ ಇದೆ.
> – ಡಿ.ಕೆ.ಶಿವಕುಮಾರ್, ಡಿಸಿಎಂ

### ಸೌದಿಯಲ್ಲಿ ಡೀಸೆಲ್ ಟ್ಯಾಂಕರ್‌ಗೆ ಬಸ್ ಡಿಕ್ಕಿ

## ಕನ್ನಡಿಗ ಸೇರಿ 46 ಭಾರತೀಯ ಯಾತ್ರಿಕರು ಸಜೀವ ದಹನ

### ಬಸ್‌ನಿಂದ ಹಾರಿ ಏಕೈಕ ಯುವಕ ಬಚಾವ್



**ಜಿದ್ದಾ:** ಮೆಕ್ಕಾದಿಂದ ಮದೀನಾಗೆ ತೆರಳುತ್ತಿದ್ದ ಯಾತ್ರಿಕರ ಬಸ್, ಡೀಸೆಲ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆದ ಪರಿಣಾಮ 46 ಭಾರತೀಯರು ಸಜೀವ ದಹನವಾದ ಘಟನೆ ನಡೆದಿದೆ.

ಟ್ಯಾಂಕರ್‌ಗೆ ಬಸ್ ಡಿಕ್ಕಿ ಹೊಡೆಯುತ್ತಿದ್ದಂತೆ ಬಸ್‌ಗೆ ಬೆಂಕಿ ಹೊತ್ತಿಕೊಂಡಿದ್ದು, ಹೆಚ್ಚಿನ ಪ್ರಯಾಣಿಕರು ನಿದ್ರಾವಸ್ಥೆಯಲ್ಲಿದ್ದ ಕಾರಣ ಸಾವಿನ ಸಂಖ್ಯೆ ಹೆಚ್ಚಾಗಿರುವ ಸಾಧ್ಯತೆ ಇದೆ. ಮೃತರಲ್ಲಿ ಹೆಚ್ಚಿನವರು ತೆಲಂಗಾಣದ ಹೈದರಾಬಾದ್ ಮೂಲದವರಾಗಿದ್ದು ಮಹಿಳೆಯರು ಮತ್ತು ಮಕ್ಕಳು ಸೇರಿದ್ದಾರೆ ಎಂದು ತಿಳಿದುಬಂದಿದೆ. ಇವರಲ್ಲಿ ಹುಬ್ಬಳ್ಳಿಗೆ ಸೇರಿದ ವ್ಯಕ್ತಿಯೊಬ್ಬರು ಮೃತಪಟ್ಟಿರುವುದಾಗಿ ಅವರ ಪಾಸ್‌ಪೋರ್ಟ್ ಉಲ್ಲೇಖಿಸಿ ದೃಢಪಡಿಸಲಾಗಿದೆ.

ಸೋಮವಾರ ಮದೀನಾ ಬಳಿ ಸಂಭವಿಸಿದ ಈ ದುರ್ಘಟನೆಯಲ್ಲಿ ಓರ್ವ ಯುವಕ ಪವಾಡ ಸದೃಶ್ಯ ರೀತಿಯಲ್ಲಿ ಬದುಕುಳಿದಿದ್ದಾನೆ. ಮೆಕ್ಕಾದಿಂದ ಮದೀನಾಕ್ಕೆ ಹೋಗುತ್ತಿದ್ದ ಬಸ್ ಡೀಸೆಲ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಾಗ ಚಾಲಕನ ಪಕ್ಕದಲ್ಲಿ ಕುಳಿತಿದ್ದ 24 ವರ್ಷದ ಯುವಕ ಮೊಹಮ್ಮದ್ ಅಬ್ದುಲ್ ಶೋಯಾಬ್, ಧಗ ಧಗನೆ ಹೊತ್ತಿ ಉರಿಯುತ್ತಿದ್ದ ಬಸ್‌ನ ಕಿಟಕಿ ಮುರಿದು ಜಂಪ್ ಮಾಡಿ ಪ್ರಾಣ ಉಳಿಸಿಕೊಂಡಿರುವುದಾಗಿ ವರದಿಯಾಗಿದೆ. ಶೋಯಾಬ್ ಹೈದರಾಬಾದ್ ನಿವಾಸಿಯಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ, ಆದರೆ ಅವರ ಸ್ಥಿತಿ ತಿಳಿದಿಲ್ಲ ಎಂದು ಮೂಲಗಳು ತಿಳಿಸಿವೆ.

ಈ ಕುರಿತು ಹೈದರಾಬಾದಿನಲ್ಲಿ ಮಾತನಾಡಿದ ಶೋಯಾಬ್ ಅವರ ಸಂಬಂಧಿ ಮೊಹಮ್ಮದ್ ತೆಹಸೀನ್, ನಮ್ಮ ಕುಟುಂಬದಿಂದ ಏಳು ಮಂದಿ ಕಳೆದ ವಾರ ಸೌದಿ ಅರೇಬಿಯಾಕ್ಕೆ ತೆರಳಿದ್ದರು. ಯುವಕ ಬಸ್‌ನಿಂದ ಜಿಗಿದು ಹೊರಬಂದಿರುವುದಾಗಿ ತಿಳಿದುಬಂದಿದೆ. ಮೃತರ ಪಾರ್ಥಿವ ಶರೀರಗಳನ್ನು ■ 6ನೇ ಪುಟಕ್ಕೆ



## ಸಿಎಂ ಸಿದ್ದರಾಮಯ್ಯ ಪತ್ನಿ ಪಾರ್ವತಿಗೆ ಅನಾರೋಗ್ಯ

### ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲು



ಬೆಂಗಳೂರು, ನ.17– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ಅನಾರೋಗ್ಯದಿಂದ ಬೆಂಗಳೂರಿನ ಶೇಷಾದ್ರಿಪುರದ ಅಪೋಲೋ ಆಸ್ಪತ್ರೆಗೆ ದಾಖಲಾಗಿದ್ದಾರೆ. ಪಾರ್ವತಿಯವರು ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿದ್ದಾರೆ. ಆಸ್ಪತ್ರೆಯ ವೈದ್ಯ ಡಾ.ಬಿಸಿ ಶ್ರೀನಿವಾಸ್ ನೇತೃತ್ವದ ■ 6ನೇ ಪುಟಕ್ಕೆ

## ಬಾಂಗ್ಲಾ ಮಾಜಿ ಪ್ರಧಾನಿ ಶೇಖ್ ಹಸೀನಾಗೆ ಗಲ್ಲು ಶಿಕ್ಷೆ



ಢಾಕಾ: ಮಾನವ ಹಕ್ಕು ಉಲ್ಲಂಘನೆ ಪ್ರಕರಣದಲ್ಲಿ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರನ್ನು ಬಾಂಗ್ಲಾದೇಶದ ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ (ICT-BD) ದೋಷಿ ಎಂದು ತೀರ್ಪು ನೀಡಿದ್ದು ಅವರಿಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶ ನೀಡಿದೆ.

ಬಾಂಗ್ಲಾದೇಶದ ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯ ತ್ರಿಸದಸ್ಯ ನ್ಯಾಯಪೀಠವು ಶೇಖ್ ಹಸೀನಾ ಅವರ ಮೇಲಿರುವ ಆರೋಪ ಸಾಬೀತಾಗಿದೆ ಎಂದು ಪ್ರಕಟಿಸಿದ್ದು ಶೇಖ್ ಹಸೀನಾ ಮಾನವ ಹಕ್ಕುಗಳ ಅಪರಾಧ ಎಸಗಿದ್ದಾರೆ. ಇದು ಗರಿಷ್ಠ ಶಿಕ್ಷೆಗೆ ಅರ್ಹವಾಗಿರುವ ಪ್ರಕರಣ ಎಂದು ತೀರ್ಪಿನಲ್ಲಿ ಉಲ್ಲೇಖಿಸಿದೆ.

ಕಳೆದ ವರ್ಷ ವಿದ್ಯಾರ್ಥಿಗಳ ನೇತೃತ್ವದಲ್ಲಿ ದೇಶಾದ್ಯಂತ ವ್ಯಾಪಕವಾಗಿ ಭುಗಿಲೆದ್ದ ದಂಗೆಗಳ 'ಮಾರಕ ದಮನ'ಕ್ಕೆ ಹಸೀನಾ ನೇರ ಸೂಚನೆ ನೀಡಿದ್ದಾಗಿ ನ್ಯಾಯಾಲಯವು ಹೇಳಿದೆ. ಶೇಖ್ ಹಸೀನಾ ಅವರ ಈ ನಡೆಯಿಂದ ಬಾಂಗ್ಲಾದೇಶದಲ್ಲಿ ಸಾಕಷ್ಟು ಹಿಂಸಾಚಾರ ನಡೆದಿತ್ತು. ನೂರಾರು ಪ್ರಜೆಗಳು ಸಾವನ್ನಪ್ಪಿದ್ದರು. ಈ ಪ್ರಕರಣದಲ್ಲಿ ಶೇಖ್ ಹಸೀನಾರನ್ನು ಪ್ರಮುಖ ಆರೋಪಿಯಾಗಿಸಲಾಗಿತ್ತು. ಈ ಆದೇಶಗಳನ್ನು ಹೊರಡಿಸುವ ಮೂಲಕ ಶೇಖ್ ಹಸೀನಾ ಮತ್ತು ಪೊಲೀಸ್ ಐಜಿ ■ 6ನೇ ಪುಟಕ್ಕೆ

# ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ




ಮೈಸೂರಿನ ಎನ್‌ಟಿಎಂ ಶಾಲೆಯಲ್ಲಿ ಶಿಕ್ಷಕರು–ಪೋಷಕರ ಸಭೆ ಹಾಗೂ ಮಕ್ಕಳ ದಿನಾಚರಣೆಯ ಕಾರ್ಯಕ್ರಮ ನಡೆಯಿತು.

ಮೈಸೂರು,ನ.17–ನಗರದ ಎನ್‌ಟಿಎಂ ಶಾಲೆಯಲ್ಲಿ ಶಿಕ್ಷಕರು–ಪೋಷಕರ ಸಭೆ ಹಾಗೂ ಮಕ್ಕಳ ದಿನಾಚರಣೆಯ ಕಾರ್ಯಕ್ರಮ ನಡೆಯಿತು.

ಈ ವೇಳೆ ಮಾತನಾಡಿದ ಶಾಲೆಯ ಮುಖ್ಯ ಶಿಕ್ಷಕಿ ಬಿ.ಶಾಂತಮ್ಮ, ಪೋಷಕರು ಖಾಸಗಿ ಶಾಲೆಗಳ ವ್ಯಾಮೋಹವನ್ನು ಬಿಟ್ಟು ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸುವ ಕೆಲಸ ಮಾಡಬೇಕು. ಈ ಮೂಲಕ ಸರ್ಕಾರಿ ಶಾಲೆಗಳನ್ನು ಉಳಿಸಲು ಪ್ರತಿಯೊಬ್ಬರೂ ಶ್ರಮಿಸಬೇಕು. ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅನುಕೂಲವಾಗುವ ಎಲ್ಲ ಸೌಲಭ್ಯಗಳನ್ನು ಸರ್ಕಾರ ನೀಡುತ್ತಿದೆ. ಖಾಸಗಿ ಶಾಲೆಗಳಿಗೆ ದುಬಾರಿ ಶುಲ್ಕವನ್ನು ನೀಡಿ ಪೋಷಕರು ಸಾಲದ ಸುಳಿಗೆ ಸಿಲುಕಬಾರದು. ಸರ್ಕಾರಿ ಶಾಲೆಗಳಲ್ಲಿ ಓದಿದ ಅನೇಕರು ಇಂದು ಉನ್ನತ ಹುದ್ದೆಗಳನ್ನು ಅಲಂಕರಿಸಿ ಸೇವೆ ಸಲ್ಲಿಸುತ್ತಿದಾರೆ. ಸರ್ಕಾರಿ ಶಾಲೆಗಳು ಇಂದು ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಕಡಿಮೆ ಇಲ್ಲ ಎಂಬಂತೆ ಫಲಿತಾಂಶವನ್ನು ತಂದುಕೊಡುವ ಕೆಲಸ ಮಾಡುತ್ತಿವೆ. ಮಕ್ಕಳ ಕಲಿಕೆಗೆ ಪೂರಕ ವಾತಾವರಣವನ್ನು ಕಲ್ಪಿಸಿಕೊಡುತ್ತದೆ ಎಂದರು.

ಶಾಲಾ ದಾಖಲಾತಿ ಆಂದೋಲನ, ಸರ್ಕಾರಿ ಶಾಲಾ ಸೌಲಭ್ಯಗಳು, ವಿಶೇಷ ಚೇತನ ಮಕ್ಕಳಿಗಿರುವ ಸೌಲಭ್ಯ, ಮಕ್ಕಳ ಹಕ್ಕುಗಳ ರಕ್ಷಣೆ, ಪೋಕ್ಸೋ ಕಾಯ್ದೆ ಬಗ್ಗೆ ತಿಳಿಸಿಕೊಟ್ಟರು. ಎಸ್‌ಡಿಎಂಸಿ ಅಧ್ಯಕ್ಷೆ ಶೋಭಾ, ಬಿಆರ್‌ಪಿ ಡಾ.ವಿಜಯಕುಮಾರ್, ಬಿಐ ಮಂಜುನಾಥ್, ಶಿಕ್ಷಕಿ ಸಮಿನ, ಪೋಷಕರು, ಮಕ್ಕಳು ಹಾಜರಿದ್ದರು.

# ಜ್ಞಾನಪೀಠ ಪುರಸ್ಕೃತರ ಸ್ಮರಣೆ ಮೂಲಕ ಕನ್ನಡ ರಾಜ್ಯೋತ್ಸವ



ಸಿದ್ಧಾರ್ಥನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮೈಸೂರು,17(ಎಂಕೆ)–ಮೈಸೂರು ಸಿದ್ಧಾರ್ಥನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾವಿರಾರು ಕನ್ನಡ ಪುಸ್ತಕಗಳ ಪ್ರದರ್ಶನದೊಂದಿಗೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಸಾಧನೆಯನ್ನು ಮೆಲುಕು ಹಾಕುವ ಮೂಲಕ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಜ್ಞಾನಪೀಠ ಪುರಸ್ಕೃತರು ಸೇರಿದಂತೆ ನಾಡಿನ ಪ್ರಖ್ಯಾತ ಸಾಹಿತಿಗಳ ಬಗ್ಗೆ ಅಧ್ಯಯನ ನಡೆಸಿ ಮಾಹಿತಿ ಹಂಚಿಕೊಂಡ ಕಾಲೇಜು ವಿದ್ಯಾರ್ಥಿಗಳು, ಮೂರು ಸಾವಿರಕ್ಕೂ ಹೆಚ್ಚು ಕನ್ನಡ ಪುಸ್ತಕಗಳನ್ನು ಪ್ರದರ್ಶನ ಮಾಡುವ ಮೂಲಕ ಕನ್ನಡಾಭಿಮಾನ ಮೆರೆದರು.

ವಿದ್ಯಾರ್ಥಿ ಸಂತೋಷ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರಗಳನ್ನು ಬಿಡಿಸಿ ಪ್ರದರ್ಶಿಸಿದರೆ, ವಿದ್ಯಾರ್ಥಿಗಳಾದ ಯೋಗೇಶ್(ಕವಿರಾಜ ಮಾರ್ಗ), ಅನಂತ್(ರನ್ನ), ಚೇತನ್(ಬಸವಣ್ಣ), ಉಲ್ಲಾಸ್ (ಅಕ್ಕಮಹಾದೇವಿ), ನಟರಾಜ್(ದ.ರಾ.ಬೇಂದ್ರೆ), ಶರತ್‌ಕುಮಾರ್ (ಮಾಸ್ತಿ ವೆಂಕಟೇಶ್ ಅಯ್ಯಂಗಾರ್), ಗೌತಮ್ (ಗಿರೀಶ್ ಕಾರ್ನಾಡ್), ಎಸ್.ಗಣೇಶ್ (ಕೆ.ಶಿವರಾಮ ಕಾರಂತ) ಮಾನ್ಯಾ (ಸಾರಾ ಅಬೂಬಕರ್), ಮನೋಜ್ (ಕನ್ನಡ ಲಿಪಿ ವಿಕಾಸ) ಕನ್ನಡದ ಖ್ಯಾತ ಸಾಹಿತಿಗಳು ಹಾಗೂ ಕನ್ನಡ ಭಾಷೆಯ ಕುರಿತಾದ ಭಿತ್ತಿಪತ್ರಗಳನ್ನು ಪ್ರದರ್ಶನ ಮಾಡುತ್ತಾ ವಿವರಿಸಿದರು.

ನಂತರ ಕಾಲೇಜಿನ ಸಾಂಸ್ಕೃತಿಕ ವೇದಿಕೆಯಲ್ಲಿ ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ರಾಜ್ಯದಲ್ಲಿ ಸಂಪೂರ್ಣ ಆಡಳಿತ ಕನ್ನಡದಲ್ಲಿಯೇ ನಡೆಯಬೇಕು. ಕನ್ನಡಿಗರಿಗೆ ಉದ್ಯೋಗವಕಾಶಗಳು ಸಿಗಬೇಕು. ಕನ್ನಡಕ್ಕೆ ದೊರೆತಿರುವ ಶಾಸ್ತ್ರೀಯ ಭಾಷಾ ಸ್ಥಾನಮಾನದ ಸದುಪಯೋಗ ಆಗಬೇಕು ಎಂದು ಆಶಿಸಿದರು.

ಕಾಲೇಜು ಪ್ರಾಂಶುಪಾಲರಾದ ಪ್ರೊ.ಎನ್. ಮಾಯಾದೇವಿ ಮಾತನಾಡಿ, ಕನ್ನಡ ಹಬ್ಬವನ್ನು ಆಚರಿಸುವ ಮೂಲಕ ಮಾತೃಭಾಷೆಯ ಹಿರಿಮೆ–ಗರಿಮೆ ಸಾರುವುದರ ಜೊತೆಗೆ ಕನ್ನಡ ಭಾಷಾ ಸಾಹಿತ್ಯ ಮತ್ತು ಅದರ ಶ್ರೀಮಂತಿಕೆಗೆ ಕೊಡುಗೆ ನೀಡಿದ ರಾಜರು, ಕವಿಗಳು, ವಚನಕಾರರು, ದಾಸರು, ಆಡಳಿತಗಾರರು, ಹೋರಾಟಗಾರರನ್ನು ಸ್ಮರಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಕುಮಾರ್ ಬೆಳಲೆ, ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಎನ್.ನರಸಿಂಹಮೂರ್ತಿ, ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪಿ.ಕೆ.ಜವರೇಗೌಡ, ಕನ್ನಡ ವಿಭಾಗದ ಪ್ರಾಧ್ಯಾಪಕಿ ತ್ರಿವೇಣಿ, ಗ್ರಂಥಪಾಲಕ ಡಾ.ಪಿ.ಸಿದ್ದರಾಮು, ಐಕ್ಯುಎಸಿ ಸಂಚಾಲಕಿ ಜೆ.ಪಿ.ಸವಿತಾ, ಸಾಂಸ್ಕೃತಿಕ ಸಮಿತಿ ಕಾರ್ಯದರ್ಶಿ ಕೃಷ್ಣೇಗೌಡ, ಖಜಾಂಚಿ ಬೇಬಿ ಪ್ರೇಮಲತಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಹಿರಿಯರ ಸೇವೆ ದೇವರ ಸೇವೆ...



ಮೈಸೂರಿನ ಕುವೆಂಪುನಗರದ ಎಂ.ಬ್ಲಾಕ್‌ನಲ್ಲಿರುವ ಬೆಳಕು ವಾತ್ಸಲ್ಯಧಾಮದ ಹಿರಿಯ ನಾಗರಿಕರಿಗೆ ಸ್ನೇಹ ಬಳಗದ ವತಿಯಿಂದ ಕಡೇ ಕಾರ್ತಿಕ ಸೋಮವಾರದ ಅಂಗವಾಗಿ ಹೊಸ ಸೀರೆ, ಹಣ್ಣು ಹಂಪಲನ್ನು ವಿತರಿಸಲಾಯಿತು. ರಾಜ್ಯ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ನಿರ್ದೇಶಕ ಎಂ.ಲೋಕೇಶ್ ಕುಮಾರ್(ಮಾದಾಪುರ), ಮೈಸೂರು ನಗರ ಜೆ.ಡಿ.ಎಸ್. ಕಾರ್ಯಾಧ್ಯಕ್ಷ ಎಸ್ ಪ್ರಕಾಶ್ ಪ್ರಿಯಾದರ್ಶನ್, ಶಿಂಷಾ ದಿನೇಶ್, ಮೋಹನ್ ಕುಮಾರ್, ಕಾಳೇಗೌಡ, ರಾಜಶೇಖರ್, ಹಿರಿಯ ಕ್ರೀಡಾಪಟು ಮಹದೇವ್, ಸುಬ್ರಮಣ್ಯ, ರಾಜೇಶ್ ಕುಮಾರ್,ಮಹೇಶ, ಶ್ರೀಧರ್, ದತ್ತ ಇನ್ನಿತರರು ಉಪಸ್ಥಿತರಿದ್ದರು.

## ಅಜಯ್ ಪೃಥ್ವಿರಾಜ್ ಓಟ ಸ್ಪರ್ಧೆಯಲ್ಲಿ ಸಾಧನೆ



ಮೈಸೂರು,ನ.17–ಶನಿವಾರ ಇಲ್ಲಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಶಾಲಾ ಕ್ರೀಡಾ ಸ್ಪರ್ಧೆಯ ವಿವಿಧ ಓಟದ ವಿಭಾಗಗಳಲ್ಲಿ ಸ್ಪರ್ಧಿಸಿದ್ದ ಮೈಸೂರಿನ ಅಜಯ್ ಪೃಥ್ವಿರಾಜ್ ಎಂ.ಎಲ್. ಪ್ರಥಮ ಸ್ಥಾನ ಗಳಿಸಿ, ಜಯಗಳಿಸುವ ಮೂಲಕ ಸಾಧನೆಗೈದಿದ್ದಾನೆ.

400 ಮೀಟರ್, 800 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ, 4X400 ವಿಭಾಗದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದು ಒಟ್ಟು ನಾಲ್ಕೂ ವಿಭಾಗ ಗಳಲ್ಲಿ ಪಾರಿತೋಷಕ ಮತ್ತು ಬಹುಮಾನ ಪಡೆದಿದ್ದಾರೆ. ಈ ಹಿಂದೆಯೂ ಹಲವಾರು ಸ್ಪರ್ಧೆಗಳಲ್ಲಿ ಅಜಯ್ ಪೃಥ್ವಿರಾಜ್ ಪ್ರಥಮ ಸ್ಥಾನ ಗಳಿಸಿ ವಿಜೇತನಾಗಿದ್ದಾನೆ.

ಈತ ಮೈಸೂರಿನ ಐಡಿಎಲ್ ಜಾವಾ ರೊಟರಿ ಶಾಲೆಯ ವಿದ್ಯಾರ್ಥಿ ಹಾಗೂ ನಗರದ ಎಂ.ಎಲ್.ರಾಜು (ರಾಜ್ ಬ್ಯಾಗ್ಸ್) ಮತ್ತು ಸಂಗೀತ ದಂಪತಿ ಪುತ್ರ.

ಜಿಲ್ಲಾಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಉಪ ನಿರ್ದೇಶಕರು (ಆಡಳಿತ)ರವರ ಕಚೇರಿ, ಮೈಸೂರು ದೈಹಿಕ ಶಿಕ್ಷಣ ವಿಭಾಗ, ಜಿಲ್ಲಾ ವಿದ್ಯಾರ್ಥಿ ಕ್ರೀಡಾನಿಧಿ ಮತ್ತು ಜಿಲ್ಲಾ ಮಟ್ಟದ ಕ್ರೀಡಾಕೂಟ ಅನುಷ್ಠಾನ ಸಮಿತಿ ಸಂಯೋಜಕತ್ವದಲ್ಲಿ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

## 6 ವರ್ಷಗಳ ನಂತರ ಭಾರತ–ಚೀನಾ ನಡುವೆ ಏರ್ ಇಂಡಿಯಾ ವಿಮಾನ ಸೇವೆ ಪುನರಾರಂಭ



**ನವದೆಹಲಿ:** ಏರ್ ಇಂಡಿಯಾ ಫೆಬ್ರವರಿ 1, 2026ರಿಂದ ದೆಹಲಿ ಮತ್ತು ಶಾಂಘೈ ನಡುವೆ ತನ್ನ ತಡೆ ರಹಿತ ವಿಮಾನ ಸೇವೆಯನ್ನು ಪುನರಾರಂಭಿಸುವುದಾಗಿ ಸೋಮವಾರ ಘೋಷಿಸಿದೆ. ಸುಮಾರು 6 ವರ್ಷಗಳ ನಂತರ ಏರ್ ಇಂಡಿಯಾ ಚೀನಾಗೆ ವಿಮಾನ ಸೇವೆ ಪುನರಾರಂಭಿಸುತ್ತಿದೆ.

ಏರ್ ಇಂಡಿಯಾ ಮುಂದಿನ ವರ್ಷ ಮುಂಬೈ ಮತ್ತು ಶಾಂಘೈ ನಡುವೆ ತಡೆರಹಿತ ವಿಮಾನಗಳನ್ನು ಪರಿಚಯಿಸಲು ಉದ್ದೇಶಿಸಿದೆ. ಇದು ನಿಯಂತ್ರಕ ಅನುಮೋದನೆಗಳಿಗೆ ಒಳಪಟ್ಟಿರುತ್ತದೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ. ಏರ್ ಇಂಡಿಯಾ ತನ್ನ ಅವಳಿ–ಹಜಾರ ಬೋಯಿಂಗ್ 787–8 ವಿಮಾನ ಬಳಸಿಕೊಂಡು ದೆಹಲಿ ಮತ್ತು ಶಾಂಘೈ ನಡುವೆ ವಾರಕ್ಕೆ 4 ಬಾರಿ ಕಾರ್ಯನಿರ್ವಹಿಸಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಇದು ಬಿಸಿನೆಸ್ ಕ್ಲಾಸ್‌ನಲ್ಲಿ 18 ಫ್ಲಾಟ್ ಬೆಡ್‌ಗಳು ಮತ್ತು ಎಕಾನಮಿ ಕ್ಲಾಸ್‌ನಲ್ಲಿ 238 ವಿಶಾಲವಾದ ಆಸನಗಳನ್ನು ಒಳಗೊಂಡಿದೆ. 2020ರ ಆರಂಭದಲ್ಲಿ ಸ್ಥಗಿತಗೊಂಡಿದ್ದ ವಾಯು ಸಂಪರ್ಕಗಳನ್ನು ಪುನಃ ಸ್ಥಾಪಿಸಿದ ಇತ್ತೀಚಿನ ಭಾರತ–ಚೀನಾ ರಾಜತಾಂತ್ರಿಕ ಒಪ್ಪಂದಗಳನ್ನು ಅನುಸರಿಸಿ ಏರ್ ಇಂಡಿಯಾ, ಶಾಂಘೈಗೆ ವಿಮಾನ ಸೇವೆ ಮರುಸ್ಥಾಪಿಸಿದೆ. ಏರ್ ಇಂಡಿಯಾ ಮೊದಲು ಅಕ್ಟೋಬರ್ 2000ರಲ್ಲಿ ಚೀನಾ ಮುಖ್ಯ ಭೂಭಾಗಕ್ಕೆ ತಡೆರಹಿತ ಸೇವೆಗಳನ್ನು ಆರಂಭಿಸಿತ್ತು.

## ಕನ್ನಡ ರಾಜ್ಯೋತ್ಸವ...



ಮೈಸೂರಿನ ಟಿ.ಕೆ.ಲೇಔಟ್‌ನಲ್ಲಿರುವ ಮಿತ್ರ ಹಿಂದಿ ವಿದ್ಯಾಲಯದ ವತಿಯಿಂದ ಕನ್ನಡ ರಾಜ್ಯೋತ್ಸವ, ಮಕ್ಕಳ ದಿನಾಚರಣೆ ಅಂಗವಾಗಿ ವಿವಿಧ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿಜೇತರರಿಗೆ ಪೀರಪ್ಪ, ಶ್ರೀನಿವಾಸ್ ಬಹುಮಾನ ವಿತರಣೆ ಮಾಡಿದರು. ವಿದ್ಯಾಲಯದ ರಘುವೀರ್, ಬಡಾವಣೆಯ ನಿವಾಸಿಗಳು ಹಾಗೂ ಮಕ್ಕಳು ಭಾಗವಹಿಸಿದ್ದರು.

## ಡಾ.ಪುನೀತ್ ರಾಜ್‌ಕುಮಾರ್ ಸಂಸ್ಮರಣಾ ಸೇವಾ ರಥಕ್ಕೆ ಚಾಲನೆ



ಡಾ.ಪುನೀತ್ ರಾಜ್‌ಕುಮಾರ್ ಸಂಸ್ಮರಣಾ ಸೇವಾ ರಥಕ್ಕೆ ಸಂಸದ ಯದುವೀರ್ ಒಡೆಯರ್ ಚಾಲನೆ ನೀಡಿದರು.

ಮೈಸೂರು,ನ.17–ಕರ್ನಾಟಕದಿಂದ ಕೇರಳ ರಾಜ್ಯಕ್ಕೆ ತೆರಳುವ ಶಬರಿಮಲೆ ಅಯ್ಯಪ್ಪ ಸ್ವಾಮಿ ಭಕ್ತರಿಗಾಗಿ, ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲೂಕಿನ ಚಿಕ್ಕಕೊಪ್ಪಲು ಗ್ರಾಮದ ಪುನೀತ್ ಅಭಿಮಾನಿ ಬಳಗದ ವತಿಯಿಂದ ಶಬರಿಮಲೆಯಲ್ಲಿ ಕಾಣೆಯಾದವರು, ಅನಾರೋಗ್ಯಕ್ಕೆ ತುತ್ತಾದವರು ಹಾಗೂ ವಾಹನ ತೊಂದರೆಗೀಡಾದವರ ಸಹಾಯಕ್ಕಾಗಿ ಡಾ.ಪುನೀತ್ ರಾಜ್‌ಕುಮಾರ್ ಸಂಸ್ಮರಣಾ ಸೇವಾ ರಥಕ್ಕೆ ಚಾಲನೆ ನೀಡಲಾಯಿತು.

ಆಂಬುಲೆನ್ಸ್‌ಗೆ ಮೈಸೂರಿನ ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂದೆ ವಿಶೇಷ ಪೂಜೆ ಸಲ್ಲಿಸಲಾಯಿತು. ಕನ್ನಡದ ಬಾವುಟ ತೋರಿಸುವ ಮೂಲಕ ವಿಶೇಷ ಆಂಬುಲೆನ್ಸ್‌ಗೆ ಸಂಸದ ಯದುವೀರ್ ಒಡೆಯರ್ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಪ್ರತಿ ವರ್ಷ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಕೇರಳದ ಅಯ್ಯಪ್ಪನ ಸನ್ನಿಧಿಗೆ ಕರ್ನಾಟಕ ರಾಜ್ಯ ಸೇರಿ ದೇಶಾದ್ಯಂತ ಕೋಟ್ಯಾಂತರ ಭಕ್ತರು ಬರುತ್ತಾರೆ. ಅಂತಹ ಸಂದರ್ಭದಲ್ಲಿ ವ್ಯತಿರಿಕ್ತ ವಾತಾವರಣದಿಂದಾಗಿ ಕೆಲವರಿಗೆ ಅನಾರೋಗ್ಯದ ಸಮಸ್ಯೆ ಕಾಡುತ್ತದೆ. ಕೆಲವು ಮಕ್ಕಳು ಹಾಗೂ ವಯಸ್ಸಾದವರೂ ಕೂಡ ಕಾಣೆಯಾಗುತ್ತಾರೆ. ವಾಹನಗಳು ಕೂಡ ಕೆಟ್ಟು ನಿಲ್ಲುತ್ತವೆ. ಇಂತಹ ಸಂದರ್ಭದಲ್ಲಿ ಅವರ ಅನುಕೂಲಕ್ಕಾಗಿ ಉಚಿತವಾಗಿ ಸೇವೆ ನೀಡಲು ಮುಂದಾಗಿರುವ ಕೆಆರ್ ನಗರ ತಾಲೂಕಿನ ಚಿಕ್ಕ ಕೊಪ್ಪಲು ಗ್ರಾಮದ ಡಿ.ಪುನೀತ್ ಮತ್ತು ಅವರ ಅಭಿಮಾನಿ ಬಳಗದ ವತಿಯಿಂದ ಈ ರೀತಿಯ ಒಳ್ಳೆಯ ಕೆಲಸ ಮಾಡಿರುವುದು ನಿಜಕ್ಕೂ ಶ್ಲಾಘನೀಯ. ಎರಡು ಟೋಲ್ ಫ್ರೀ ನಂಬರ್ ನೀಡಿದ್ದು ಅದರ ಮೂಲಕ ಸಮಸ್ಯೆ ಇದ್ದವರು ಈ ವಾಹನವನ್ನು ಸಂಪರ್ಕಿಸಬಹುದು ಎಂದರು.

ಈ ವೇಳೆ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ನಾಗೇಂದ್ರ, ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್‌ಗೌಡ, ಕಿರಣ್‌ಗೌಡ, ಬಿ.ಎಂ.ರಘು, ದಿ ಪುನೀತ್ ಅಭಿಮಾನಿ ಬಳಗದ ಸದಸ್ಯರಾದ ಪುಟ್ಟುಬುದ್ಧಿ, ರವಿ ಬೆಳ್ಳಯ್ಯ, ಗಜೇಂದ್ರ, ರಾಮು, ಮಂಜುನಾಥ್, ಅನಿಲ್, ಅರ್ಜುನ್, ಕಿರಣ್, ಪವನ್, ಶರತ್, ರಾಮಣ್ಣ, ಸೋಮು, ಮಂಜು ಸೇರಿದಂತೆ ಹಲವರು ಉಪಸ್ಥಿತರಿದ್ದರು. ಸಹಾಯವಾಣಿ ಸಂಖ್ಯೆ: 8277536622, 9845230909.

## ಇಂದು ಸಾಧಕರಿಗೆ ಬಸವಶ್ರೀ ಪ್ರಶಸ್ತಿ ಪ್ರದಾನ





ಡಾ.ಎಂ.ಜಿ.ಆರ್.ಅರಸ್ ಡಾ.ಲೋಕೇಶಪ್ಪ

ಮೈಸೂರು, ನ. 17–ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ ವತಿಯಿಂದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ 110ನೇ ಹುಟ್ಟುಹಬ್ಬ ಮತ್ತು ಸಾಧಕರಿಗೆ ಬಸವಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜೆಎಸ್‌ಎಸ್ ಮಹಿಳಾ ಕಾಲೇಜಿನ ಮಂತ್ರ ಮಹರ್ಷಿ ಸಭಾ ಭವನದಲ್ಲಿ ನಾಳೆ (ನ.18) ಸಂಜೆ 5 ಗಂಟೆಗೆ ಏರ್ಪಡಿಸಲಾಗಿದೆ. ಸಾನ್ನಿಧ್ಯವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದು, ಅಧ್ಯಕ್ಷತೆಯನ್ನು ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ ಅಧ್ಯಕ್ಷೆ ಡಾ.ರತ್ನ ಹಾಲಪ್ಪಗೌಡ ವಹಿಸುವರು.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ನಿರ್ದೇಶಕಿ ಡಾ.ಲೀಲಾ ಪ್ರಕಾಶ್ ಭಾಗವಹಿಸುವರು. ಯುಗಾಚಾರ್ಯ ಡಾ.ಎಂ.ಜಿ.ಆರ್. ಅರಸ್, ಗಾನಯೋಗಿ ಕಲಾ ಟ್ರಸ್ಟಿನ ಅಧ್ಯಕ್ಷ ಡಾ.ಹೆಚ್.ಎನ್. ಲೋಕೇಶಪ್ಪ ಅವರಿಗೆ ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಗಾನ ಕೋಕಿಲ ಡಾ.ವಿ.ಮಾಲಿನಿ ಅವರಿಂದ ವಚನ ಗಾಯನ ಏರ್ಪಡಿಸಲಾಗಿದೆ.

## ಧ್ವಜಾರೋಹಣ...




ಅಖಿಲ ಭಾರತ 72ನೇ ಸಹಕಾರಿ ಸಪ್ತಾಹದ ಅಂಗವಾಗಿ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ಮುಖ್ಯ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಿತು. ಈ ವೇಳೆ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಎ.ಮಂಚಪ್ಪ, ಪಡುವಾರಹಳ್ಳಿ ಎಂ.ರಾಮಕೃಷ್ಣ, ಹೆಚ್.ಹರೀಶ್‌ಕುಮಾರ್, ಎನ್.ಯೋಗಾನಂದ್, ಆರ್.ಸೋಮಣ್ಣ, ವಸಂತ ಮುನೀಷ್, ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ ಇದ್ದರು.

## ಮಹಾರಾಜ ಕಾಲೇಜು ನಿವೃತ್ತ ಉಪ ಪ್ರಾಂಶುಪಾಲ ಎಂ.ಆರ್.ಸುರೇಶ್ ನಿಧನ




ಮೈಸೂರು, ನ. 17–ಮೈಸೂರು ಮಹಾರಾಜ ಜೂನಿಯರ್ ಕಾಲೇಜಿನ ನಿವೃತ್ತ ಉಪ ಪ್ರಾಂಶುಪಾಲರು ಹಾಗೂ ಗೋಕುಲಂ 2ನೇ ಹಂತದ ನಿವಾಸಿ ಎಂ.ಆರ್.ಸುರೇಶ್ (82) ನ.15ರಂದು ನಿಧನರಾದರು. ಮೂಲತಃ ಕೊಡಗಿನವರಾದ ಇವರು, ಪತ್ನಿ ನಾಗರತ್ನ ಸುರೇಶ್, ಪುತ್ರ ದೀಪಕ್ ಸುರೇಶ್, ಪುತ್ರಿ ಕಿರಣ ಶೇಖರ್ ಸೇರಿದಂತೆ ಅಪಾರ ಬಂಧು ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿಗೆ ಭಾನುವಾರ ದಾನ ಮಾಡಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಶ್ರೀಧರ್ ಜೋಶಿ



ಮೈಸೂರು, ನ.17– ಮೈಸೂರಿನ ಗೋಕುಲಂ ನಿವಾಸಿ ಶ್ರೀಧರ್ ಜೋಶಿ (84) ಅವರು ಇಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ರೈಲ್ವೆ ಶ್ರೀನಿವಾಸ್



ಮೈಸೂರು, ನ.17– ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕ ಎಸ್.ಅರವಿಂದ ಅವರ ತಂದೆ ರೈಲ್ವೆ ಶ್ರೀನಿವಾಸ್(74) ಇಂದು ನಿಧನರಾದರು.

ಮೃತರು ಪತ್ನಿ ಭುವನೇಶ್ವರಿ, ಪುತ್ರ ಅರವಿಂದ್, ಸೊಸೆ ಶಿಲ್ಪಾ, ಪುತ್ರಿ ಅರ್ಚನಾ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಮಂಗಳವಾರ) ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

18.11.2025 ಮಂಗಳವಾರ, ಮಳೆ ನಕ್ಷತ್ರ: ವಿಶಾಖ, 6.11.2025 ರಿಂದ 19.11.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

- **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ ಕಾರ್ಯಕ್ರಮ. ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ.
- **ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ :** ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ, ಕಾಳಿದಾಸ ರಸ್ತೆ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಿಸಿಓಡಿ ಮತ್ತು ಮಕ್ಕಳಲ್ಲಿ ಕಂಡು ಬರುವ ಚರ್ಮರೋಗಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸೆ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10ರಿಂದ.
- **ಆಯುಷ್ ಇಲಾಖೆ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯ :** 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಪ್ರಯುಕ್ತ ಟೆಕ್ನೋ ಆಯುರ್ವೇದ ಉದ್ಘಾಟನಾ ಸಮಾರಂಭ, ಅತಿಥಿಗಳು : ಆಯುಷ್ ನಿರ್ದೇಶನಾಲಯ ಆಯುಕ್ತ ವಿಪಿನ್ ಸಿಂಗ್, ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ, ಬೆಳಗಾವಿ ಕುಲಸಚಿವ ಡಾ. ಎಸ್. ವಿದ್ಯಾಶಂಕರ್, ಆಯುಷ್ ಉಪನಿರ್ದೇಶಕ ಡಾ. ಎ. ರಘು, ನಿರ್ದೇಶಕ ಡಾ. ಶ್ರೀಕಾಂತ್ ಬಾಬು ಪೆರುಗು, ಉಪನಿರ್ದೇಶಕ ಡಾ. ಶ್ರೀಕಾಂತ್, ನಿವೃತ್ತ ನಿರ್ದೇಶಕ ಡಾ. ರಾಘವೇಂದ್ರರಾವ್, ಡಾ. ಹೃಷಿಕೇಶ್ ಡಾಮ್ಲೆ, ಡಾ. ಲಕ್ಷ್ಮೀನಾರಾಯಣ ಶೆಣೈ, ಸ್ಥಳ: ವಿವಿಸಿಇ ಸೆಮಿನಾರ್ ಹಾಲ್, ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯ, ಬೆಳಗ್ಗೆ 10 ರಿಂದ.
- **ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪ್ರವಚನ: ಪಂಡಿತ್ ವ್ಯಾಸತೀರ್ಥಚಾರ್ಯ ಅವರಿಂದ. ವಿಷಯ: 'ಮಹಾಭಾರತ ತಾತ್ಪರ್ಯ ನಿರ್ಣಯ'. ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ. ಸಂಜೆ 5 ಗಂಟೆಗೆ.
- **ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜ :** ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ 110ನೇ ಹುಟ್ಟುಹಬ್ಬ ಮತ್ತು ಸಾಧಕರಿಗೆ ಬಸವಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ ಅಧ್ಯಕ್ಷೆ ಡಾ. ರತ್ನ ಹಾಲಪ್ಪಗೌಡ, ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಅವರಿಂದ ಉಪನ್ಯಾಸ, ಮುಖ್ಯ ಅತಿಥಿಗಳು: ಡಾ. ಕೆ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ನಿರ್ದೇಶಕರಾದ ಡಾ. ಲೀಲಾ ಪ್ರಕಾಶ್, ಬಸವಶ್ರೀ ಪ್ರಶಸ್ತಿಗೆ ಭಾಜನರು : ಯುಗಾಚಾರ್ಯ ಡಾ. ಎಂ.ಜಿ.ಆರ್. ಅರಸ್, ಗಾನಯೋಗಿ ಕಲಾ ಟ್ರಸ್ಟಿನ ಅಧ್ಯಕ್ಷ ಡಾ. ಹೆಚ್.ಎನ್. ಲೋಕೇಶಪ್ಪ, ಗಾನ ಕೋಕಿಲ ಡಾ. ವಿ. ಮಾಲಿನಿ ಅವರಿಂದ ವಚನ ಗಾಯನ, ಸ್ಥಳ: ಜೆಎಸ್‌ಎಸ್ ಮಹಿಳಾ ಕಾಲೇಜಿನ ಮಂತ್ರ ಮಹರ್ಷಿ ಸಭಾ ಭವನ, ಸಂಜೆ 5ಕ್ಕೆ.
- **ಶ್ರೀ ರಾಗ ಸಂಗಮ :** ತಂಡದ ದ್ವಿತೀಯ ಪ್ರಸ್ತುತಿ ರಾಜನ್–ನಾಗೇಂದ್ರ ಸಂಗೀತ ಸಂಯೋಜನೆಯ ಮಾಧುರ್ಯ ಸಂಭ್ರಮ ಮಧುರ ಕನ್ನಡ ಚಲನಚಿತ್ರ ಗೀತೆಗಳ ಸಂಗಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5.30 ರಿಂದ.


### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ, ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಜಯಂತಿ ವಿ. ಭಟ್ ಹಾಗೂ ಕೆ.ಪಿ. ರೇವತಿ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು. ಮುಕ್ತವಾಣಿ, ಪ್ರಾಯೋಜಕರು : ಪ್ರಸಾರಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರವೇಶಾತಿ ಹಾಗೂ ಶಿಕ್ಷಣ ಕುರಿತು ಕುಲಸಚಿವರಾದ ಪ್ರೊ. ಎಸ್.ಕೆ. ನವೀನ್ ಕುಮಾರ್ ಅವರೊಂದಿಗಿನ ಸಂವಾದದ ಮೊದಲ ಭಾಗ. ಪ್ರಸ್ತುತಿ : ಎನ್.ಕೇಶವಮೂರ್ತಿ, 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು – ವಿಶೇಷ ಕಾರ್ಯಕ್ರಮ ಸರಣಿ– ಹಿರಿಯ ರೇಡಿಯೋ ಕೇಳುಗರಾದ ಎ.ಡಿ. ನಂಜುಂಡಸ್ವಾಮಿ ಅವರೊಂದಿಗಿನ ಸಂವಾದ, ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್ .ಬಿ., 9.00 ಕರೆಗೊಂದು ಗೀತೆ– ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಸಿ.ಎಸ್. ಕೇಶವಚಂದ್ರ – ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ–ವಚನ ಸಾಹಿತ್ಯದಲ್ಲಿ ಆರ್ಥಿಕ ಚಿಂತನೆ ಕುರಿತು ಮಾತನಾಡುತ್ತಾರೆ ನಂಜನಗೂಡು ಜೆಎಸ್‌ಎಸ್ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕರಾದ ಕೊತ್ತಲವಾಡಿ ಶಿವಕುಮಾರ್, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಕುರಿತು ಸರಣಿ, 1.20 ಭಾವಗೀತೆಗಳು–ರಮೇಶ್ ಚಂದ್ರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎಲ್. ವಸಂತ ಕುಮಾರಿ – ಹಾಡುಗಾರಿಕೆ, 4.00 ಕಥಾಕಾಲಕ್ಷೇಪ, ವಾಲಿ ಮೋಕ್ಷ, ಪ್ರಸ್ತುತಿ–ಸಂತ ಕೇಶವದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮೀನು ಕೃಷಿಯ ಆರ್ಥಿಕತೆ ಮತ್ತು ಜವಾಬ್ದಾರಿಯುತ ನದಿ ಮೀನುಗಾರಿಕೆ ಈ ಕುರಿತು ಚಾಮರಾಜನಗರ ಜಿಲ್ಲಾ ಮೀನುಗಾರಿಕಾ ಇಲಾಖೆಯ ಉಪನಿರ್ದೇಶಕರಾದ ಎಂ.ಎಸ್. ಮಂಜೇಶ್ವರ ಅವರೊಂದಿಗೆ ಸಂದರ್ಶನ, ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್, ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ಬಿ. ದಿಗ್ವಿಜಯ್, 8.00 ಆಕಾಶವಾಣಿಗೆ 90 ಸಿನಿತಾರೆಯರ ನುಡಿಮುತ್ತು, ಪ್ರಸ್ತುತಿ–ಶ್ರೀಮಾನ್.ಎಸ್., 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಯು. ಶ್ರೀನಿವಾಸ್ ಮತ್ತು ರಾಜೇಶ್.ಯು–ಯುಗಳ ಮ್ಯಾಂಡೋಲಿನ್ ವಾದನ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

# ಚಾಮುಂಡಿಬೆಟ್ಟದ ನಂದಿಗೆ ಮಹಾಭಿಷೇಕ



ನಂದಿಗೆ ಹಾಲು, ಮೊಸರು, ಚಂದನ, ಅರಿಶಿಣ, ಕುಂಕುಮ ಸೇರಿದಂತೆ ವಿವಿಧ ದ್ರವ್ಯಗಳಿಂದ ಮಹಾಭಿಷೇಕ ಮಾಡಲಾಯಿತು



ಚಾಮುಂಡಿಬೆಟ್ಟದ ನಂದಿ ಮೂರ್ತಿಗೆ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ವತಿಯಿಂದ ಮಹಾಭಿಷೇಕ ನೆರವೇರಿಸಲಾಯಿತು.

ಮೈಸೂರು,ನ.17(ಎಂಟಿವೈ)– ಕಾರ್ತಿಕ ಮಾಸದ ಕೊನೆ ಸೋಮವಾರವಾದ ಇಂದು ಚಾಮುಂಡಿಬೆಟ್ಟದ ನಂದಿ ಮೂರ್ತಿಗೆ ಹಾಲು–ಮೊಸರು ಸೇರಿದಂತೆ 32 ಬಗೆಯ ದ್ರವ್ಯಗಳಿಂದ ಶಾಸ್ತ್ರೋಕ್ತವಾಗಿ ಮಹಾಭಿಷೇಕ ನೆರವೇರಿಸಲಾಯಿತು.

ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ಸೋಮವಾರ ಆಯೋಜಿಸಿದ್ದ 20ನೇ ವರ್ಷದ ಮಹಾಭಿಷೇಕ ಹಾಗೂ ವಿಶೇಷ ಪೂಜಾ ಮಹೋತ್ಸವದಲ್ಲಿ ನೂರಾರು ಭಕ್ತರು ಪಾಲ್ಗೊಂಡು, ಬೆಟ್ಟದ ನಂದಿಯನ್ನು ಭಕ್ತಿ–ಭಾವದಿಂದ ಆರಾಧಿಸಿದರು.

ವೇದ, ಮಂತ್ರ ಪಠಣದೊಂದಿಗೆ ಆರಂಭವಾದ ಮಹಾಭಿಷೇಕಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ನಂದಿ ಮೂರ್ತಿಗೆ ಧಾರ್ಮಿಕ ಕಾರ್ಯಕ್ಕೆ ಚಾಲನೆ ನೀಡಿದರು. ಬಳಿಕ ರೂಢಿಗತವಾಗಿ ಒಂದಾದ ಮೇಲೆ ಒಂದರಂತೆ 32 ಬಗೆಯ ದ್ರವ್ಯ, ಬಗೆ ಬಗೆಯ ಹೂವು, ಹಣ್ಣುಗಳಿಂದ ಅಭಿಷೇಕ ನೆರವೇರಿತು.


**ವಿವಿಧ ಬಗೆಯ ಮಹಾಭಿಷೇಕ:** ಬೆಳಗ್ಗೆ 250 ಲೀಟರ್ ಹಾಲು, 250 ಲೀಟರ್ ಮೊಸರಿನ ಅಭಿಷೇಕ, ಅಲ್ಲದೆ, ಪಾದ್ಯ, ಅರ್ಘ್ಯ, ಅಚಮನ, ಮದುಪರ್ಕ, ತುಪ್ಪ, ಜೇನುತುಪ್ಪ, ಸಕ್ಕರೆ, ಬಾಳೆಹಣ್ಣು, ದ್ರಾಕ್ಷಿ, ಬೇಲದಹಣ್ಣು, ಖರ್ಜೂರ, ಸೌತೇಕಾಯಿ, ಕಬ್ಬಿನ ಹಾಲು, ಎಳನೀರು, ನಿಂಬೆಹಣ್ಣಿನ ರಸ, ತೈಲ(ಎಳ್ಳೆಣ್ಣೆ), ಪಾಯಸ, ಗೋಧಿ ಹಿಟ್ಟು, ಕಡಲೆಹಿಟ್ಟು, ಹೆಸರುಕಾಳಿನ ಹಿಟ್ಟು, ದರ್ಬೆ, ಅರಿಶಿನ, ಕುಂಕುಮ, ಸಿಂಧೂರ, ರಕ್ತಚಂದನ, ಭಸ್ಮ, ಗಂಧ, ವಿವಿಧ ಪತ್ರೆ ಪುಷ್ಪ, ಸುವರ್ಣನಾಣ್ಯ, ಪಂಚಾಮೃತ ಅಭಿಷೇಕ, ಶಾಲ್ಯಾನ್ನ ಅಭಿಷೇಕ, ಉಪಚಾರದ ಅಭಿಷೇಕ ನೆರವೇರಿತು. ಬಳಿಕ ರುದ್ರಾಭಿಷೇಕ, ಸುಗಂಧ ದ್ರವ್ಯ ಅಭಿಷೇಕ ನಂತರ ಪಂಚಕಳಸ ವಿಸರ್ಜಿಸಲಾಯಿತು. ಅಭಿಷೇಕದೊಂದಿಗೆ ಅಷ್ಟೋತ್ತರ ಪೂಜೆ, ನೈವೇದ್ಯ, ಮಹಾಮಂಗಳಾರತಿ ಮೂಲಕ ಸಂಪನ್ನಗೊಂಡಿತು.

**ಭಕ್ತರ ದಂಡು:** ಚಾಮುಂಡಿಬೆಟ್ಟ ವಾಯು ವಿಹಾರಕ್ಕೆ ತೆರಳುವ ಸಮಾನ ಮನಸ್ಕರು, ಬೆಟ್ಟದ ಬಳಗ 2005ರಲ್ಲಿ ಚಾಮುಂಡಿ ಬೆಟ್ಟದ ನಂದಿ ಮೂರ್ತಿಗೆ ಕಾರ್ತಿಕ ಮಾಸದ ಸೋಮವಾರ ಮಹಾಭಿಷೇಕ ಆರಂಭಿಸಿತ್ತು. ಇದೀಗ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್, 20 ವರ್ಷದ ಮಹಾಭಿಷೇಕವನ್ನು ವಿಜೃಂಭಣೆಯಿಂದ ನೆರವೇರಿಸಿತು. ಮಹಾಭಿಷೇಕವನ್ನು ಬೆಟ್ಟ ಹತ್ತುವ ಭಕ್ತರು, ವಾಯು ವಿಹಾರಿಗಳು, ಪ್ರವಾಸಿಗರು, ಬೆಟ್ಟದ ಬಳಗ ಸದಸ್ಯರು, ಅವರ ಕುಟುಂಬಸ್ಥರು ಸೇರಿದಂತೆ ನೂರಾರು ಮಂದಿ ಕಣ್ತುಂಬಿಕೊಂಡರು.

ಈ ಸಂದರ್ಭದಲ್ಲಿ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಎನ್.ಗೋವಿಂದ್, ಖಜಾಂಜಿ ಶಂಕರ್ ಇನ್ನಿತರರು ಉಪಸ್ಥಿತರಿದ್ದರು.

ಸುಳ್ವಾಡಿ ವಿಷಪ್ರಾಶನ ಪ್ರಕರಣ; ಹೈಕೋರ್ಟ್ ಷರತ್ತುಬದ್ಧ ಜಾಮೀನು ಹಿನ್ನೆಲೆ

## ಜೈಲಿನಿಂದ ಪ್ರಮುಖ ಆರೋಪಿ ಇಮ್ಮಡಿ ಮಹದೇವಸ್ವಾಮಿ ಬಿಡುಗಡೆ



ಮೈಸೂರಿನ ಕೇಂದ್ರ ಕಾರಾಗೃಹದಿಂದ ಹೊರಬರುತ್ತಿರುವ ಮಹದೇವಸ್ವಾಮಿ.

ಮೈಸೂರು,ನ.17– ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿದ ಹಿನ್ನೆಲೆಯಲ್ಲಿ ಸುಳ್ವಾಡಿ ವಿಷಪ್ರಾಶನ ಪ್ರಕರಣದ ಪ್ರಮುಖ ಆರೋಪಿ ಇಮ್ಮಡಿ ಮಹದೇವಸ್ವಾಮಿ ಮೈಸೂರು ಕೇಂದ್ರ ಕಾರಾಗೃಹದಿಂದ ಸೋಮವಾರ ಬಿಡುಗಡೆಯಾಗಿದ್ದಾನೆ.

ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಸುಳ್ವಾಡಿಯ ಕಿಚ್ಚುಗುತ್ತು ಮಾರಮ್ಮನ ದೇವಾಲಯದಲ್ಲಿ 2018ರ ಡಿ.14ರಂದು ನಡೆದಿದ್ದ ವಿಷಪ್ರಾಶನ ಪ್ರಕರಣದ ಪ್ರಮುಖ ಆರೋಪಿಯಾದ ಈತ ಜೈಲು ಸೇರಿದ್ದ. ಇದೀಗ ಮೈಸೂರು ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾನೆ.

ಕಿಚ್ಚುಗುತ್ತು ಮಾರಮ್ಮ ದೇವಸ್ಥಾನದ ಆಡಳಿತದಲ್ಲಿ ಹಿಡಿತ ಸಾಧಿಸಲು ಷಡ್ಯಂತ್ರ ಮಾಡಿ ಮತ್ತೊಂದು ಗುಂಪಿಗೆ ಕೆಟ್ಟ ಹೆಸರು ತರಲು ದೇವಸ್ಥಾನದ ಪ್ರಸಾದಕ್ಕೆ ವಿಷ ಬೆರೆಸಿದ್ದ ಆರೋಪದಲ್ಲಿ ಈತ ಜೈಲು ವಾಸಿಯಾಗಿದ್ದ. ಅಂದು ವಿಷ ಮಿಶ್ರಿತ ಪ್ರಸಾದ ಸೇವಿಸಿದ ಪರಿಣಾಮ 17 ಮಂದಿ ಸಾವನ್ನಪ್ಪಿದ್ದರು. ಅಲ್ಲದೆ, 100ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿದ್ದರು. 2018ರಿಂದ ಜೈಲಿನಲ್ಲಿದ್ದ ಈತನಿಗೆ ಅನಾರೋಗ್ಯದ ಕಾರಣಕ್ಕಾಗಿ ಹೈಕೋರ್ಟ್ ಬುಧವಾರ ಜಾಮೀನು ಮಂಜೂರು ಮಾಡಿತ್ತು.

ಈತನಿಗೆ ನೀಡಿರುವ ಜಾಮೀನು ರದ್ದುಗೊಳಿಸಲು ಸರ್ಕಾರ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕೆಂದು ಒತ್ತಾಯಿಸಿ ಸಂತ್ರಸ್ತರು ಪ್ರತಿಭಟನೆ ಸಹ ನಡೆಸುತ್ತಿದ್ದಾರೆ. ಈ ಸಂಬಂಧ ಸಂತ್ರಸ್ತರು, ಹನೂರು ಕ್ಷೇತ್ರದ ಶಾಸಕ ಎಂ.ಆರ್.ಮಂಜುನಾಥ್, ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಸೇರಿದಂತೆ ಮತ್ತಿತರ ಅಧಿಕಾರಿಗಳಿಗೆ ಮನವಿ ಸಹ ಸಲ್ಲಿಸಿದ್ದಾರೆ.

ದೇವಸ್ಥಾನದ ಪವಿತ್ರ ಪ್ರಸಾದಕ್ಕೆ ವಿಷ ಮಿಶ್ರಣ ಮಾಡಿ 17 ಜನ ಅಮಾಯಕರ ಸಾವಿಗೆ ಕಾರಣರಾದವರನ್ನು ದೇವರು ಕೂಡ ಕ್ಷಮಿಸಲಾರ. ನ್ಯಾಯಾಂಗ ವ್ಯವಸ್ಥೆ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡುತ್ತದೆ ಎಂದು ಬಲವಾಗಿ ನಂಬಿದ್ದೇವೆ ಎಂದು ಸಂತ್ರಸ್ತರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ಮಹೇಶ್ ಶೆಟ್ಟಿ ತಿಮರೋಡಿ ಗಡಿಪಾರು ಆದೇಶ ರದ್ದು ಮಾಡಿದ ಹೈಕೋರ್ಟ್



ಬೆಂಗಳೂರು, ನ.17– ಬೆಳ್ತಂಗಡಿ ವಿದ್ಯಾರ್ಥಿನಿ ಕೊಲೆ ಪ್ರಕರಣ ಸಂಬಂಧ ಹೋರಾಟ ನಡೆಸುತ್ತಿರುವ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಒಂದು ವರ್ಷದ ಅವಧಿಗೆ ಗಡಿಪಾರು ಮಾಡಿ ಪುತ್ತೂರು ಸಹಾಯಕ ಆಯುಕ್ತರು ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಇಂದು ರದ್ದುಪಡಿಸಿದೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿಗೆ ಗಡಿಪಾರು ಮಾಡಿ ಸೆ.18ರಂದು ಪುತ್ತೂರು ಸಹಾಯಕ ಆಯುಕ್ತೆ ಸ್ಟೆಲ್ಲಾ ವರ್ಗಿಸ್ ಅವರು ಹೊರಡಿಸಿರುವ ಆದೇಶ ಪ್ರಶ್ನಿಸಿ, ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ನ್ಯಾಯಪೀಠ ಅರ್ಜಿದಾರರ ವಿರುದ್ಧದ ಆರೋಪ ಸಂಬಂಧ ಮುಂದಿನ 15 ದಿನಗಳಲ್ಲಿ ಹೊಸದಾಗಿ ವಿಚಾರಣೆ ನಡೆಸಿ ಸೂಕ್ತ ಕಾರಣ ಮತ್ತು ಅಗತ್ಯ ಸೆಕ್ಷನ್‌ಗಳೊಂದಿಗೆ ಹೊಸ ಆದೇಶವನ್ನು ಹೊರಡಿಸಬೇಕು ಎಂದು ಪುತ್ತೂರಿನ ಉಪವಿಭಾಗಾಧಿಕಾರಿಗೆ ನಿರ್ದೇಶನ ನೀಡಿದೆ.

**ಪ್ರಕರಣದ ಹಿನ್ನೆಲೆ:** ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ವಿವಿಧ ಠಾಣೆಗಳಲ್ಲಿ 32ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಅವರಿಂದ ಶಾಂತಿ ಭಂಗಕ್ಕೆ ಕಾರಣವಾಗುತ್ತಿದೆ. ಜಾತಿ, ಜಾತಿಗಳ ನಡುವೆ ಗೊಂದಲ ಸೃಷ್ಟಿಸಿದ್ದು, ಸಮಾಜದಲ್ಲಿ ಅಶಾಂತಿಯನ್ನುಂಟು ಮಾಡಿರುತ್ತಾರೆ. ಆದ ಕಾರಣ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಗಡಿಪಾರು ಮಾಡಬೇಕು ಎಂಬುದಾಗಿ ಬಂಟ್ವಾಳ ಉಪವಿಭಾಗದ ಪೊಲೀಸರು ಮನವಿ ಸಲ್ಲಿಸಿದ್ದರು. ಈ ಮನವಿಯನ್ನು ಪರಿಗಣಿಸಿದ್ದ ಪುತ್ತೂರಿನ ಉಪ ವಿಭಾಗಾಧಿಕಾರಿಯವರು ತಿಮರೋಡಿ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಯ ಮಾನ್ವಿಗೆ ಗಡಿಪಾರು ಮಾಡಿ ಆದೇಶಿಸಿದ್ದರು. ಈ ಆದೇಶ ರದ್ದುಮಾಡಬೇಕು ಎಂದು ಕೋರಿ ಮಹೇಶ್ ಶೆಟ್ಟಿ ತಿಮರೋಡಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

## ಖಾರ ಮಿಕ್ಸರ್ ತಯಾರಿಕೆಗೆ ಟಾರ್ಟ್ರಾಜಿನ್ ರಾಸಾಯನಿಕ ಬಳಸಿದರೆ ಹುಷಾರ್...



ಮೈಸೂರು, ನ.17(ಬಿಎಲ್‌ಯು)– ಸರ್ಕಾರ ಬ್ಯಾನ್ ಮಾಡಿರುವ ಟಾರ್ಟ್ರಾಜಿನ್ ರಾಸಾಯನಿಕವನ್ನು ಖಾರ ಮಿಕ್ಸರ್ ತಿಂಡಿಗೆ ಬಳಸಬಾರದು. ಒಂದು ವೇಳೆ ಬಳಸಿದರೆ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸುರಕ್ಷತೆ ಮತ್ತು ಔಷಧಿ ಆಡಳಿತ ಇಲಾಖೆ ಅಂಕಿತ ಅಧಿಕಾರಿ ಡಾ.ಎಸ್.ಎಲ್. ರವೀಂದ್ರ ಎಚ್ಚರಿಸಿದ್ದಾರೆ.

ಟಾರ್ಟ್ರಾಜಿನ್ ಸಂಶ್ಲೇಷಿತ, ನಿಂಬೆ ಹಳದಿ ಬಣ್ಣವಾಗಿದ್ದು, ಆಹಾರ ಉತ್ಪನ್ನಗಳಿಗೆ ಬಳಸಿದಾಗ ರೋಮಾಂಚಕ ಹಳದಿ ಬಣ್ಣ ನೀಡುತ್ತದೆ. ಖಾರ ಮಿಕ್ಸರ್‌ಗಳಿಗೆ ಇದನ್ನು ಬಳಸಲಾಗುತ್ತಿದೆ. ಆದರೆ ಆರೋಗ್ಯದ ಮೇಲೆ ಇದು ದುಷ್ಪರಿಣಾಮ ಬೀರುತ್ತದೆ ಎಂಬ ಕಾರಣದಿಂದ ಸರ್ಕಾರ ಬ್ಯಾನ್ ಮಾಡಿದೆ ಎಂದು ತಿಳಿಸಿದ್ದಾರೆ.

ಖಾರ ಮಿಕ್ಸರ್‌ನಲ್ಲಿ ಈ ರಾಸಾಯನಿಕ ಬಳಸದಂತೆ ಎಚ್ಚರಿಕೆ ನೀಡಿದ್ದರೂ ಬಹಳಷ್ಟು ತಿಂಡಿ ತಯಾರಕರು ಇದನ್ನು ಬಳಸುತ್ತಿದ್ದಾರೆ. ಇದರಿಂದ ಹತ್ತು ಖಾರ ಮಿಕ್ಸರ್ ಮಾದರಿ ಸಂಗ್ರಹಿಸಿದರೆ ಕನಿಷ್ಟ 1 ಅಥವಾ 2ರಲ್ಲಿ ಈ ರಾಸಾಯನಿಕ ಬಳಸಿರುವುದು ಪತ್ತೆಯಾಗುತ್ತಿದೆ ಎಂದು ಡಾ.ರವೀಂದ್ರ ಹೇಳಿದರು.

ನಿಷೇಧಿತ ರಾಸಾಯನಿಕ ಬಳಸಿದವರ ವಿರುದ್ಧ ಈಗಾಗಲೇ ಪ್ರಕರಣ ದಾಖಲಿಸಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ ಎಂದು ಮಾಹಿತಿ ನೀಡಿದರು.

ಖಾರ ಮಿಕ್ಸರ್‌ಗೆ ಟಾರ್ಟ್ರಾಜಿನ್ ರಾಸಾಯನಿಕ ಬಣ್ಣ ಬಳಸುವ ಬದಲು ಅರಿಶಿಣ ಬಳಸಬೇಕು. ಅರಿಶಿಣ ಬಳಸುವುದರಿಂದ ಆರೋಗ್ಯದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಈ ಹಿನ್ನೆಲೆ ಶೀಘ್ರವೇ ಸಿಹಿ ಹಾಗೂ ಖಾರಾ ತಿಂಡಿ ತಯಾರು ಮಾಡುವವರಿಗೆ ಕಾರ್ಯಾಗಾರ ಆಯೋಜಿಸಲಾಗುವುದು. ಅಲ್ಲಿ ರಾಸಾಯನಿಕ ಬಳಸಿದರೆ ಆರೋಗ್ಯದ ಮೇಲೆ ಏನೆಲ್ಲಾ ದುಷ್ಪರಿಣಾಮ ಬೀರುತ್ತದೆ ಎಂದು ಅರಿವು ಮೂಡಿಸಲಾಗುವುದು. ಜೊತೆಗೆ ಪರ್ಯಾಯವಾಗಿ ಅರಿಶಿಣ ಬಳಸುವಂತೆ ಸಲಹೆ ನೀಡಲಾಗುವುದು ಎಂದರು.

ಇಷ್ಟು ಎಚ್ಚರಿಕೆ ನೀಡಿದರೂ ನಿಷೇಧಿತ ರಾಸಾಯನಿಕ ಬಳಸಿದರೆ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸುರಕ್ಷತೆ ಮತ್ತು ಔಷಧಿ ಆಡಳಿತ ಇಲಾಖೆ ಅಂಕಿತ ಅಧಿಕಾರಿ ಡಾ.ರವೀಂದ್ರ ತಿಳಿಸಿದರು.

## ಮೈಸೂರು ಸೇರಿ ರಾಜ್ಯದಲ್ಲಿ 10 ದೇವಾಲಯಗಳ ಜೀರ್ಣೋದ್ಧಾರಕ್ಕೆ ಪ್ರಸ್ತಾವನೆ

●ಆಲ್ ಇಂಡಿಯಾ ಓಲ್ಡ್ ಟೆಂಪಲ್ ರಿನೋವೇಷನ್ ಟ್ರಸ್ಟ್ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ರವಿಕುಮಾರ್ ಜೈನ್ ●ಟ್ರಸ್ಟ್‌ನ ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ

ಮೈಸೂರು,ನ.17(ಪಿಎಂ)– ಸನಾತನ ಧರ್ಮದ ಸಂರಕ್ಷಣೆಯ ನಿಟ್ಟಿನಲ್ಲಿ ದೇಶದಾದ್ಯಂತ ಅಳಿವಿನಂಚಿನಲ್ಲಿರುವ ದೇವಾಲಯಗಳ ಜೀರ್ಣೋದ್ಧಾರಕ್ಕೆ ಪೂರಕವಾಗಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಆಲ್ ಇಂಡಿಯಾ ಓಲ್ಡ್ ಟೆಂಪಲ್ ರಿನೋವೇಷನ್ ಟ್ರಸ್ಟ್ ಸ್ಥಾಪನೆ ಮಾಡಲಾಗಿದೆ ಎಂದು ತಿಳಿಸಿದ ಟ್ರಸ್ಟ್‌ನ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ರವಿಕುಮಾರ್ ಜೈನ್, ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆ, ಇತರ ಜಿಲ್ಲೆಗಳ ವ್ಯಾಪ್ತಿಯಲ್ಲಿ 10 ದೇವಾಲಯಗಳನ್ನು ಗುರುತಿಸಲಾಗಿದೆ ಎಂದು ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸೋಮವಾರ ಟ್ರಸ್ಟ್‌ನ ಮೈಸೂರು ಘಟಕದ ಪದಗ್ರಹಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಬಳಿಕ ಮಾಧ್ಯಮದವರಿಗೆ ಮಾಹಿತಿ ನೀಡಿದ ಅವರು, ಇಡೀ ಭಾರತ ಮಾತ್ರವಲ್ಲದೆ, ಹೊರದೇಶಗಳಲ್ಲಿರುವ ಪುರಾತನ ಹಿಂದೂ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಕೆಲಸ ಮಾಡಲು ಟ್ರಸ್ಟ್ ಉದ್ದೇಶಿಸಿದೆ. ಸನಾತನ ಧರ್ಮ ಸಂರಕ್ಷಣೆಗೆ ದೇವಾಲಯಗಳ ಉಳಿಸುವುದು ಅಗತ್ಯ ಎಂದರು.

ಟ್ರಸ್ಟ್ ಅನ್ನು 2022ರಲ್ಲಿ ಸ್ಥಾಪನೆ ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ ಈಗ 6 ತಿಂಗಳ ಹಿಂದೆಯಷ್ಟೇ ರಾಜ್ಯ ಘಟಕ ಸ್ಥಾಪನೆಯಾಗಿದೆ. ಇಂದು ಮೈಸೂರು ಜಿಲ್ಲಾ ಘಟಕ ಕಾರ್ಯಾರಂಭ ಮಾಡುತ್ತಿದೆ. 1947ರ ಸಂದರ್ಭದಲ್ಲಿ ದೇಶದಲ್ಲಿ ಹದಿನೇಳೂವರೆ ಲಕ್ಷ ಹಳೆಯ ದೇವಾಲಯಗಳು ಇದ್ದವು. ಈಗ ಅವುಗಳ ಸಂಖ್ಯೆ 7 ಲಕ್ಷಕ್ಕೆ ಇಳಿಕೆಯಾಗಿದೆ.



ಮೈಸೂರಿನ ಜೆಎಲ್‌ಬಿ ರಸ್ತೆಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸೋಮವಾರ ಆಲ್ ಇಂಡಿಯಾ ಓಲ್ಡ್ ಟೆಂಪಲ್ ರಿನೋವೇಷನ್ ಟ್ರಸ್ಟ್‌ನ ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಈ ದೇವಾಲಯಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಬೇಕಿದೆ ಎಂದು ತಿಳಿಸಿದರು.

ಸ್ಥಳೀಯರ ಸಹಕಾರ ಪಡೆಯುವುದು, ಸರ್ಕಾರದ ಇಲಾಖೆಗಳ ಗಮನ ಸೆಳೆಯುವುದು, ಬೃಹತ್ ದೇವಾಲಯಗಳ ಆಡಳಿತ ಮಂಡಳಿಯಿಂದ ಸಹಾಯಧನ ದೊರಕಿಸಿಕೊಡುವುದು, ದೊಡ್ಡ ಕೈಗಾರಿಕೆಗಳು ಹಾಗೂ ಉದ್ದಿಮೆಗಳ ಸಿಎಸ್‌ಆರ್ ನಿಧಿ ದೊರಕಿಸಿಕೊಟ್ಟು ಜೀರ್ಣೋದ್ಧಾರ ಮಾಡಿಸುವ ಉದ್ದೇಶ ಹೊಂದಲಾಗಿದೆ ಎಂದರು.

ಟ್ರಸ್ಟ್‌ನ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಾಜೇಶ್ ಬೆಳಂಕರ ಮಾತನಾಡಿ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ನಮ್ಮೊಂದಿಗೆ ಕೈಜೋಡಿಸುವ ಭರವಸೆ ನೀಡಿದ್ದಾರೆ. ಬಿಳಿಕೆರೆಯ ಶ್ರೀ ಲಕ್ಷ್ಮೀಕಾಂತ ದೇವಾಲಯ ಜೀರ್ಣೋದ್ಧಾರಕ್ಕೆ ಕಾರ್ಯಚಟುವಟಿಕೆ ಆರಂಭಿಸುವಂತೆ ಅವರು ಸಲಹೆ ನೀಡಿದ್ದಾರೆ. ಈ ದೇವಾಲಯ ಸುಮಾರು 200 ವರ್ಷಗಳ ಇತಿಹಾಸ ಹೊಂದಿದೆ. ಇದು ಸೇರಿದಂತೆ ರಾಜ್ಯದಲ್ಲಿ 10 ದೇವಾಲಯಗಳನ್ನು ಜೀರ್ಣೋದ್ಧಾರಕ್ಕಾಗಿ ಗುರುತಿಸಲಾಗಿದೆ. ಈ ಪೈಕಿ ಬಹುತೇಕ ದೇವಾಲಯಗಳು ಸರ್ಕಾರದ ಅಧೀನದ ಯಾವುದೇ ಇಲಾಖೆಯಡಿ ಇಲ್ಲ ಎಂದು ಹೇಳಿದರು.

ಮಂಡ್ಯ ಜಿಲ್ಲೆಯ ಮೇಲುಕೋಟೆಯ ಕೆರೆತೊಣ್ಣೂರು ವೆಂಕಟೇಶ್ವರಸ್ವಾಮಿ ದೇವಸ್ಥಾನ, ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಮಾರಮ್ಮ ದೇವಸ್ಥಾನ, ಚಾಮರಾಜನಗರದ ಭುಜಂಗೇಶ್ವರ ದೇವಸ್ಥಾನ, ಮೈಸೂರು ಜಿಲ್ಲೆಯ ತಲಕಾಡಿನ ವೈಕುಂಠ ನಾರಾಯಣಸ್ವಾಮಿ ದೇವಸ್ಥಾನ, ಕೋಲಾರ ಜಿಲ್ಲೆಯ ಮುಳಬಾಗಿಲಿನ ವಿರೂಪಾಕ್ಷ ದೇವಸ್ಥಾನ, ಉಡುಪಿಯ ಬ್ರಹ್ಮಲಿಂಗೇಶ್ವರ ದೇವಸ್ಥಾನ, ಮೈಸೂರಿನ ಲಷ್ಕರ ಮೊಹಲ್ಲಾದ ಶ್ರೀ ಪಾಂಡುರಂಗಸ್ವಾಮಿ ದೇವಸ್ಥಾನ ಹಾಗೂ ಬೋಗಾದಿ ರಸ್ತೆಯ ಕುಮಾರಬೀಡು ಜೈನ ದೇವಾಲಯವನ್ನು ಜೀರ್ಣೋದ್ಧಾರಕ್ಕೆ ಗುರುತಿಸಲಾಗಿದೆ ಎಂದು ವಿವರಿಸಿದರು.

ಇದಕ್ಕೂ ಮುನ್ನ ಪುರಾತನ ದೇವಾಲಯ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳುವ ಸಂಬಂಧ ಮೈಸೂರು ಜಿಲ್ಲಾ ಘಟಕ ಪದಾಧಿಕಾರಿಗಳು ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಟ್ರಸ್ಟ್‌ನ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿರಾಜ್ ಜೈನ್, ಮೈಸೂರು ಜಿಲ್ಲಾ ಘಟಕದ ಕಾರ್ಯದರ್ಶಿ ರಾಜು, ಉಪಾಧ್ಯಕ್ಷ ಅನಿಲ್ ಜೈನ್, ಖಜಾಂಚಿ ಚೈತನ್ಯ ಕುಮಾರ್, ಜಂಟಿ ಖಜಾಂಚಿ ಮರಿಸ್ವಾಮಿ ನಾಯಕ್, ಜಂಟಿ ಕಾರ್ಯದರ್ಶಿ ಮರೀಗೌಡ, ಪದಾಧಿಕಾರಿ ಗಳಾದ ಬಾಲರಾಜ್, ಪುಟ್ಟರಾಜು, ಜಯಪ್ರಕಾಶ್, ಕೇಶವ, ಪ್ರಕಾಶ್, ದೇವರಾಜ್, ಮಂಜುನಾಥ್, ಕಾಂತರಾಜ್ ಮತ್ತಿತರರು ಹಾಜರಿದ್ದರು.

## ಮಧ್ಯರಾತ್ರಿ ಮದ್ಯ ಕೊಡಿಸಲು ಹೋಗಿ ಕಾರು, ಹಣ, ಆಭರಣ ಕಳೆದುಕೊಂಡ ಇಂಜಿನಿಯರ್!

●ಮೈಸೂರು ರಾತ್ರಿ ಸೇಫಲ್ಲಾ ಎಂಬುದು ಮತ್ತೊಮ್ಮೆ ಸಾಬೀತು ●ರೈಲ್ವೆ ನಿಲ್ದಾಣದ ಬಳಿ ಟೀ ಕುಡಿಯುವಾಗ ಪರಿಚಯ; ಮದ್ಯ ಬೇಕೆಂದವರಿಗೆ ಕೊಡಿಸಲು ಹೋಗಿ ಎಲ್ಲಾ ಕಳೆದುಕೊಂಡು, ಹಿಗ್ಗಾಮುಗ್ಗಾ ಏಟು ತಿಂದ!

ಮೈಸೂರು, ನ.17– ಮಧ್ಯರಾತ್ರಿ ಮದ್ಯ ಕೊಳ್ಳಲು ಅಪರಿಚಿತರಿಗೆ ಸಹಾಯ ಮಾಡಲು ಹೋಗಿ ಇಂಜಿನಿಯರ್‌ವೊಬ್ಬರು ಕಾರು, ಇನ್ನಿತರ ವಸ್ತುಗಳನ್ನು ಕಳೆದುಕೊಂಡಿರುವ ಘಟನೆ ಮೈಸೂರಿನ ಜೆ.ಕೆ.ಮೈದಾನದ ಬಳಿ ನಡೆದಿದ್ದು, ಈ ಸಂಬಂಧ ತಡವಾಗಿ ಪ್ರಕರಣ ದಾಖಲಾಗಿದೆ.

ಮೈಸೂರು ತಾಲೂಕು ಹಡಜನ ಸಮೀಪದ ಬಡಾವಣೆಯೊಂದರ ನಿವಾಸಿ ಆಕಾಶ್ ಆದಿತ್ಯ(42) ಅವರಿಗೆ ಮೂವರು ಅಪರಿಚಿತರು ಹಲ್ಲೆ ನಡೆಸಿ, ಅವರ ಮಾರುತಿ ಸುಜುಕಿ ಬಲೆನೋ ಕಾರು, 20 ಗ್ರಾಂ ಬೆಳ್ಳಿ ಸರ, 40 ಗ್ರಾಂ ಬೆಳ್ಳಿಯ ಕೈಕಡಗ, 1 ಸಾವಿರ ಹಣ, ಎಟಿಎಂ ಕಾರ್ಡ್, ಕ್ರೆಡಿಟ್ ಕಾರ್ಡ್ ಇದ್ದ ಪರ್ಸ್ ದೋಚಿ ಪರಾರಿಯಾಗಿದ್ದಾರೆ. ನ.12ರಂದು ಮಧ್ಯರಾತ್ರಿ ಈ ಘಟನೆ ನಡೆದಿದ್ದು, ಆಕಾಶ್ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ತಡವಾಗಿ ಭಾನುವಾರ ಪ್ರಕರಣ ದಾಖಲಿಸಿದ್ದಾರೆ.

ಮೇಟಗಳ್ಳಿ ಬಳಿಯ ಹೋಟೆಲ್‌ವೊಂದರ ಸ್ವಿಮ್ಮಿಂಗ್‌ಪೂಲ್ ಕಾಮಗಾರಿ ಗುತ್ತಿಗೆ ಪಡೆದಿರುವ ಆಕಾಶ್, ಕೆಲಸ ಮುಗಿಸಿಕೊಂಡು ನ.12ರ ರಾತ್ರಿ ಸುಮಾರು 12.30ರ ಸಮಯದಲ್ಲಿ ಟೀ ಕುಡಿದುಕೊಂಡು ಮನೆಗೆ ಹೋಗಲೆಂದು ರೈಲ್ವೆ ನಿಲ್ದಾಣದ ಬಳಿ ಬಂದಿದ್ದಾರೆ. ಆ ವೇಳೆ ಅಲ್ಲಿಗೆ ಬಂದ ಮೂವರು ಅಪರಿಚಿತರು, ನಮಗೆ ಡ್ರಿಂಕ್ಸ್ ಬೇಕು, ಎಲ್ಲಿ ಸಿಗುತ್ತದೆ ಎಂದು ಕೇಳಿದ್ದಾರೆ. ಆಗ ಆಕಾಶ್, ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದಾಗ ನಮ್ಮನ್ನು ಸಬರ್ಬನ್ ಬಸ್ ನಿಲ್ದಾಣದ ಬಳಿ ಡ್ರಾಪ್ ಮಾಡಿ ಎಂದು ಮನವಿ ಮಾಡಿಕೊಂಡಿದ್ದಾರೆ.

ಸರಿ ಎಂದು ಆಕಾಶ್ ಆ ಮೂವರನ್ನೂ ಸಬರ್ಬನ್ ಬಸ್ ನಿಲ್ದಾಣದ ಬಳಿ ಕರೆದೊಯ್ದಿದ್ದಾರೆ. ಓರ್ವ ಕಾರಿನಿಂದ ಇಳಿದು ರಸ್ತೆ ಬದಿಯಲ್ಲಿ ನಿಂತಿದ್ದ ವ್ಯಕ್ತಿಯೊಂದಿಗೆ ಮಾತನಾಡಿಕೊಂಡು ಮತ್ತೆ ಕಾರಿನಲ್ಲಿ ಕುಳಿತುಕೊಳ್ಳುತ್ತಾನೆ. ಕೆಲ ಹೊತ್ತಿಗೆ ಆ ವ್ಯಕ್ತಿ, ಮದ್ಯವನ್ನು ತಂದುಕೊಟ್ಟು, ಹಣ ಕೇಳುತ್ತಾನೆ. ಆಗ ಮೂವರೂ ಈಗ ನಮ್ಮ ಬಳಿ ಅಷ್ಟು ಹಣವಿಲ್ಲ ನೀವೇ ಕೊಟ್ಬಿರಿ, ನಿಮಗೆ ಆಮೇಲೆ ವಾಪಸ್ ಕೊಡುತ್ತೇವೆ ಎಂದಿದ್ದಾರೆ. ಅದನ್ನು ನಂಬಿದ ಆಕಾಶ್ ಮದ್ಯ ತಂದುಕೊಟ್ಟ ವ್ಯಕ್ತಿಗೆ ಹಣ ನೀಡಿದ್ದಾರೆ.

ಅಲ್ಲಿಂದ ಮತ್ತೆ ನಮ್ಮನ್ನು ರೈಲ್ವೆ ನಿಲ್ದಾಣದ ಬಳಿಗೇ ಬಿಟ್ಟುಬಿಡಿ ಎಂದು ಕೇಳಿಕೊಂಡಿದ್ದರಿಂದ ಆಕಾಶ್ ವಾಪಸ್ ರೈಲ್ವೆ ನಿಲ್ದಾಣದ ಬಳಿ ಬಂದು ಇಳಿಯುವಂತೆ ಹೇಳಿದಾಗ ಅಪರಿಚಿತರು ವರಸೆ ಬದಲಿಸಿದ್ದಾರೆ. ನಾವು ಹೇಳಿದ ಕಡೆ ಕರೆದುಕೊಂಡು ಹೋಗು ಎಂದು ಬೆದರಿಸಿ, ಜೆ.ಕೆ.ಮೈದಾನದ ಗೇಟ್ ಬಳಿ ಕರೆದುಕೊಂಡು ಹೋಗಿದ್ದಾರೆ. ಅಲ್ಲಿಯೇ ಕಾರನ್ನು ನಿಲ್ಲಿಸಿ, ಆಕಾಶ್ ಅವರನ್ನು ಮೈದಾನದೊಳಗೆ ಎಳೆದೊಯ್ದು ಹಲ್ಲೆ ನಡೆಸಿ, ಕಾರಿನ ಕೀ, ಬೆಳ್ಳಿ ವಸ್ತುಗಳು, ಪರ್ಸ್ ಕಿತ್ತುಕೊಂಡು ಪರಾರಿಯಾಗುತ್ತಾರೆ.

ಹಲ್ಲೆ ಮಾಡಿದ್ದರಿಂದ ಪ್ರಜ್ಞೆ ತಪ್ಪಿದ್ದ ಆಕಾಶ್‌ಗೆ ಮುಂಜಾನೆ 3 ಗಂಟೆ ಹೊತ್ತಿಗೆ ಎಚ್ಚರವಾಗಿದೆ, ಬಟ್ಟೆ ರಕ್ತವಾಗಿದ್ದರಿಂದ ಮತ್ತಷ್ಟು ಭಯಗೊಂಡಿದ್ದಾರೆ. ಹೇಗೋ ಮೈದಾನದಿಂದ ಹೊರಗೆ ಬಂದು ಅಲ್ಲಿ ಬೈಕ್ ನಿಲ್ಲಿಸಿಕೊಂಡಿದ್ದ ವ್ಯಕ್ತಿಯ ಸಹಾಯ ಕೇಳಿದ್ದಾರೆ. ಆತ ರ್‍ಯಾಪಿಡೋ ಬೈಕ್ ಎಂದು ಆಕಾಶ್ ಅವರನ್ನು ಮನೆಗೆ ಬಿಟ್ಟಿದ್ದಾರೆ. ಬಳಿಕ ಮನೆಯವರು ಆಸ್ಪತ್ರೆಗೆ ಆಕಾಶ್ ಅವರನ್ನು ದಾಖಲಿಸಿದ್ದಾರೆ.

ಚಿಕಿತ್ಸೆ ಪಡೆದು ಸುಧಾರಿಸಿಕೊಂಡ ಬಳಿಕ ಆಕಾಶ್ ನೀಡಿರುವ ದೂರಿನನ್ವಯ ಮಂಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಮುಂದುವರೆಸಿದ್ದಾರೆ.

## ಮಾದಕ ವಸ್ತು ಖರೀದಿಗೆ ಹಣಕ್ಕಾಗಿ ದಾರಿಹೋಕರ ಸುಲಿಗೆಗೆ ಹೊಂಚು ಹಾಕುತ್ತಿದ್ದ ಇಬ್ಬರು ಖದೀಮರ ಬಂಧನ

●ಹೆಬ್ಬಾಳು ರಿಂಗ್ ರಸ್ತೆಯಲ್ಲಿ ಸಿಕ್ಕಿಬಿದ್ದ ಸುಲಿಗೆಕೋರರು ●ನಾಲ್ವರು ಪರಾರಿ ●ಕಾರು, ಚಾಕು ವಶಕ್ಕೆ

ಕ್ರೈಂ ಬಾಕ್ಸ್

ಮೈಸೂರು, ನ.17– ಮಾದಕ ವಸ್ತು ಖರೀದಿ ಇನ್ನಿತರ ಖರ್ಚಿಗೆ ಕಾರ್ಖಾನೆ ಕಾರ್ಮಿಕರಲ್ಲಿ ದೋಚಲು ಬಾಡಿಗೆ ಕಾರಿನಲ್ಲಿ ಬಂದು ನಗರದ ರಿಂಗ್ ರಸ್ತೆಯಲ್ಲಿ ಹೊಂಚು ಹಾಕುತ್ತಿದ್ದ ಆರು ಮಂದಿ ದರೋಡೆಕೋರರಲ್ಲಿ ಇಬ್ಬರನ್ನು ಹೆಬ್ಬಾಳ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಗರದ ಮಹಮ್ಮದ್ ಯೂಸುಫ್ (19) ಹಾಗೂ ಮುದಾಸೀರ್ ಪಾಷಾ(18)ನನ್ನು ಬಂಧಿಸಲಾಗಿದ್ದು, ಸಹಚರರಾದ ಫರಾಜ್, ಮೊಹಮ್ಮದ್ ರೋಷನ್, ಸೈಯದ್ ಮುಬಾರಕ್ ಹಾಗೂ ಮೊಹ್ಮದ್ ಮಾಜ್ ಪರಾರಿಯಾಗಿದ್ದಾರೆ. ದರೋಡೆಗೆಂದು ಬಾಡಿಗೆ ತಂದಿದ್ದ ಸ್ವಿಫ್ಟ್ ಕಾರು ಹಾಗೂ ಚಾಕುವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಹೆಬ್ಬಾಳ ಠಾಣೆ ಸಬ್‌ಇನ್ಸ್‌ಪೆಕ್ಟರ್ ಕೀರ್ತಿ, ಸಿಬ್ಬಂದಿ ಅಣ್ಣಪ್ಪ ದೇವಾಡಿಗ, ಆನಂದ್ ಹಾಗೂ ಎಸ್.ಬಿ.ಮೋಹನ್ ಕುಮಾರ್ ತಂಡ, ನ.15ರಂದು ರಾತ್ರಿ ವಿಶೇಷ ಅಪರಾಧ ತಡೆ ಗಸ್ತಿನಲ್ಲಿದ್ದಾಗ ದರೋಡೆಕೋರರು ಸಿಕ್ಕಿಹಾಕಿಕೊಂಡಿದ್ದಾರೆ.

ತಡರಾತ್ರಿ 1.30ರ ಸಮಯದಲ್ಲಿ ಶುಭೋದಿನಿ ಜಂಕ್ಷನ್ ಬಳಿಯ ಜೆ.ಕೆ.ಟೈರ್ಸ್ ರಸ್ತೆ ತಿರುವಿನಲ್ಲಿ ಸ್ವಿಫ್ಟ್ ಕಾರು ನಿಲ್ಲಿಸಿಕೊಂಡು ಐವರು ನಿಂತಿದ್ದನ್ನು ಗಮನಿಸಿದ ಪೊಲೀಸರು, ಕಾರಿನತ್ತ ತಮ್ಮ ವಾಹನವನ್ನು ತಿರುಗಿಸುತ್ತಿದ್ದಂತೆ ನಾಲ್ವರು ಓಡಿ ಹೋಗಿದ್ದಾರೆ. ಅಷ್ಟರಲ್ಲಿ ಕಾರಿನ ಬಳಿ ಧಾವಿಸಿ, ಇನ್ನಿಬ್ಬರನ್ನು ವಶಕ್ಕೆ ಪಡೆದಿದ್ದಾರೆ. ಇಲ್ಲಿ ಏಕೆ ನಿಂತಿದ್ದೀರಿ ಎಂದು ವಿಚಾರಿಸಿ, ಕಾರನ್ನು ಪರಿಶೀಲಿಸಿದಾಗ ಚಾಕು ಪತ್ತೆಯಾಗಿದೆ.

ವಶದಲ್ಲಿದ್ದ ಮಹಮ್ಮದ್ ಯೂಸುಫ್ ಹಾಗೂ ಮುದಾಸೀರ್‌ನನ್ನು ವಿಚಾರಣೆಗೆ ಒಳಪಡಿಸಿದಾಗ ದರೋಡೆಗೆ ಸಂಚು ರೂಪಿಸಿದ್ದರ ಬಗ್ಗೆ ಬಾಯಿ ಬಿಟ್ಟಿದ್ದಾರೆ. ಬಡಾಮಕಾನ್ ಏರಿಯಾದ ಫರಾಜ್, ಮೊಹಮ್ಮದ್ ರೋಷನ್, ಸೈಯದ್ ಮುಬಾರಕ್ ಹಾಗೂ ಮೊಹ್ಮದ್ ಮಾಜ್ ಜೊತೆ ಸೇರಿ ಸಿಗರೇಟ್, ಗಾಂಜಾ ಇನ್ನಿತರ ಖರ್ಚಿಗೆ ಜನರನ್ನು ಹೆದರಿಸಿ, ಹಣ ಇನ್ನಿತರ ಬೆಲೆಬಾಳುವ ವಸ್ತು ದೋಚಲು ಪ್ಲಾನ್ ಮಾಡಿದ್ದೆವು. ನಂತರ ಶಾಂತಿ ನಗರದ ಬುರಾನ್ ಎಂಬುವರಿಂದ ರಾತ್ರಿ 11 ಗಂಟೆ ಬಳಿಕ ಕಾರನ್ನು ಬಾಡಿಗೆ ಪಡೆದು, ಎನ್.ಆರ್.ಮೊಹಲ್ಲಾ, ಕೆ.ಡಿ.ರಸ್ತೆ, ರಿಂಗ್ ರಸ್ತೆಯಲ್ಲಿ ಓಡಾಡಿಕೊಂಡು ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕರ ಬಳಿ ಹಣ ಇನ್ನಿತರ ವಸ್ತುಗಳನ್ನು ದೋಚಲು ಹೊಂಚು ಹಾಕುತ್ತಿದ್ದಾಗಿ ಹೇಳಿದ್ದಾರೆ.

ಈ ಸಂಬಂಧ ಹೆಬ್ಬಾಳ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪರಾರಿಯಾದ ನಾಲ್ವರು ಖದೀಮರ ಬಂಧನಕ್ಕೆ ಪೊಲೀಸರು ಶೋಧ ಮುಂದುವರೆಸಿದ್ದಾರೆ.

## ನಕ್ಕರೆ ಅದೇ ಸ್ವರ್ಗ

ಗುಂಡ : ನಿನ್ನ ತುಂಬಾ ಪ್ರೀತಿಸ್ತೀನಿ. ಸುಮ್ನೆ ಒಪ್ಕೋ. ಹೃದಯದಲ್ಲಿ ಇಟ್ಕೊಂಡು ರಾಣಿ ತರ ನೋಡ್ಕೋತೀನಿ.!
ಹುಡುಗಿ : ಕಾಲಲ್ಲಿ ಚಪ್ಪಲಿ ಇದೆ ನೋಡಿಲ್ಲಿ!
ಗುಂಡ : ಇರ್ಲಿ ಬಾ...ಚಪ್ಪಲಿ ಬಿಚ್ಚಿ ಬರೋಕೆ ನನ್ನ ಹೃದಯ ದೇವಸ್ಥಾನ ಅಲ್ಲ...!

ಮೈಸೂರು ಮಿತ್ರ
ಮಂಗಳವಾರ, 18 ನವೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

## ಅಮೃತ ವಾಹಿನಿ.........

ನೀ ಬರೆದ ಕವಿತೆಯಲ್ಲಿ ಮರೆತುಹೋದ ಪದವೊಂದು ನಾನು... ಆದರೆ ನಾ ಬರೆದ ಕವಿತೆಯಲ್ಲಿ ಮರೆತರೂ ಮರೆಯಲಾಗದ ಸಾಲುಗಳು ನೀನು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪೀತಾಂಬರ ಉಟ್ಟರೂ ಕೊತ್ತಂಬರಿ ಮಾರೋದು ತಪ್ಪಲಿಲ್ಲ.

## ನಿಮ್ಮ ಪತ್ರಗಳು

### ಮುಗ್ಧ ಮನಸ್ಸಿನ ಸಾಲುಮರಗಳ ತಿಮ್ಮಕ್ಕ ಅಜರಾಮರ



ಮಾನ್ಯರೆ,

ಎಂತಹ ಮುಗ್ದ ಮನಸ್ಸು ಸಾಲುಮರದ ತಿಮ್ಮಕ್ಕನದು. 2019ರಲ್ಲಿ ಅಂದಿನ ರಾಷ್ಟ್ರಪತಿಗಳಾಗಿದ್ದ ರಾಮನಾಥ್ ಕೋವಿಂದ್ ಅವರಿಂದ ಭಾರತ ಸರ್ಕಾರವು ಕೊಡಮಾಡುವ ಪದ್ಮಶ್ರೀ ಪ್ರಶಸ್ತಿಯನ್ನು ಸ್ವೀಕರಿಸಿದ ತಿಮ್ಮಕ್ಕ, ಪ್ರತಿಯಾಗಿ ರಾಷ್ಟ್ರಪತಿಗಳಿಗೆ ನಮಿಸಿ, ಅವರ ತಲೆ ಸವರಿ ಆಶೀರ್ವಾದ ಮಾಡಿದ್ದು ಶ್ಲಾಘನೀಯ ವ್ಯಕ್ತಿತ್ವ. ಹುಲಿಕಲ್ ಮತ್ತು ಕುದೂರು ರಸ್ತೆಯುದ್ದಕ್ಕೂ ಎರಡೂ ಸಾಲಿನಲ್ಲಿ 385 ಆಲದ ಮರಗಳನ್ನು ನೆಟ್ಟು ಬೆಳೆಸಿ, ಕರ್ನಾಟಕದಾದ್ಯಂತ ಸುಮಾರು 8000 ಗಿಡಗಳನ್ನು ನೆಟ್ಟು ಪೋಷಿಸಿರುವುದು ಸಾಮಾನ್ಯ ಸಂಗತಿಯಲ್ಲ. ಬಿಬಿಸಿ ಸಂಸ್ಥೆಯು ಸಾಲುಮರದ ತಿಮ್ಮಕ್ಕ ಅವರನ್ನು ಜಗತ್ತಿನ ಪ್ರಭಾವಿ ಮಹಿಳೆಯರಲ್ಲಿ ಒಬ್ಬರು ಎಂದು ಗುರುತಿಸಿರುವುದು ಸ್ವಾಗತಾರ್ಹ ಸಂಗತಿ. ಮಕ್ಕಳಿಲ್ಲದ ಇವರು ಮರಗಳಲ್ಲೇ ಮಕ್ಕಳನ್ನು ಕಾಣಲು ಯಾವ ಶಕ್ತಿ ಪ್ರೇರೇಪಿಸಿತೊ ತಿಳಿಯದು. ವೃಕ್ಷಮಾತೆ ತಿಮ್ಮಕ್ಕ ಅವರ ಅಂತ್ಯಕ್ರಿಯೆ ಬೆಂಗಳೂರಿನ ಜ್ಞಾನಭಾರತಿಯ ಕಲಾಗ್ರಾಮದಲ್ಲಿ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಿದ ಸರ್ಕಾರದ ನಡೆ ತುಂಬಾ ಶ್ಲಾಘನೀಯ. ತಿಮ್ಮಕ್ಕ ಎಂದೆಂದಿಗೂ ಅಜರಾಮರ, ಜೊತೆಗಿರದ ಜೀವ ಎಂದೆಂದೂ ಜೀವಂತ.

–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.

### ನಾಯಿಗಳ ದಾಳಿಗೆ ಕಾರಣ!



ಮಾನ್ಯರೆ,

ರಾಜ್ಯದಲ್ಲಿ ನಾಯಿಗಳ ದಾಳಿ ಹೆಚ್ಚಾಗಿದೆ. ಇದಕ್ಕೆ ಕಾರಣ ಮಾಂಸದಂಗಡಿಗಳ ಮಾಲೀಕರ ಬೇಜವಾಬ್ದಾರಿ. ಮಾಂಸದಂಗಡಿಗಳ ಕೆಲಸಗಾರರು ತಮ್ಮ ಅಂಗಡಿಗಳ ಬಳಿ ಬರುವ ನಾಯಿಗಳತ್ತ ಮಾಂಸದ ತುಂಡುಗಳನ್ನು ಎಸೆಯುತ್ತಾರೆ. ಈ ಹಸಿಮಾಂಸದ ತುಂಡಿನ ಆಸೆಯಿಂದ ನಾಯಿಗಳೆಲ್ಲ ಮಾಂಸದಂಗಡಿಗಳ ಬಳಿ ಜಮಾಯಿಸುತ್ತವೆ. ಹಸಿ ಮಾಂಸದ ರುಚಿ ಕಂಡ ನಾಯಿಗಳು ಮಾಂಸದಾಸೆಯಿಂದ ಮನುಷ್ಯರ ಮೇಲೂ ಎರಗುತ್ತವೆ. ಮಕ್ಕಳ ಮೇಲೂ ಎರಗುತ್ತವೆ. ಮಾಂಸವನ್ನು ಬೇಯಿಸಿ ತಿಂದರೆ ಯಾವ ಪ್ರಾಣಿಗಳೂ ಮನುಷ್ಯರ ಮೇಲೆ ದಾಳಿ ಮಾಡುವುದಿಲ್ಲ. ಹಸಿ ಮೀನು ತಿನ್ನುವ ಬೆಕ್ಕುಗಳೂ ಸಹ ಮನುಷ್ಯರನ್ನು ಕಚ್ಚುವುದು ಹಸಿ ಮಾಂಸದ ಮೇಲಿನ ಆಸೆಯಿಂದ. ಹುಲಿ, ಸಿಂಹ, ತೋಳ, ನರಿ, ಚಿರತೆಗಳಂತಹ ಮಾಂಸಾಹಾರಿ ಪ್ರಾಣಿಗಳೂ ಸಹ ಮಾನವರ ಮೇಲೆರಗುವುದು ಹಸಿ ಮಾಂಸಕ್ಕಾಗಿಯೇ! ಮಾಂಸವನ್ನು ಬೇಯಿಸಿ ಹಾಕಿದರೆ ಹುಲಿ, ಸಿಂಹ, ಚಿರತೆಗಳೂ ಸಹ ಮಾನವರ ಮೇಲೆ ದಾಳಿ ಮಾಡಲಾರವು. ಈ ಕೂಡಲೇ ಪಾಲಿಕೆ, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಹಾಗೂ ಸರಕಾರ ಎಚ್ಚೆತ್ತು ಮಾಂಸದಂಗಡಿಗಳ ಕೆಲಸಗಾರರು ನಾಯಿಗಳಿಗೆ ಹಸಿ ಮಾಂಸ ಎಸೆಯದಂತೆ ಎಚ್ಚರಿಕೆ ನೀಡಿದರೆ ನಾಯಿಗಳು ಮನುಷ್ಯನ ಮೇಲೆ ಎರಗುವ ಘಟನೆಗಳಿಗೂ ಬ್ರೇಕ್ ಬೀಳಬಹುದು.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು


### ಯಾವ ಪುರುಷಾರ್ಥಕ್ಕೆ ರಸ್ತೆಬದಿ ದೀಪಗಳು

ಮಾನ್ಯರೆ,

ಮೈಸೂರು ನಗರದ ಚಾಮರಾಜ ಜೋಡಿ ರಸ್ತೆಯ ಶಾಂತಲಾ ಚಿತ್ರಮಂದಿರದ ಸಿಗ್ನಲ್‌ನಲ್ಲಿ ಸೀತಾವಿಲಾಸ ಛತ್ರಕ್ಕೆ ಹೊಂದಿಕೊಂಡಂತೆ ಅಳವಡಿಸಿರುವ MCC/5037/P.61 SK ನಂಬರ್‌ನ ಒಂದೇ ಕಂಬದಲ್ಲಿ ಆರು ಅತಿ ಹೆಚ್ಚು ಪ್ರಕಾಶಮಾನವಾದ ದೀಪವನ್ನು ಹಾಕಿದ್ದರೂ, ಅದನ್ನು ಅಲ್ಲಿನ ಸಾಲು ಮರಗಳು ಹಾಗೂ ಇದರ ಸಮೀಪದ ಬೃಹತ್ ಮರವು ಅವರಿಸಿಕೊಂಡು ರಸ್ತೆಗೆ ಸ್ವಲ್ಪವೂ ಬೆಳಕು ಬೀಳದಂತೆ ಮಾಡಿವೆ. ಅಷ್ಟಕ್ಕೂ ಈ ರಸ್ತೆಯು ಮಂಗಳೂರು, ಮಡಿಕೇರಿ, ಹಾಸನ ಮುಂತಾದ ಜಿಲ್ಲೆಗಳಿಗೆ ತೆರಳುವ ಬಸ್‌ಗಳು ಸೇರಿದಂತೆ ಸದಾ ಅತೀ ಹೆಚ್ಚು ವಾಹನಗಳು ಸಂಚರಿಸುವುದರೊಂದಿಗೆ ಅತೀ ಗಣ್ಯರು ಸಹ ಇದೇ ಮಾರ್ಗದಲ್ಲಿ ತೆರಳುತ್ತಾರೆ. ಹಾಗಾಗಿ ಈವರೆವಿಗೂ ವಿದ್ಯುತ್ ಇಲಾಖೆಯಾಗಲಿ, ಮಹಾನಗರ ಪಾಲಿಕೆಯಾಗಲಿ ಈ ಬಗ್ಗೆ ಗಮನಹರಿಸಿ ಸರಿಪಡಿಸಿಲ್ಲ. ಅತೀ ಹೆಚ್ಚು ವಿದ್ಯುತ್ ಬಳಕೆಯಾದರೂ ಉಪಯೋಗಕ್ಕೆ ಬರದಂತಾಗಿದೆ. ತ್ವರಿತವಾಗಿ ಸಂಬಂಧಪಟ್ಟವರು ಕ್ರಮ ವಹಿಸುವಂತೆ ಮನವಿ.

–ಎನ್.ಕುಮಾರಸ್ವಾಮಿ, ಚಾಮರಾಜ ಮೊಹಲ್ಲಾ, ಮೈಸೂರು.

### ಪಾಲಿಕೆ ಅಧಿಕಾರಿಗಳು ನೋಡಲ್ಲ! ಅತ್ತ ಅವರು ಕೇರ್ ಮಾಡಲ್ಲ!!



ಮಾನ್ಯರೆ,

ಮೈಸೂರು ಯಾದವಗಿರಿಯ ಪ್ರಜಾಪಿತ ಬ್ರಹ್ಮಕುಮಾರೀಸ್ ಕೇಂದ್ರದ ಮುಂಭಾಗ ನಿರ್ಮಾಣ ಮಾಡುತ್ತಿರುವ ಕಟ್ಟಡದ ಮಾಲೀಕರು ತಮ್ಮ ಕಾಂಕ್ರಿಟ್ ಮಿಶ್ರಿತ ನೀರನ್ನು ರಸ್ತೆಗೆ ಹರಿಸುತ್ತಿದ್ದು, ಪಕ್ಕದ ಹೋಟೆಲ್‌ನಲ್ಲಿ ಊಟಕ್ಕೆ ಬರುವವರು ಪ್ರಯಾಸ ಪಟ್ಟು, ಹೈಜಂಪ್ ಸಾಹಸ ಮಾಡಿ ಹೋಗಬೇಕಾಗಿದೆ. ಮತ್ತೆ ಈ ಕಾಂಕ್ರೀಟ್ ಮಿಶ್ರಿತ ನೀರು ದೋಬಿ ಘಾಟ್ ವರೆಗೂ ರಸ್ತೆ ಎಡಗಡೆ ಹರಿದು ಹೇಸಿಗೆ ಉಂಟು ಮಾಡುತ್ತಿದೆ. ಈ ಕಟ್ಟಡಕ್ಕೆ 100 ಮೀಟರ್ ಅಂತರದಲ್ಲಿ ಪಾಲಿಕೆ ವಲಯ ಕಚೇರಿ ಇದ್ದರೂ ಅವರ್‍ಯಾರು ತಲೆಕೆಡಿಸಿಕೊಂಡಂತಿಲ್ಲ. ಇತ್ತ ಕಟ್ಟಡ ಮಾಲೀಕರು ಅವರಿಗೆ ಕೇರ್ ಮಾಡಿದಂತಿಲ್ಲ.

–ರಂಗಸ್ವಾಮಿ, ಎನ್.ಆರ್.ಮೊಹಲ್ಲಾ, ಮೈಸೂರು.



ರಾಘವೇಂದ್ರ ಸಿ.ಎಸ್.
ಕನ್ನಡ ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

# ಸೋಲು ಕೊನೆಯಲ್ಲ, ಗೆಲುವಿಗೆ ಅಂತಿಮವಿಲ್ಲ

ಜೀವನವೇ ಒಂದು ಬಗೆಯ ಆಟ. ಈ ಆಟದಲ್ಲಿ ಸೋಲು ಗೆಲುವು ಎಂಬ ಎರಡು ಅಂಶಗಳು ಅಡಕವಾಗಿರುತ್ತವೆ. ಗೆದ್ದಾಗ ಏನನ್ನೊ ಸಾಧಿಸಿದ ಆನಂದ ದೊರೆತರೆ, ಸೋತಾಗ ನೋವಿನ ಭಾವ ಕಾಡುವುದು ಸಹಜ. ಆದರೆ ಸೋಲೇ ಅಂತಿಮವಲ್ಲ ಕೊನೆಯ ತುದಿಯಲ್ಲ, ಸೋಲೇ ಗೆಲುವಿನ ಸೋಪಾನ ಎಂದು ಭಾವಿಸಿ ಸದರಿ ಸೋಲಿಗೆ ಕಾರಣವೇನು ಎಂದು ಪಾಠ ಕಲಿತು ಮತ್ತೆ ಪ್ರಯತ್ನದ ಕಡೆ ಮುಖ ಮಾಡಬೇಕೇ ವಿನಃ ಇಲ್ಲಿಗೆ ಜೀವನವೇ ಮುಗಿಯಿತು ಎಂದು ಭಾವಿಸಬಾರದು. ನಿತ್ಯ ಸೋತರು ಗೆದ್ದಾಗ ದೊರೆಯುವ ನಗುವಿನ ಒಂದು ದಿನ ಬಂದೇ ಬರುತ್ತದೆ. ಇಟ್ಟ ಹೆಜ್ಜೆಯನ್ನು ಮುಂದಿಡಬೇಕೇ ಹೊರತು ಹಿಂದೆಯಲ್ಲ. ಯಾರಿಗೆ ಗೊತ್ತು ಇನ್ನು ಮುಂದೆ ಇಡುವ ಹೆಜ್ಜೆ ಇತಿಹಾಸವನ್ನೇ ಬರೆಯಬಹುದು. ಮುಂದಿಡುವ ಹೆಜ್ಜೆಯಲ್ಲಿ ದೃಢತೆಯಿರಲಿ, ಪರಿಶ್ರಮದ ಬೆವರೂ ಇರಲಿ.

ಬದುಕಿನ ಈ ಪಯಣದಲ್ಲಿ ಸೋಲು ಗೆಲುವು ಸಾಮಾನ್ಯವಾಗಿ ಇರುವಂತದ್ದು. ಕೆಲವರಿಗೆ ಗೆಲುವು ನಿರಂತರವಾಗಿ ಕಂಡು ಬಂದರೆ ಮತ್ತೆ ಕೆಲವರಿಗೆ ಸೋಲು ಬೆಂಬಿಡದ ಭೂತವಾಗಿ ಕಾಡುತ್ತದೆ. ಹಾಗೆ ನೋಡಿದರೆ ಗೆಲುವು ಪಡೆದವರೆಲ್ಲ ಒಂದಾನೊಂದು ಸಮಯದಲ್ಲಿ ಸೋಲಿನ ರುಚಿ ಕಂಡವರೇ ಆಗಿರುತ್ತಾರೆ. ಏಕೆಂದರೆ ಬದುಕು ಹೂವಿನ ಹಾಸಿಗೆಯಲ್ಲ. ಅದು ಕಲ್ಲು ಮುಳ್ಳಿನ ಹಾದಿಯಲ್ಲಿ ಸಾಗಬೇಕಾದ ಪಯಣ, ಈ ಪಯಣದಲ್ಲಿ ಹಲವರು ಸೋತು ಪಲಾಯನ ಮಾಡಿದರೆ, ಗೆಲ್ಲಲೇಬೇಕೆಂಬ ಪಣತೊಟ್ಟವರು ಏನೇ ಸೋಲುಗಳು ಎದುರಾದರೂ ಪ್ರಯತ್ನಗಳನ್ನು ಬತ್ತಳಿಕೆಯಲ್ಲಿರಿಸಿಕೊಂಡು ಧೈರ್ಯವಾಗಿ ನಿಂತು ಗೆಲುವಿನ ಪತಾಕೆಯನ್ನು ಹಾರಿಸುತ್ತಾರೆ.

**ಸೋಲಿಗೆ ಅಂಜಬೇಡಿ**

ಯಾವುದಾದರೂ ಗುರಿಯನ್ನು ಹಿಡಿದು ಹೊರಟಾಗ ಆರಂಭದಲ್ಲಿ ಇರುವ ಶೂರತ್ವ ನಂತರದ ಸಮಯದಲ್ಲಿ ಇನ್ನಿಲ್ಲದಂತೆ ಮರೆಯಾಗುತ್ತದೆ. ಗುರಿಯ ಕಡೆಗಿನ ಪ್ರಯತ್ನಕ್ಕಿಂತ ಆ ದಾರಿಯಲ್ಲಿ ಎದುರಾಗುವ ಸೋಲುಗಳ ಭಯ ಇನ್ನಿಲ್ಲದಂತೆ ಕಾಡುತ್ತದೆ. ಆಕಸ್ಮಿಕವಾಗಿ ನನ್ನ ಗುರಿಯನ್ನು ಸೋತರೆ, ಸೋಲು ಎದುರಾದರೆ ಏನು ಮಾಡಬೇಕೆಂಬುದನ್ನು ತಿಳಿಯದೆ ಅಂಜಿಕೆಯಿಂದ ಹಿಂದೆ ಸರಿಯುವ ಕೆಲಸವನ್ನು ಮಾಡುತ್ತಾರೆ.

ಸಾಧಕರೆಂದು ಕರೆಸಿಕೊಂಡವರೆಲ್ಲ ಒಂದೇ ಬಾರಿಗೆ ಗೆಲುವನ್ನು ಪಡೆದವರಲ್ಲ, ನಿರಂತರವಾದ ಶ್ರಮ, ಸತತ ಪ್ರಯತ್ನ, ಗುರಿಯನ್ನು ತಲುಪಿಯೇ ತೀರುವೆನೆಂಬ ಭರವಸೆ, ಸೋಲಿಗೆ ಅಂಜದೆ ಮುನ್ನುಗುವ ಛಲ ಯಾರಲ್ಲಿರುತ್ತದೆಯೋ ಅವರೆಲ್ಲರೂ ಸಾಧನೆಯ ಹಾದಿಯಲ್ಲಿ ಯಶಸ್ಸನ್ನು ಪಡೆದಿದ್ದಾರೆ. ಸೋಲು ಗೆಲುವಿಗೆ ಸೋಪಾನವಿದ್ದಂತೆ, ಸೋಲು ಕಲಿಸುವ ಪಾಠ ಗೆಲುವು ಕಲಿಸಲಾರದು, ಆದ್ದರಿಂದ ಸೋಲಿಗೆ ಅಂಜದೆ ಮುನ್ನುಗ್ಗುವ ಛಲ ನಮ್ಮಲ್ಲಿದ್ದರೆ ಒಂದಲ್ಲಾ ಒಂದು ದಿನ ಗೆಲುವು



ನಮ್ಮದಾಗುತ್ತದೆ. ಇದಕ್ಕೆ ತಾಜಾ ಉದಾಹರಣೆ ಎಂದರೆ ಬೆಂಗಳೂರು ರಾಯಲ್ ಚಾಲೆಂಜರ್ಸ್ ತಂಡ. 18 ವರ್ಷಗಳಿಂದ ಗೆಲ್ಲಲು ಸಾಧ್ಯವಾಗದ ಐಪಿಎಲ್ ಟ್ರೋಫಿಯನ್ನು ಈ ಬಾರಿ ಗೆದ್ದು ಇತಿಹಾಸ ನಿರ್ಮಿಸಿದ್ದನ್ನು ನೆನಪಲ್ಲಿಟ್ಟುಕೊಳ್ಳಬಹುದು.

**ನಿರಂತರ ಪ್ರಯತ್ನ ಫಲ ನೀಡುತ್ತದೆ**

ಗುರಿಯನ್ನು ಮುಟ್ಟುವ ಆತ್ಮವಿಶ್ವಾಸ ನಮ್ಮಲ್ಲಿದ್ದಾಗ ಅದಕ್ಕೆ ಪ್ರಯತ್ನವೂ ಕೂಡ ಮುಖ್ಯವಾಗಿರುತ್ತದೆ. ಈ ಪ್ರಯತ್ನ ಕೇವಲ ಒಮ್ಮೆ ಮಾತ್ರ ಇದ್ದು ಮತ್ತೊಮ್ಮೆ ಕಣ್ಮರೆಯಾಗುವಂತದಲ್ಲ. ನಿರಂತರವಾದ ಪ್ರಯತ್ನ ಖಂಡಿತವಾಗಿಯೂ ಫಲವನ್ನು ನೀಡಿಯೇ ನೀಡುತ್ತದೆ. ಆದರೆ ಪ್ರಯತ್ನಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸಬಾರದು.

ಸಾಧನೆಯ ಹಾದಿಯಲ್ಲಿ ನಿರಂತರ ಪ್ರಯತ್ನ ಪ್ರಮುಖವಾದದ್ದು. ಯಾವುದೇ ಕಾರಣಕ್ಕೂ ಈ ಪ್ರಯತ್ನವನ್ನು ನಿಲ್ಲಿಸದೆ ಮುಂದುವರಿಸಿದ್ದಲ್ಲಿ ಖಂಡಿತವಾಗಿಯೂ ಯಶಸ್ಸು ಸಿಗುತ್ತದೆ. ಉದಾಹರಣೆಯಾಗಿ ನೋಡುವುದಾದರೆ ಮಹಾಭಾರತದಲ್ಲಿ ದ್ರೋಣಾಚಾರ್ಯರ ನೆರವು ಸಿಗದಿದ್ದರೂ ಸತತವಾಗಿ ಪರಿಶ್ರಮವನ್ನು, ಪ್ರಯತ್ನವನ್ನು ಹಾಕಿದ್ದರ ಫಲವಾಗಿ ಅರ್ಜುನನಿಗೆ ಸರಿಸಮನಾಗಿ ನಿಲ್ಲುವ ಮಟ್ಟಕ್ಕೆ ಏಕಲವ್ಯ ಬೆಳೆಯುತ್ತಾನೆ. ಮುಂದೆ ದ್ರೋಣಾಚಾರ್ಯರ ಸಂದಿಗ್ಧ ಪರಿಸ್ಥಿತಿಗೆ ತನ್ನ ಬಲಗೈ ಹೆಬ್ಬೆರಳನ್ನೇ ಗುರು ಕಾಣಿಕೆಯಾಗಿ ಕೊಡಬೇಕಾದ ಸಂದರ್ಭ ಎದುರಾದರೂ ನಂತರವೂ ಕೂಡ ಎಡಗೈಯಲ್ಲಿ ಬಾಣವನ್ನು ಬಿಡುವ ಅಭ್ಯಾಸವನ್ನು ಮಾಡಿ ಅದರಲ್ಲಿಯೂ ಪರಿಣಿತಿಯನ್ನು ಹೊಂದಿ ಏಕಲವ್ಯ ನಿಜಕ್ಕೂ ಮಾದರಿ ವ್ಯಕ್ತಿಯಾಗಿ ನಮ್ಮೆದುರು ನಿಲ್ಲಬಲ್ಲನು.

**ಕುಗ್ಗದಿರಲಿ ಭರವಸೆ**

ವಿಭಿನ್ನವಾಗಿ ಆಲೋಚಿಸಿ ಬೇರೆ ಮಾರ್ಗದಲ್ಲಿ ನಡೆಯಲು ಪ್ರಾರಂಭಿಸಿದಾಗ ಅದನ್ನು ಪ್ರೋತ್ಸಾಹಿಸುವುದಕ್ಕಿಂತ ನಿರಾಕರಿಸುವವರೇ ಹೆಚ್ಚಾಗಿ ಕಂಡು ಬರುತ್ತಾರೆ. ಇಂತಹ ಸಂದರ್ಭದಲ್ಲಿ ನಮ್ಮ ಬಗ್ಗೆ ನಮಗೆ ಮೊದಲು ಭರವಸೆ ಇರಬೇಕು. ಅಷ್ಟೇ ಅಲ್ಲ ಆತ್ಮವಿಶ್ವಾಸವೂ ಅತಿ ಅಗತ್ಯ. ಏನೇ ಆದರೂ ನನ್ನ ಗುರಿಯನ್ನು ತಲುಪುವನೆಂಬ ಭರವಸೆ ನಮ್ಮಲ್ಲಿದ್ದರೆ ಎಂತಹ ಅಪಮಾನ, ಅವಮಾನಗಳು ಎದುರಾದರೂ ಮುನ್ನುಗ್ಗಬಹುದು. ನಾವು ಮಾಡುವ ಕೆಲಸದ ಬಗ್ಗೆ ಶ್ರದ್ಧೆ, ಪ್ರಾಮಾಣಿಕತೆ, ಭರವಸೆಗಳು ನಮ್ಮಲ್ಲಿದ್ದರೆ ಫಲಿತಾಂಶ ಏನೇ ಬಂದರೂ ಅದರ ಬಗ್ಗೆ ತಲೆಕೆಡಿಸಿಕೊಳ್ಳದೆ ನಮ್ಮ ಗುರಿಯ ಕಡೆಗೆ ಗಮನಹರಿಸಬಹುದು.

ಮಾಡಿದ ಸಿನಿಮಾಗಳೆಲ್ಲ ಸೋತು ಸುಣ್ಣವಾದರೂ ಕೋನ್ ಬನೇಗಾ ಕೋಟ್ಯಾಧಿಪತಿ ಕಾರ್ಯಕ್ರಮದೊಂದಿಗೆ ಮತ್ತೆ ಫೀನಿಕ್ಸ್‌ನಂತೆ ಎದ್ದು ಬಂದ ಅಮಿತಾಬ್ ಬಚ್ಚನ್ ಆಗಲೀ, ತೊಂಬತ್ತರ ಕಾಲಘಟ್ಟದಲ್ಲಿಯೇ ನಾಲ್ಕು ಭಾಷೆಗಳಲ್ಲಿ ಸಿನಿಮಾ ಮಾಡುವೆನೆಂಬ ಸಾಹಸಕ್ಕೆ ಕೈ ಹಾಕಿ ಸೋತರೂ ಇವತ್ತಿಗೂ ಆತ್ಮವಿಶ್ವಾಸದಿಂದ ಗೆಲುವನ್ನು ಪಡೆದೆ ತೀರುವೆನೆಂಬ ಭರವಸೆಯ ಚಿಲುಮೆ ಕನಸುಗಾರ ವಿ.ರವಿಚಂದ್ರನ್ ಆಗಲೀ ಸೋತೆ ಎಂದು ಕೈಚೆಲ್ಲಿ ನಿಲ್ಲುವವರಿಗೆ ಭರವಸೆಯ ನಂದಾದೀಪವಾಗಿ ನಿಲ್ಲಬಲ್ಲವರಾಗಿರುತ್ತಾರೆ.

> “ಸೋಲಿಗೆ ಕಾರಣಗಳನ್ನು ಹುಡುಕುವ ಬದಲು ಗೆಲುವಿಗೆ ಇರುವ ಸಾಧ್ಯತೆಗಳನ್ನು ಅರಸುತ್ತ ನಡೆದರೆ ಖಂಡಿತವಾಗಿ ಯಶಸ್ಸು ನಮದಾಗುವುದರಲ್ಲಿ ಎರಡು ಮಾತಿಲ್ಲ. ಯಾವುದೇ ಸೋಲು ಕೊನೆಯಲ್ಲ, ಹಾಗೆಯೇ ಗೆಲುವಿಗೆ ಅಂತಿಮವೆಂಬುದು ಇರುವುದಿಲ್ಲ. ಹುಟ್ಟಿ ಬಂದ ದಿನದಿಂದ ಒಂದಲ್ಲಾ ಒಂದು ಬಗೆಯಲ್ಲಿ ಕಲಿಯುತ್ತಾ ಕಲಿತ್ತದ್ದನ್ನು ರೂಢಿಸಿಕೊಳ್ಳುತ್ತಾ ನೋವಿರಲಿ, ನಲಿವಿರಲಿ, ಸೋಲಿರಲಿ, ಗೆಲುವಿರಲಿ ಸಮಚಿತ್ತ ಭಾವದಿಂದ ಜೀವನ ಸಾಗಿಸಿಕೊಂಡು ಬದುಕುವುದೇ ನಿಜವಾದ ಸಾರ್ಥಕತೆ.

**ಸೋಲೇ ಕೊನೆಯಲ್ಲ, ಗೆಲುವಿಗೆ ಅಂತಿಮವಿಲ್ಲ**

ಸೋಲುಗಳು ಮತ್ತೆ ಮತ್ತೆ ಎದುರಾದಾಗ ಆತ್ಮವಿಶ್ವಾಸ ಕುಗ್ಗುವುದು ಸಹಜ, ಆದರೆ ತಿಳಿದುಕೊಳ್ಳಬೇಕಾದ ವಿಚಾರ ಹೊಂದಿದೆ. ಯಾವುದೇ ಸೋಲು ಕೊನೆಯಲ್ಲ, ಗೆಲುವು ಎಂಬುದಕ್ಕೆ ಕೊನೆಯೇ ಇರುವುದಿಲ್ಲ. ಈ ಸತ್ಯ ಅರ್ಥವಾದರೆ ಏನನ್ನು ಬೇಕಾದರೂ ಸಾಧಿಸಲು ಸಾಧ್ಯವಿದೆ. ಸೋಲದೇ ಗೆಲುವನ್ನು ಪಡೆದರೆ ಅದು ಸಂತಸವನ್ನುಂಟು ಮಾಡಬಹುದು, ಅದೇ ಸೋತು ಗೆಲುವನ್ನು ಪಡೆದರೆ ಅದು ಇತಿಹಾಸವನ್ನೇ ಸೃಷ್ಟಿಸಬಲ್ಲದು. ಥಾಮಸ್ ಅಲ್ವಾ ಎಡಿಸನ್ ತನ್ನ ಪ್ರಯತ್ನದಲ್ಲಿ ಪ್ರತಿಬಾರಿ ಸೋಲು ಎದುರಾದಾಗಲು ಅದಕ್ಕೆ ತಲೆಕೆಡಿಸಿಕೊಳ್ಳದೆ ತನ್ನ ಪ್ರಯತ್ನವನ್ನು ಮುಂದುವರಿಸಿ ಗೆಲುವನ್ನು ಪಡೆದದ್ದು ಈಗ ಇತಿಹಾಸವಾಗಿ ಉಳಿದಿದೆ.

**ಅವಮಾನ, ಅನುಮಾನ, ಸನ್ಮಾನ**

ಯಾವುದೇ ಒಂದು ಗುರಿಯನ್ನು ಬೆನ್ನಟ್ಟಿದಾಗ ಮೊದಲು ಎದುರಾಗುವುದು ಅವಮಾನ, ಅಪಮಾನಗಳು. ಇವುಗಳನ್ನು ಎದುರಿಸಿ ಮುನ್ನುಗ್ಗಿ ನಡೆದಾಗ ಮಾತ್ರ ಸಾಧನೆ ಸಾಧ್ಯವಾಗುತ್ತದೆ. 12ನೇ ಶತಮಾನದಲ್ಲಿ ಇಡೀ ವರ್ಣ ವ್ಯವಸ್ಥೆಯನ್ನೇ ವಿರೋಧಿಸಿದ ಬಸವಣ್ಣನಾಗಲಿ, ಅಪಮಾನದ ಬೆಂಕಿಯ ಬೇಗೆಯಲ್ಲಿ ಮುಳುಗಿ ಎದ್ದು ಬಂದ ಡಾ.ಬಿ.ಆರ್.ಅಂಬೇಡ್ಕರ್ ಆಗಲೀ, ಮಹಿಳೆಯರಿಗೆ ಅಕ್ಷರ ಕ್ರಾಂತಿಯನ್ನು ಉಣಬಡಿಸಿದ ಸಾವಿತ್ರಿ ಬಾಯಿ ಫುಲೆಯಾಗಲೀ... ಹೀಗೆ ಸಾಧನೆಯ ಶಿಖರದಲ್ಲಿ ಮಿಂದೆದ್ದು ಬಂದವರೆಲ್ಲ ಮೊದಲಿಗೆ ಅವಮಾನ ಅನುಭವಿಸಿದವರೇ. ಆದರೆ ತಮ್ಮ ಛಲ ಬಿಡದ ಕಾರ್ಯಗಳಿಂದ, ಮಾಡಿದ ಸಾಧನೆಗಳಿಂದ ಇಂದಿಗೂ ಜೀವಂತವಾಗಿ ಉಳಿದು ಸನ್ಮಾನಕ್ಕೆ ಪಾತ್ರರಾಗಿದ್ದಾರೆ. ಅವಮಾನ ಮಾಡಿದವರೇ ಅನುಮಾನಪಡುವ ಹಾಗೇ ಮುಂದೆ ಅವರಿಂದಲೇ ಸನ್ಮಾನ ಪಡೆಯುವವರಾಗೇ ಬೆಳೆದು ನಿಂತು ಬದುಕು ನಡೆಸಬೇಕು. ಅಂತಹ ಬದುಕು ಶಾಶ್ವತವಾಗಿ ನೆನಪಿನಲ್ಲಿ ಉಳಿಯುತ್ತದೆ.

**ನಿಮ್ಮಿಂದ ಸಾಧ್ಯವಿದೆ, ಪ್ರಯತ್ನಿಸಿ ನೋಡಿ**

ಅಸಾಧ್ಯವಾದದನ್ನು ಸಾಧ್ಯವಾಗಿಸುವ ಶಕ್ತಿ ಪ್ರತಿಯೊಬ್ಬರಲ್ಲೂ ಇರುತ್ತದೆ. ಪ್ರಯತ್ನಿಸಿ ನೋಡಬೇಕು ಅಷ್ಟೇ. ನನ್ನಿಂದ ಸಾಧ್ಯವೇ ಎಂಬ ಅನುಮಾನವನ್ನು ವ್ಯಕ್ತಪಡಿಸದೆ ಸಾಧ್ಯ ಎಂಬ ಭರವಸೆಯೊಂದಿಗೆ ಮುನ್ನುಗಿದ್ದರೆ ಯಶಸ್ಸು ನಮ್ಮದಾಗುತ್ತದೆ. ಹುಟ್ಟುವಾಗಲೇ ಎರಡು ಕೈಗಳಿಲ್ಲದೆ ಜನ್ಮ ಪಡೆದ ಹೆಣ್ಣು ಮಗುವನ್ನು ಅವರ ಪೋಷಕರು ನೋಡಿ ಕಂಗಾಲಾದರು. ಆದರೂ ಹೆದರಿಲಿಲ್ಲ, ಮಗುವಿನ ಪಾಲನೆಗೆ ನಿಂತರು. ಅವಳ ಪ್ರತಿಯೊಂದು ಪ್ರಯತ್ನಕ್ಕೂ ಪ್ರೋತ್ಸಾಹವನ್ನು ಕೊಡುತ್ತಾ ಅವಳು ಮಾಡುವ ಸಣ್ಣ, ಸಣ್ಣ ಸಾಧನೆಯನ್ನು ಮೆಚ್ಚಿ ಜೆಸ್ಸಿಕಾ ಕಾಕ್ಸ್ ಅಲ್ಲಿ ಧೈರ್ಯವನ್ನು ತುಂಬಿದರು. ಇದರ ಪರಿಣಾಮವಾಗಿ ಅವಳು ತನ್ನ 8–10ನೇ ವಯಸ್ಸಿನಲ್ಲಿ ಕೈಗಳಿಲ್ಲದೆ ಈಜುವುದನ್ನು ಕಲಿತಳು.

ಅಷ್ಟೇ ಅಲ್ಲ ಈಜು ಸ್ಪರ್ಧೆಯಲ್ಲಿ ಪ್ರಶಸ್ತಿಯನ್ನು ಪಡೆದಳು. ಈ ಪ್ರಶಸ್ತಿಯನ್ನು ಪಡೆಯುವಾಗ ಮತ್ತೊಬ್ಬ ಹುಡುಗಿ ಕರಾಟೆಯಲ್ಲಿ ಪ್ರಶಸ್ತಿ ಪಡೆದಿರುವುದನ್ನು ನೋಡಿ ತಾನು ಕರಾಟೆ ಕಲಿಯುವುದಾಗಿ ತನ್ನ ತಂದೆ ಬಳಿ ಹೇಳಿದಾಗ ತಂದೆಯಿಂದ ಅನುಮತಿ ದೊರೆಯಿತು. ಕರಾಟೆ ಕಲಿಸುವವರು ನಿರಾಕರಿಸಿದಾಗ ಅವರನ್ನು ಓಲೈಸಿ ಕರಾಟೆ ಕಲಿತು ಕರಾಟೆ ಚಾಂಪಿಯನ್ ಶಿಪ್ ಅಲ್ಲಿ ಬ್ಲ್ಯಾಕ್ ಬೆಲ್ಟ್ ಪಡೆದಳು.

ಇಷ್ಟಕ್ಕೆ ಅವಳ ಕಥೆ ಮುಗಿಯುವುದಿಲ್ಲ. ತನ್ನ ಕಾಲಿನಿಂದಲೇ ಗಂಟೆಗೆ 80 ಕಿ.ಮೀ ವೇಗದಲ್ಲಿ ಕಾರನ್ನು ಓಡಿಸುವುದನ್ನು ಕಲಿತಳು.ಮುಂದೆ ಇಡೀ ಜಗತ್ತಿಗೆ ಮೊದಲ ಬಾರಿಗೆ ಕೈಗಳಿಲ್ಲದೆ ಬರಿ ಕಾಲುಗಳಿಂದಲೇ ವಿಮಾನ ಚಲಾಯಿಸುವ ಮೂಲಕ ಕಾಲುಗಳಿಂದ ವಿಮಾನ ಚಲಾಯಿಸಿದ ಮೊದಲ ಮಹಿಳಾ ಪೈಲಟ್ ಜೆಸ್ಸಿಕಾ ಕಾಕ್ಸ್ ಆಯ್ಕೆಯಾದರು.

ಸೋಲಿಗೆ ಕಾರಣಗಳನ್ನು ಹುಡುಕುವ ಬದಲು ಗೆಲುವಿಗೆ ಇರುವ ಸಾಧ್ಯತೆಗಳನ್ನು ಅರಸುತ್ತಾ ನಡೆದರೆ ಖಂಡಿತವಾಗಿ ಯಶಸ್ಸು ನಮದಾಗುವುದರಲ್ಲಿ ಎರಡು ಮಾತಿಲ್ಲ. ಯಾವುದೇ ಸೋಲು ಕೊನೆಯಲ್ಲ. ಹಾಗೆಯೇ ಗೆಲುವಿಗೆ ಅಂತಿಮವೆಂಬುದು ಇರುವುದಿಲ್ಲ. ಹುಟ್ಟಿ ಬಂದ ದಿನದಿಂದ ಒಂದಲ್ಲಾ ಒಂದು ಬಗೆಯಲ್ಲಿ ಕಲಿಯುತ್ತಾ ಕಲಿತ್ತದ್ದನ್ನು ರೂಢಿಸಿಕೊಳ್ಳುತ್ತಾ ನೋವಿರಲಿ ನಲಿವಿರಲಿ, ಸೋಲಿರಲಿ ಗೆಲುವಿರಲಿ ಸಮಚಿತ್ತ ಭಾವದಿಂದ ಜೀವನವನ್ನು ಸಾಗಿಸಿಕೊಂಡು ಬದುಕುವುದೇ ನಿಜವಾದ ಸಾರ್ಥಕತೆ.

# ಸೆರೆಸಿಕ್ಕ ವನ್ಯಜೀವಿಗಳ ಸಂರಕ್ಷಣೆಗೂ ಇಲವಾಲದ ಮೃಗಾಲಯ ಪುನರ್ವಸತಿ ಕೇಂದ್ರದಲ್ಲಿ ಸ್ಥಳಾಭಾವ

● ಅರಣ್ಯ ಇಲಾಖೆಯಿಂದಲೇ ಹೆಚ್ಚುವರಿ ಕೊಠಡಿ ನಿರ್ಮಾಣ ಕಾರ್ಯ ಆರಂಭ ● ಅಲ್ಲಿವರೆಗೆ ಸೆರೆ ಸಿಕ್ಕ ಪ್ರಾಣಿಗಳು ಬನ್ನೇರುಘಟ್ಟಕ್ಕೆ ಸ್ಥಳಾಂತರ

ಮೈಸೂರು,ನ.17(ಎಂಟಿವೈ)– ಬಂಡೀಪುರ ಹಾಗೂ ನಾಗರಹೊಳೆ ಕಾಡಂಚಿನ ಗ್ರಾಮಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿದ್ದು, ಸೆರೆ ಹಿಡಿದ ಹುಲಿ, ಚಿರತೆಗಳ ಆರೈಕೆಗಾಗಿ ಮೈಸೂರಿನ ಇಲವಾಲದಲ್ಲಿ ಉದ್ದೇಶಿಸಿರುವ ಪುನರ್ವಸತಿ ಕೇಂದ್ರದ ನಿರ್ಮಾಣ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಒತ್ತಡ ಹೆಚ್ಚಾಗುತ್ತಿದೆ.

ಮೈಸೂರು, ಚಾಮರಾಜನಗರ ಜಿಲ್ಲೆಯಲ್ಲಿ ಕಾಡಂಚಿನ ಗ್ರಾಮಗಳ ವಾಸಿಗಳಿಗೆ ಉಪಟಳ ನೀಡುತ್ತಿರುವ ಹುಲಿ, ಚಿರತೆಗಳ ಸೆರೆ ಕಾರ್ಯಾಚರಣೆ ನಿರಂತರವಾಗಿ ನಡೆಯುತ್ತಿರುವುದರಿಂದ ಇಲ್ಲಿ ಸೆರೆ ಸಿಕ್ಕ ಮಾಂಸಾಹಾರಿ ಪ್ರಾಣಿಗಳ ಪಾಲನೆ–ಪೋಷಣೆಗೆ ಮೈಸೂರು ತಾಲೂಕಿನ ಕೂರ್ಗಳ್ಳಿಯಲ್ಲಿರುವ ಮೈಸೂರು ಮೃಗಾಲಯ ಪ್ರಾಣಿಗಳ ಪುನರ್ವಸತಿ ಕೇಂದ್ರದಲ್ಲಿ ಸ್ಥಳದ ಅಭಾವ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಕಳೆದ ಕೆಲವು ವರ್ಷಗಳಿಂದ ಅರಣ್ಯ ಇಲಾಖೆ ವತಿಯಿಂದಲೇ ಹೊಸದಾಗಿ ನಿರ್ಮಿಸಲು ಉದ್ದೇಶಿಸಿರುವ ಪ್ರಾಣಿಗಳ ಪುನರ್ವಸತಿ ಕೇಂದ್ರ ಪೂರ್ಣಗೊಳಿಸುವ ಬೇಡಿಕೆ ವ್ಯಕ್ತವಾಗಿದೆ.

ಕರ್ನಾಟಕ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ಕೂರ್ಗಳ್ಳಿಯಲ್ಲಿರುವ 'ಚಾಮುಂಡಿ ವನ್ಯಜೀವಿ ರಕ್ಷಣೆ, ಸಂರಕ್ಷಣೆ ಹಾಗೂ ಪುನರ್ವಸತಿ ಕೇಂದ್ರ' 132 ಎಕರೆ ವಿಸ್ತೀರ್ಣ ಹೊಂದಿದ್ದು, ರಕ್ಷಿಸಲ್ಪಟ್ಟ ಪ್ರಾಣಿಗಳ ಆರೈಕೆಯೊಂದಿಗೆ ಪಾಲನೆ ಮಾಡಲು ಬೇಕಾದ ನೈಸರ್ಗಿಕ ವಾತಾವರಣವಿದೆ. ಮೈಸೂರು, ಚಾಮರಾಜನಗರ,



ಕೂರ್ಗಳ್ಳಿ ಪುನರ್ವಸತಿ ಕೇಂದ್ರ.

ಕೊಡಗು, ಮಂಡ್ಯ ಭಾಗದಲ್ಲಿ ಸೆರೆ ಹಿಡಿದ ಚಿರತೆ, ಹುಲಿಗಳ ಆರೈಕೆಗಾಗಿ ಇದುವರೆಗೂ ಕೂರ್ಗಳ್ಳಿಯಲ್ಲಿರುವ ಪುನರ್ವಸತಿ ಕೇಂದ್ರಕ್ಕೆ ರವಾನಿಸಲಾಗುತ್ತಿತ್ತು. ಆದರೆ, ಇದೀಗ ಪುನರ್ವಸತಿ ಕೇಂದ್ರದಲ್ಲಿ ಪ್ರಾಣಿಗಳ ಆರೈಕೆಗೆ ಸ್ಥಳಾಭಾವ ಉಂಟಾಗಿದೆ. ಆ ಕಾರಣದಿಂದಲೇ ಹೆಚ್ಚುವರಿ ಹುಲಿಗಳನ್ನು ಬೆಂಗಳೂರಿನ ಬನ್ನೇರುಘಟ್ಟದ ಪುನರ್ವಸತಿ ಕೇಂದ್ರಕ್ಕೆ ರವಾನಿಸಲಾಗುತ್ತಿದೆ.

**ಕೊಠಡಿಗಳೇ ಇಲ್ಲ:** ಕೂರ್ಗಳ್ಳಿ ಪುನರ್ವಸತಿ ಕೇಂದ್ರದಲ್ಲಿ 10 ಹುಲಿ, 10 ಚಿರತೆ ಆರೈಕೆಗೆ ಮಾತ್ರವೇ ಸ್ಥಳಾವಕಾಶವಿದೆ. ದಶಕದ ಹಿಂದೆ ನಿರ್ಮಿಸಿರುವ ಪುನರ್ವಸತಿ ಕೇಂದ್ರದ ಕೊಠಡಿಗಳು ಆ ಕಾಲಕ್ಕೆ ಸೂಕ್ತವಾಗಿದ್ದವು. ಆದರೆ, ಇತ್ತೀಚಿನ ವರ್ಷಗಳಲ್ಲಿ ಮೈಸೂರು–ಚಾಮರಾಜನಗರ, ಕೊಡಗು ಭಾಗದಲ್ಲಿ ಉಪಟಳ ನೀಡುತ್ತಿರುವ ಹುಲಿ, ಚಿರತೆಗಳು ಹೆಚ್ಚಿನ ಸಂಖ್ಯೆಯಲ್ಲಿ ಸೆರೆ ಸಿಗುತ್ತಿವೆ. ಅವುಗಳನ್ನು ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ರವಾನಿಸುತ್ತಿರುವುದರಿಂದ ಇದೀಗ ಈ ಪುನರ್ವತಿ ಕೇಂದ್ರದಲ್ಲಿ ಮಾಂಸಾಹಾರಿ ಪ್ರಾಣಿಗಳಿಗೆ ಆಶ್ರಯ ನೀಡಲು ಕೊಠಡಿಗಳಿಲ್ಲದಂತಾಗಿದೆ.

**ಆಶ್ರಯ ಪಡೆದ ಪ್ರಾಣಿಗಳು:** ಈ ಪುನರ್ವಸತಿ ಕೇಂದ್ರದಲ್ಲಿ ಪ್ರಸ್ತುತ 7 ಹೆಣ್ಣು, 5 ಗಂಡು ಸೇರಿದಂತೆ 12 ಹುಲಿಗಳು, 10 ಚಿರತೆಗಳಿವೆ. ಹಾಗೆಯೇ 4 ಆನೆಗಳಿವೆ. ಇತ್ತೀಚೆಗೆ ಸರಗೂರು ಭಾಗದಲ್ಲಿ ಹಿಡಿದ 10 ಹುಲಿ, ಹುಣಸೂರು ಭಾಗದಲ್ಲಿ 1 ಮರಿ ಸೇರಿದಂತೆ 11 ಹುಲಿಗಳಲ್ಲಿ 5 ಹುಲಿಗಳನ್ನು ಕೇಂದ್ರದಲ್ಲಿಟ್ಟುಕೊಳ್ಳಲಾಗಿದ್ದು, ಎರಡು ನವಜಾತ ಮರಿಯನ್ನು ಬೆಂಗಳೂರಿನ ಬನ್ನೇರುಘಟಕ್ಕೆ ಸ್ಥಳಾಂತರಿಸಲಾಗಿದೆ. ಅಲ್ಲದೆ, ಗುಂಡ್ಲುಪೇಟೆ ಬಫರ್ ಜೋನ್‌ನಲ್ಲಿ ಮೂರು ಮರಿಗಳೊಂದಿಗೆ ಸೆರೆ ಹಿಡಿದ ತಾಯಿ ಹುಲಿಯನ್ನು ಬೇರೆಡೆ ನಿಗಾ ವಹಿಸಲಾಗಿದೆ. ಇನ್ನು ಮುಂದಿನ ದಿನಗಳಲ್ಲಿ ಸೆರೆ ಹಿಡಿದ ಹುಲಿ ಅಥವಾ ಚಿರತೆಗಳನ್ನು ಕೂರ್ಗಳ್ಳಿ ಪುನರ್ವಸತಿ ಕೇಂದ್ರದಲ್ಲಿಟ್ಟುಕೊಳ್ಳಲು ಸ್ಥಳಾಭಾವ ಉಂಟಾಗಿರುವುದರಿಂದ ಸಂಭವನೀಯ ಸೆರೆ ಸಿಕ್ಕ ಮಾಂಸಾಹಾರಿ ಪ್ರಾಣಿಗಳನ್ನು ಬನ್ನೇರುಘಟ್ಟಕ್ಕೆ ಸ್ಥಳಾಂತರಿಸಲು ನಿರ್ಧರಿಸಲಾಗಿದೆ.

**ಚೇತರಿಸಿಕೊಂಡ ಹುಲಿಗಳು:** ಪುನರ್ವಸತಿ ಕೇಂದ್ರದಲ್ಲಿರುವ 12 ಹುಲಿಗಳಲ್ಲಿ ಎರಡು ನಿತ್ರಾಣ ಸ್ಥಿತಿಯಲ್ಲಿದ್ದವು. ಕಳೆದ ಮೂರು ತಿಂಗಳ ಹಿಂದೆ ಬಂಡೀಪುರದ ಕುಂದಕೆರೆ ವಲಯ ವ್ಯಾಪ್ತಿಯಲ್ಲಿ ರೈತರೊಬ್ಬರು ತಮ್ಮ ಜಮೀನಿನಲ್ಲಿ ಉಳುಮೆ ಮಾಡುವಾಗ 2 ಹುಲಿಗಳು ಭೀಕರ ಕಾಳಗ ನಡೆಸಿ, ಜಮೀನಿಗೆ ಬಂದು ಬಿದ್ದಿದ್ದ 1 ಹುಲಿ ಗಂಭೀರ ಗಾಯಗೊಂಡಿತ್ತು ಅದನ್ನು ಹಿಡಿದು ಕೂರ್ಗಳ್ಳಿ ಚಾಮುಂಡಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿತ್ತು. ನ.8 ಸರಗೂರಿನ ಹಳೆ ಹೆಗ್ಗುಡಿಲು ಬಳಿ ಸೆರೆ ಸಿಕ್ಕ 12–13 ವರ್ಷದ ಗಂಡು ಹುಲಿ ಉರುಳಿಗೆ ಸಿಲುಕಿ ಗಾಯಗೊಂಡಿತ್ತು. ಅಲ್ಲದೆ ವಯಸ್ಸಾದ ಹಿನ್ನೆಲೆಯಲ್ಲಿ ಹುಲಿಯ ಮೇಲ್ಭಾಗ ಮತ್ತು ಕೆಳಭಾಗದ ಕೋರೆ ಹಲ್ಲು ಮುರಿದಿದ್ದವು. ಈ ಹಿನ್ನೆಲೆ ಅದು ಬೇಟೆಯಾಡುವ ಸಾಮರ್ಥ್ಯ ಕಳೆದುಕೊಂಡು ರೈತನ ಮೇಲೆ ದಾಳಿ ಮಾಡಿತ್ತು. ಈ 2 ಹುಲಿಗಳ ಸ್ಥಿತಿ ಚಿಂತಾಜಕವಾಗಿತ್ತಾದರೂ, ಪುನರ್ವಸತಿ ಕೇಂದ್ರದಲ್ಲಿ ಚೇತರಿಸಿಕೊಂಡು ಸಹಜವಾಗಿ ಆಹಾರ ಸೇವಿಸುತ್ತಿವೆ. ಸರಗೂರಲ್ಲಿ ಗೊಬರ್ ಗ್ಯಾಸ್ ಗುಂಡಿಗೆ ಬಿದ್ದಿದ್ದ ಒಂದೂವರೆ ವರ್ಷದ ಗಂಡು ಮರಿಯನ್ನೂ ಪುನರ್ವಸತಿ ಕೇಂದ್ರದಲ್ಲಿಟ್ಟು ಆರೈಕೆ ಮಾಡಲಾಗುತ್ತಿದ್ದು, ಅದೂ ಸಹ ಚೇತರಿಸಿಕೊಂಡಿದೆ.

**ತಾಯಿ ಮಡಿಲು ಸೇರಿದ ಮರಿಗಳು:** ಸರಗೂರು ತಾಲೂಕಿನ ಬಡಗಲಪುರ ಬಳಿ ಅ.18ರಂದು ಸೆರೆ ಸಿಕ್ಕ ಒಂದೂವರೆ ವರ್ಷದ ಹೆಣ್ಣು ಹುಲಿ ಮರಿ, ಅ.28 ರಂದು ಅಂಜನಾಪುರ– ಈರೇಗೌಡನ ಹುಂಡಿ ಬಳಿ ಸೆರೆ ಸಿಕ್ಕಿದ 6 ವರ್ಷದ ಹೆಣ್ಣು ಹುಲಿ ಹಾಗೂ ನ.5ರಂದು ಹೆಡಿಯಾಲ ವಲಯದಲ್ಲಿ ಸೆರೆ ಹಿಡಿದ ಒಂದೂವರೆ ವರ್ಷದ ಹೆಣ್ಣು ಹುಲಿ ತಾಯಿ–ಮರಿಗಳಾಗಿದ್ದು, ಅವುಗಳನ್ನು ಒಂದುಗೂಡಿಸುವಲ್ಲಿ ಅರಣ್ಯ ಸಿಬ್ಬಂದಿ ಹಾಗೂ ಪಶುವೈದ್ಯರು ಯಶಸ್ವಿಯಾಗಿದ್ದಾರೆ. ಈ ತಾಯಿ ಹುಲಿಗೆ ಒಟ್ಟು ಮೂರು ಮರಿಗಳಿದ್ದು, ಅವುಗಳಲ್ಲಿ ಎರಡು ಸೆರೆ ಸಿಕ್ಕಿವೆ. ಮತ್ತೊಂದು ಮರಿ ಕೂಂಬಿಂಗ್ ನಿರತ ಸಿಬ್ಬಂದಿಗೆ ಚಳ್ಳೆಹಣ್ಣು ತಿನ್ನಿಸಿ ಪರಾರಿಯಾಗುತ್ತಲೇ ಇದೆ. ಅದನ್ನು ಸೆರೆ ಹಿಡಿದು ತಾಯಿ ಮಡಿಲಿಗೆ ಸೇರಿಸಲು ನಿರ್ಧರಿಸಿ ಕೂಂಬಿಂಗ್ ನಡೆಸಲಾಗುತ್ತಿದೆ.

### ಹೆಚ್ಚುವರಿ ಕೊಠಡಿಗಳ ನಿರ್ಮಾಣ

> “ಕೂರ್ಗಳ್ಳಿ ಪುನರ್ವಸತಿ ಕೇಂದ್ರದಲ್ಲಿ ಹೊಸದಾಗಿ ಕೊಠಡಿಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ. ಆದರೆ, ಇರುವ ವ್ಯವಸ್ಥೆಯಲ್ಲಿ ಇನ್ನು ಮುಂದೆ ಸೆರೆ ಹಿಡಿದ ಪ್ರಾಣಿಗಳನ್ನು ಇಟ್ಟುಕೊಳ್ಳಲು ಸ್ಥಳಾಭಾವವಿರುವುದರಿಂದ ಸೆರೆ ಹಿಡಿದ ಪ್ರಾಣಿಗಳನ್ನು ಬನ್ನೇರುಘಟ್ಟಕ್ಕೆ ಕಳುಹಿಸಲಾಗುವುದು. ಇದನ್ನು ಮೇಲಾಧಿಕಾರಿಗಳ ಗಮನಕ್ಕೂ ತರಲಾಗಿದೆ.
>
> –ಪಿ.ಅನುಷಾ, ಕಾರ್ಯನಿರ್ವಾಹಕ ನಿರ್ದೇಶಕರು, ಮೈಸೂರು ಮೃಗಾಲಯ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

# ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮಕ್ಕೆ ಶತಮಾನೋತ್ಸವದ ಸಂಭ್ರಮ

# ನ.21ರಿಂದ 4 ದಿನಗಳ ಅದ್ದೂರಿ, ಅರ್ಥಪೂರ್ಣ ಆಚರಣೆ

## ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಾಹಿತಿ

**● ಸಿಎಂ ಸಿದ್ದರಾಮಯ್ಯ, ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಸೇರಿ ಹಲವು ಗಣ್ಯರು ಭಾಗಿ ● 19 ಸೆಷನ್‌ನಲ್ಲಿ 75 ಗಣ್ಯರಿಂದ ವಿಚಾರ ಮಂಡನೆ ● ದೇಶ-ವಿದೇಶದ ಪ್ರತಿನಿಧಿಗಳಿಗೆ ಆಹ್ವಾನ ● ಆಶ್ರಮದ ಕಾರ್ಯದಲ್ಲಿ ಜಾತ್ಯಾತೀತ, ಧರ್ಮಾತೀತತೆಯ ಹೆಗ್ಗುರುತು**

ಮೈಸೂರು, ನ.17(ಬಿಎಲ್‌ಯು)– 100 ವರ್ಷ ಪೂರೈಸಿರುವ ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ ಸಮಾರಂಭ ನವೆಂಬರ್ 21 ರಿಂದ ನಾಲ್ಕು ದಿನಗಳ ಕಾಲ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ನಡೆಯಲಿದೆ ಎಂದು ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ತಿಳಿಸಿದರು.

ಮೈಸೂರಿನ ಯಾದವಗಿರಿಯ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 1925ರಲ್ಲಿ ಸ್ಥಾಪನೆಯಾದ ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ ನೂರು ವರ್ಷಗಳ ಸಾರ್ಥಕ ಸೇವೆ ಸಲ್ಲಿಸಿದೆ ಎಂದು ಹೇಳಿದರು.


ನವೆಂಬರ್ 21ರಿಂದ 24 ರವರೆಗೆ ನಾಲ್ಕು ದಿನಗಳ ಕಾಲ ನಡೆಯುವ ಶತಮಾನೋತ್ಸವ ಸಮಾರಂಭದ ವೇಳೆ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವ ಮತ್ತು 'ವಿವೇಕಪ್ರಭ' ಮಾಸ ಪತ್ರಿಕೆಯ ರಜತ ಮಹೋತ್ಸವ ಕೂಡ ನಡೆಯಲಿದೆ ಎಂದರು.

**ನವೆಂಬರ್ 21:** ಬೆಳಿಗ್ಗೆ 10.15 ಗಂಟೆಗೆ ನಡೆಯುವ ನಾರಾಯಣ ಸೇವೆಯ ದಿವ್ಯ ಸಾನ್ನಿಧ್ಯವನ್ನು ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ವಹಿಸಲಿದ್ದು, ಕಡಪದ ರಾಮಕೃಷ್ಣ ಮಿಷನ್ ಕಾರ್ಯದರ್ಶಿ ಸ್ವಾಮಿ ಅನುಪಮಾನಂದಜೀ, ಹಲಸೂರಿನ ರಾಮಕೃಷ್ಣ ಮಠದ ಸ್ವಾಮಿ ಬೋಧಸ್ವರೂಪಾನಂದಜೀ, ಶಾಸಕ ಜಿ.ಟಿ.ದೇವೇಗೌಡ, ಮಾಜಿ ಕಾರ್ಪೋರೇಟರ್ ಡಿ.ನಾಗಭೂಷಣ್, ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಗೌರವ ಕಾರ್ಯದರ್ಶಿ ಡಾ.ಹೆಚ್. ಸುದರ್ಶನ್ ಭಾಷಣಕಾರರಾಗಿ ಆಗಮಿಸಲಿದ್ದು, ಮಾಜಿ ಶಾಸಕ ಎಲ್.ನಾಗೇಂದ್ರ, ಕನ್ನಡ ಪರಿಚಾರಕ ಅರವಿಂದ ಶರ್ಮ ವಿಶೇಷ ಆಹ್ವಾನಿತರಾಗಿ ಉಪಸ್ಥಿತರಿರುವರು.

ಬೆಳಿಗ್ಗೆ 11.50 ಗಂಟೆಗೆ ಶತಮಾನೋತ್ಸವ ಸ್ಮರಣ ಸಂಚಿಕೆ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಮೈಸೂರು ರಾಮಕೃಷ್ಣ ಮಠದ ಮಾಜಿ ಅಧ್ಯಕ್ಷ ಸ್ವಾಮಿ ಆತ್ಮವಿದಾನಂದಜೀ, ರಾಮಕೃಷ್ಣ ಮಠದ ಚೆನ್ನೈ ಅಧ್ಯಕ್ಷ ಸ್ವಾಮಿ ಸತ್ಯಜ್ಞಾನನಂದಜೀ, ವೆಂಕಟಾಪುರದ ಅಧ್ಯಕ್ಷ ಸ್ವಾಮಿ ಅಮೂರ್ತಾನಂದಜೀ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಮಾಜಿ ಸಚಿವರಾದ ಎಸ್.ಟಿ.ಸೋಮಶೇಖರ್, ಬಿ.ಸಿ.ನಾಗೇಶ್, ನಿವೃತ್ತ ಐಪಿಎಸ್ ಅಧಿಕಾರಿ ಎಚ್.ಸಿ.ಕಿಶೋರ್ ಚಂದ್ರ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 3.30 ಗಂಟೆಗೆ ಶತಮಾನೋತ್ಸವ ಸಮಾರಂಭದ ಉದ್ಘಾಟನೆ ನಡೆಯಲಿದ್ದು, ರಾಮಕೃಷ್ಣ ಮಠದ ಬೇಲೂರು ಮಠದ ಅಧ್ಯಕ್ಷ ಸ್ವಾಮಿ ಗೌತಮಾನಂದಜೀ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.

ಸಂಜೆ 6.30ಕ್ಕೆ ನಡೆಯುವ 5ನೇ ಅಧಿವೇಶನದಲ್ಲಿ ಸಂಸದ ತೇಜಸ್ವಿ ಸೂರ್ಯ ಹಾಗೂ ಮಾಜಿ ಸಂಸದ ಪ್ರತಾಪ್ ಸಿಂಹ ಅತಿಥಿಗಳಾಗಿ ಆಗಮಿಸಲಿದ್ದಾರೆ.




ಮೈಸೂರಿನ ಯಾದವಗಿರಿಯ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಅವರು ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ ಸಮಾರಂಭ ಆಚರಣೆ ವಿವರ ನೀಡಿದರು.

**ನವೆಂಬರ್ 22:** ಬೆಳಿಗ್ಗೆ 6.15 ಗಂಟೆಗೆ ವಿವೇಕ ಯಾತ್ರೆ ಕಾರ್ಯಕ್ರಮದಲ್ಲಿ ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಗೋ.ಮಧುಸೂದನ್ ಅತಿಥಿಗಳಾಗಿ ಉಪಸ್ಥಿತರಿರುವರು.

ಮಧ್ಯಾಹ್ನ 2.45 ಗಂಟೆಗೆ ನಡೆಯುವ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ರಾಜ್ಯದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಸಂಜೆ 6.30 ಗಂಟೆಗೆ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಗಳಿಂದ ನಡೆಯುವ ಹೊನಲು ಬೆಳಕಿನ ಪ್ರದರ್ಶನ, ರಾಮಕೃಷ್ಣ ವಿದ್ಯಾಶಾಲೆಯ ಶೈಕ್ಷಣಿಕ ಸೇವೆಯ ಅವಲೋಕನ, ರಾಮಕೃಷ್ಣ ವಿವೇಕಾನಂದ ಭಾವಧಾರೆಗೆ ಮೈಸೂರು ರಾಜಮನೆತನದ ಕೊಡುಗೆ ಕುರಿತ ವಿಚಾರ ಸಂಕಿರಣದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ನೀತಿ ಆಯೋಗದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಬಿ.ವಿ.ಆರ್.ಸುಬ್ರಹ್ಮಣ್ಯಂ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅತಿಥಿಗಳಾಗಿ ಉಪಸ್ಥಿತರಿರುವರು.

**ನವೆಂಬರ್ 23:** ಬೆಳಿಗ್ಗೆ 9 ಗಂಟೆಗೆ ಮೈಸೂರಿನ ಅವಧೂತ ಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಅವರು ಮಾನವನ ದೈವೀಕರಣವೇ ಧರ್ಮದ ಉದ್ದೇಶ ಮತ್ತು ಶಕ್ತಿ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಮಧ್ಯಾಹ್ನ 3 ಗಂಟೆಗೆ ಶ್ರೀ ರಾಮಕೃಷ್ಣ ಆಶ್ರಮದ ಕನ್ನಡ ಪ್ರಕಟಣೆಗಳು ಮತ್ತು ವಿವೇಕಪ್ರಭ ಮಾಸ ಪತ್ರಿಕೆಯ ಬೆಳ್ಳಿ ಹಬ್ಬ ಸಮಾರಂಭದಲ್ಲಿ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ತರುವಾಯ ಸಂಜೆ 6 ಗಂಟೆಗೆ ಶ್ರೀ ರಾಮಕೃಷ್ಣ, ಶ್ರೀ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಕುರಿತ ವಿಚಾರ ಸಂಕಿರಣ ನಡೆಯಲಿದೆ.

**ನವೆಂಬರ್ 24:** ಬೆಳಿಗ್ಗೆ 6.15 ಗಂಟೆಗೆ ಸಮರ್ಪಣಾ ಸಮಾವೇಶ, ಮಧ್ಯಾಹ್ನ 2.30 ಗಂಟೆಗೆ ಭಗವನ್ನಾಮ ಸಂಕೀರ್ತನೆ, ಸಂಜೆ 5.30 ಗಂಟೆಗೆ ವಿವೇಕಾನಂದರ ಜೀವನ ಮತ್ತು ಸಂದೇಶವನ್ನಾಧರಿಸಿದ ಬಹು ಮಾಧ್ಯಮ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಶ್ರೀ ಆದಿಚುಂಚನಗಿರಿ ಮಠದ ಪೀಠಾಧೀಶರಾದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಜಾತ್ಯಾತೀತ ಹಾಗೂ ಧರ್ಮಾತೀತವಾಗಿ ಎಲ್ಲರನ್ನು ಒಟ್ಟುಗೂಡಿಸಿಕೊಂಡು ಆದರ್ಶ ಸಮಾಜ ಕಟ್ಟುವುದು ಸ್ವಾಮಿ ವಿವೇಕಾನಂದ ಅವರ ಪರಮ ಗುರಿಯಾಗಿತ್ತು. ಮೈಸೂರಿನ ರಾಮಕೃಷ್ಣ ಆಶ್ರಮ ಇದನ್ನೆ ಅನುಸರಿಸುತ್ತಿದೆ. ಅಲ್ಲದೆ ಭಗವಂತನನ್ನು ಹೃದಯದಲ್ಲಿ ಪೂಜಿಸಿ, ಆಧ್ಯಾತ್ಮಿಕತೆ ಮೂಲಕ ಸಮಾಜದ ಪರಿವರ್ತನೆ ಮಾಡುವ ಹಾದಿಯಲ್ಲಿ ಸಾಗುತ್ತಿದೆ ಎಂದು ವಿವರಿಸಿದರು.

ಮೊದಲ ದಿನ 400 ಕ್ಕೂ ಹೆಚ್ಚು ಪೌರ ಕಾರ್ಮಿಕರನ್ನು ಆಹ್ವಾನಿಸಿ ವಿವಿಧ ಪೂಜಾ ಕೈಂಕರ್ಯದಲ್ಲಿ ಭಾಗಿ ಮಾಡಿಕೊಂಡು ಅವರಿಗೆ ಉಪಹಾರ ನೀಡಲಾಗುವುದು. ಈ ಮೂಲಕ ಪ್ರತಿಯೊಬ್ಬರನ್ನು ಭಾಗಿಯಾಗಿ ಮಾಡಿಕೊಂಡು ಅರ್ಥಪೂರ್ಣವಾಗಿ ಶತಮಾನೋತ್ಸವ ಸಮಾರಂಭ ಆಚರಣೆ ಮಾಡಲಾಗುತ್ತಿದೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಮೈಸೂರಿನ ಎಲ್ಲರೂ ಭಾಗಿಯಾಗಬೇಕೆಂದು ಸ್ವಾಮಿ ಮುಕ್ತಿದಾನಂದ ಅವರು ಕೋರಿದರು. ಶ್ರೀ ರಾಮಕೃಷ್ಣ ಆಶ್ರಮದ ಯುಕ್ತೇಶಾನಂದಜಿ, ಮಹಾಮೇದಾನಂದಜಿ, ಶ್ರೀ ರಾಮಕೃಷ್ಣ ಸೇವಾ ಸಂಘದ ಆಡಳಿತ ಮಂಡಳಿ ಅಧ್ಯಕ್ಷ ಪ್ರೊ.ಚಂದ್ರಶೇಖರ್, ವಿದ್ಯಾಶಾಲೆಯ ಪ್ರಾಂಶುಪಾಲ ಟಿ.ಕೆ. ಚಂದ್ರಶೇಖರ್, ವಿಶ್ರಾಂತ ಪ್ರಾಂಶುಪಾಲ ಎಸ್.ಬಾಲಾಜಿ, ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಅರುಣ್‌ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

> "ನಾಲ್ಕು ದಿನಗಳ ಕಾಲ ನಡೆಯುವ ಶತಮಾನೋತ್ಸವ ಸಮಾರಂಭದಲ್ಲಿ 19 ಸೆಷನ್‌ಗಳು ನಡೆಯಲಿದ್ದು, 75 ಗಣ್ಯರು ಹಲವು ವಿಚಾರಗಳನ್ನು ಮಂಡನೆ ಮಾಡಲಿದ್ದಾರೆ. 300ಕ್ಕೂ ಹೆಚ್ಚು ಸ್ವಾಮೀಜಿಗಳು, 40 ಮಾತಾಜಿಗಳು, ಸ್ಥಳೀಯ, ದೇಶ, ವಿದೇಶದ ಸಾವಿರಾರು ಪ್ರತಿನಿಧಿಗಳು, ನಮ್ಮ ಆಶ್ರಮಯದಲ್ಲಿ ವಿದ್ಯಾಭ್ಯಾಸ ಮಾಡಿರುವ ದೇಶ-ವಿದೇಶದ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಮಲ್ಟಿ ಮೀಡಿಯಾ ಪ್ರದರ್ಶನ, ಮನೋರಂಜನೆ, ಆದರ್ಶ, ಆಧ್ಯಾತ್ಮಿಕತೆ, ಧಾರ್ಮಿಕತೆ, ಸಂಕೀರ್ತನೆ, ಭಜನೆ, ವಿಶೇಷ ಪೂಜೆ ಸೇರಿದಂತೆ ಹಲವು ಕಾರ್ಯಕ್ರಮಗಳು ನಡೆಯಲಿದೆ.
> –ಸ್ವಾಮಿ ಮುಕ್ತಿದಾನಂದಜೀ.

# ನವಭಾರತ್ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ.ವಿ.ಶ್ರೀಧರ್ ಆಯ್ಕೆ

## ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡರಿಂದ ಅಭಿನಂದನೆ



ನವಭಾರತ್ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಕೆ.ವಿ.ಶ್ರೀಧರ್ ಹಾಗೂ ಸಂಘದ ನೂತನ ಪದಾಧಿಕಾರಿಗಳನ್ನು ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರು ಅಭಿನಂದಿಸಿದರು.

ಮೈಸೂರು, ನ. 17– ನವಭಾರತ್ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ.ವಿ.ಶ್ರೀಧರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನ.10ರಂದು ನಿಗದಿಯಾಗಿದ್ದ ಆಡಳಿತ ಮಂಡಳಿ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳಿಗೂ ಅವಿರೋಧ ಆಯ್ಕೆಯಾಗಿದೆ. ನಿರ್ದೇಶಕರಾಗಿ ಎಸ್.ಲೋಕೇಶ್, ಶಿವಕುಮಾರ್, ಶಿವಣ್ಣ ಎಂ.ಎಂ., ಕುಮಾರಸ್ವಾಮಿ, ಕುಮಾರ್ ಪಿ.ಕೆ., ಎಚ್.ಎಂ. ಬಸವಯ್ಯ, ದಿನೇಶ್‌ನಾಯಕ್ ಎಚ್., ನಾಗರಾಜು ಎಂ.ಎನ್., ಸಿದ್ದಾಚಾರಿ, ಅರುಣ, ಗೌರಮ್ಮ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸರ್ವಮಂಗಳ ತಿಳಿಸಿದ್ದಾರೆ. ನಗರದ ಕೊಡಗು ಗೌಡ ಸಮಾಜದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮಹಾಸಭೆಗೆ ಆಗಮಿಸಿದ ಹುಣಸೂರು ಶಾಸಕ, ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ, ನೂತನ ಅಧ್ಯಕ್ಷರು, ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್ ಅವರನ್ನು ಅಭಿನಂದಿಸಿದರು.

# ಗ್ರೇಟರ್ ಮೈಸೂರು ಯೋಜನೆ ರೂಪುರೇಷೆ ತ್ವರಿತವಾಗಿ ರೂಪಿಸಿ

## ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ನಿಯೋಗ



ಕಾಂಗ್ರೆಸ್ ನಿಯೋಗ ಇತ್ತೀಚೆಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರಿಗೆ ಮನವಿ ಸಲ್ಲಿಸಿತು.

ಮೈಸೂರು,ನ.17(ಪಿಎಂ)– ಗ್ರೇಟರ್ ಮೈಸೂರು ನಿರ್ಮಾಣ ಯೋಜನೆಯನ್ನು ತ್ವರಿತಗತಿಯಲ್ಲಿ ರೂಪಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರಿಗೆ ಕಾಂಗ್ರೆಸ್ ನಿಯೋಗ ಇತ್ತೀಚೆಗೆ ಮನವಿ ಸಲ್ಲಿಸಿತು.

ಗ್ರೇಟರ್ ಮೈಸೂರು ಅಥವಾ ಗ್ರೇಡ್ 1 ಮೈಸೂರು ರಚನೆ ಸಂಬಂಧ ಜಿಲ್ಲಾ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳಿಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಹಾಗೂ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ನೇತೃತ್ವದ ನಿಯೋಗವು 17 ಅಂಶಗಳನ್ನು ಒಳಗೊಂಡ ಮನವಿಯನ್ನು ಸಲ್ಲಿಸಿ, ಶೀಘ್ರ ಗ್ರೇಟರ್ ಮೈಸೂರು ರಚನೆಗೆ ಕ್ರಮ ವಹಿಸುವಂತೆ ಮನವಿ ಮಾಡಿತು.

ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿಗಳು, ಪಾಲಿಕೆ ವಿಸ್ತರಣೆ ಹೆಚ್ಚಿಸುವ ಬಗ್ಗೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅವರು ಕೆಲ ಸೂಚನೆಗಳನ್ನು ನೀಡಿದ್ದಾರೆ. ಅದರಂತೆ ಪ್ರಸ್ತಾವನೆ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು. ಮುಂದಿನ ದಿನಗಳಲ್ಲಿ ಅಂತಿಮ ಡಿಪಿಆರ್ ಸಲ್ಲಿಸುವಾಗ ಸಾರ್ವಜನಿಕರ ಅಭಿಪ್ರಾಯಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ. ರಾಮು, ಮಾಜಿ ಮೇಯರ್ ಬಿ.ಎಲ್. ಭೈರಪ್ಪ ಮತ್ತಿತರರು ನಿಯೋಗದಲ್ಲಿದ್ದರು.

**ಜಿಲ್ಲಾ ಕಾಂಗ್ರೆಸ್ ನಿಯೋಗದ ಸಲಹೆಗಳು**

- ಮೈಸೂರಿನ ಹೃದಯ ಭಾಗದಲ್ಲಿ ಸಂಚಾರ ವ್ಯವಸ್ಥೆ ಸುಗಮಗೊಳಿಸುವುದು
- ವಿಮಾನ ನಿಲ್ದಾಣ, ರೈಲ್ವೆ ಸೌಕರ್ಯ, ಸಾರಿಗೆ ಸೌಕರ್ಯಗಳ ವಿಸ್ತರಣೆಗೆ ಆದ್ಯತೆ
- ಮೈಸೂರನ್ನು ಸುಸಜ್ಜಿತವಾಗಿಡಲು ಹಸಿರು ವಲಯ ರೂಪಿಸುವುದು
- ಕಸ ವಿಲೇವಾರಿ, ಸ್ವಚ್ಛತೆ ನಿರ್ವಹಣೆಗೆ ಆದ್ಯತೆ ನೀಡಬೇಕು
- ಹೂಡಿಕೆದಾರರನ್ನು ಆಕರ್ಷಣೆಗೆ ಯೋಜನೆ ರೂಪಿಸಬೇಕು
- ಶಿಕ್ಷಣ ವಲಯದ ಉನ್ನತೀಕರಣ
- ಪ್ರವಾಸೋದ್ಯಮಕ್ಕೆ ಮತ್ತಷ್ಟು ಒತ್ತು
- ಗ್ರೇಟರ್ ಮೈಸೂರಿಗೆ ಪೂರಕವಾಗಿ ವಾರ್ಡ್‌ಗಳ ಸಂಖ್ಯೆ ಹೆಚ್ಚಿಸುವುದು
- ರಿಯಲ್ ಎಸ್ಟೇಟ್ ಉದ್ಯಮಕ್ಕೆ ಉತ್ತೇಜನ
- 382 ಚದರ ಕಿಲೋ ಮೀಟರ್ ವ್ಯಾಪ್ತಿಗೆ ಮೈಸೂರನ್ನು ವಿಸ್ತರಿಸುವುದು
- ಜಲಮೂಲಗಳ ಸಂರಕ್ಷಣೆ, ಮಾಲಿನ್ಯ ನಿಯಂತ್ರಣ, ವಿದ್ಯುಚ್ಛಕ್ತಿ ಗುಣಾತ್ಮಕ ವಿಸ್ತರಣೆಗೆ ಆದ್ಯತೆ ನೀಡಬೇಕು

# ಸಿಎಂ ವಿಶೇಷ ಅನುದಾನದ ಹೆಸರಲ್ಲಿ 50 ಲಕ್ಷ ವಂಚನೆ

## ಇಬ್ಬರು ಆರೋಪಿಗಳ ಬಂಧನ

**ಬೆಂಗಳೂರು:** ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 5 ಕೋಟಿ ರೂ. ಮಂಜೂರು ಮಾಡಿಸುತ್ತೇನೆಂದು ವ್ಯಕ್ತಿಯೊಬ್ಬರನ್ನು ನಂಬಿಸಿ, ಮುಂಗಡ ಕಮಿಷನ್ ಆಗಿ 50 ಲಕ್ಷ ಪಡೆದು ವಂಚಿಸಿದ ಆರೋಪದಡಿ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ನಾಗರಬಾವಿ ನಿವಾಸಿ ವೆಂಕಟೇಶ್ ಬಾಬು ನೀಡಿದ ದೂರಿನನ್ವಯ ಹರೀಶ್ ಹಾಗೂ ಸಂದೀಪ್‌ನನ್ನು ಪೊಲೀಸರು ಬಂಧಿಸಲಾಗಿದೆ. 2024ರ ಅಕ್ಟೋಬರ್‌ನಲ್ಲಿ ದೂರುದಾರರ ಮನೆಗೆ ಹೋಗಿದ್ದ ಆರೋಪಿ ಹರೀಶ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಆಪ್ತ ಸಂದೀಪ್ ಎಂಬಾತನ ಪರಿಚಯವಿದೆ. ಎಂಎಲ್‌ಎ ಲೆಟರ್‌ಹೆಡ್ ಮೇಲೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಐದು ಕೋಟಿ ಬಿಡುಗಡೆ ಮಾಡಿಸಿ ಕೊಡುತ್ತೇನೆ ಎಂದು ನಂಬಿಸಿದ್ದ. ಇದಕ್ಕೆ ಶೇ.10 ರಂತೆ 50 ಲಕ್ಷ ರು.ಗೆ ಬೇಡಿಕೆ ಇಟ್ಟಿದ್ದ.

ಅದಕ್ಕೆ ಒಪ್ಪಿದ್ದ ವೆಂಕಟೇಶ್ ಬಾಬು ಅವರು, ವಂಚಕ ಹರೀಶ್‌ಗೆ 2024ರ ನವೆಂಬರ್‌ನಲ್ಲಿ 25 ಲಕ್ಷ ರು. ನೀಡಿದ್ದರು. 2025ರ ಮಾರ್ಚ್‌ನಲ್ಲಿ ಪತ್ರ ಬಿಡುಗಡೆ ಮಾಡುವುದಾಗಿ ಬಾಕಿ ಇದ್ದ 25 ಲಕ್ಷ ರೂ.ಗಳನ್ನು ಮತ್ತೊಬ್ಬ ಆರೋಪಿ ಸಂದೀಪ್‌ಗೆ ನೀಡಿದ್ದರು.

ಬಳಿಕ ಕಳೆದ ಆರು ತಿಂಗಳಿಂದ 2-3 ಬಾರಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಸೇರಿದ ಪತ್ರಗಳನ್ನು ಆರೋಪಿಗಳು ನೀಡಿದ್ದರು. ಆದರೆ, ಹಣ ಬಿಡುಗಡೆ ಮಾಡಿಸಿರಲಿಲ್ಲ. ಹೀಗೆ ಪ್ರತಿ ಬಾರಿಯೂ ಸಬೂಬು ಹೇಳುತ್ತಿದ್ದರು. ಅದರಿಂದ ಬೇಸತ್ತು ಕಳೆದ ಸೆ.19ರಂದು ವೆಂಕಟೇಶ್‌ಬಾಬು, ಆರ್‌ಡಿಪಿಆರ್ ಕಚೇರಿಗೆ ಹೋಗಿ ವಿಚಾರಿಸಿದಾಗ ಇದು ನಕಲಿ ಪತ್ರ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಳಿಕ ಹರೀಶ್‌ಗೆ ಕರೆ ಮಾಡಿದಾಗ ಆತನ ಮೊಬೈಲ್ ನಂಬರ್ ಸ್ವಿಚ್ ಆಫ್ ಆಗಿತ್ತು. ನಂತರ ಸಂದೀಪ್ ಮತ್ತು ಹರೀಶ್ ವಿರುದ್ಧ ದೂರು ನೀಡಿದ್ದಾರೆ. ದೂರು ಬೆನ್ನಲ್ಲೇ ಪೊಲೀಸರ ಇಬ್ಬರ ವಿರುದ್ಧ ವಂಚನೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವ



ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಸಂಸ್ಥೆಯ ವ್ಯವಸ್ಥಾಪಕ ವಿಶ್ವಸ್ಥರಾದ ಡಾ.ಭವಾನಿಶಂಕರ್, ವಿದ್ಯಾ ಸಂಸ್ಥೆಯ ಕಾರ್ಯಕಾರಿ ಸಂಯೋಜಕ ತೇಜಸ್ ಶಂಕರ್, ಪ್ರಾಚಾರ್ಯರಾದ ಗೋಪಾಲಸ್ವಾಮಿ, ಕುಮಾರ್, ಮಹದೇವಸ್ವಾಮಿ, ಆಡಳಿತಾಧಿಕಾರಿ ಪ್ರಿಯಾಂಕ, ಸಂಯೋಜಕಿ ಅನಿತಾ ಉಪಸ್ಥಿತರಿದ್ದರು.

# ನಾಳೆ ಪಾರಂಪರಿಕ ನಡಿಗೆ ಕಾರ್ಯಕ್ರಮ

ಮೈಸೂರು,ನ.17– ನ.17ರಿಂದ ನ.25 ರವರೆಗೆ ವಿಶ್ವ ಪರಂಪರೆ ಸಪ್ತಾಹ ಅಂಗವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ನ.19ರಂದು ಬೆಳಗ್ಗೆ 7 ಗಂಟೆಗೆ ಮೈಸೂರು ಪೋಸ್ಟಲ್ ಟ್ರೈನಿಂಗ್ ಸೆಂಟರ್‌ನಲ್ಲಿನ ಪ್ರಶಿಕ್ಷಣಾರ್ಥಿಗಳಿಗೆ ಮೈಸೂರಿನ ಇತಿಹಾಸ, ಹಿನ್ನೆಲೆ ಹಾಗೂ ಪಾರಂಪರಿಕ ಕಟ್ಟಡಗಳ ಪರಿಚಯ ಮಾಡಿಕೊಡುವ ಉದ್ದೇಶದಿಂದ ಪಾರಂಪರಿಕ ನಡಿಗೆಯನ್ನು ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 11 ಗಂಟೆಗೆ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಸಭಾಂಗಣ, ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಇಂದಿರಾನಗರ, ಮೈಸೂರು ಇಲ್ಲಿ 'ಭುವನೇಶ್ವರಿ, ವಿದ್ಯಾರಣ್ಯ & ವಿಜಯನಗರ ಏನೀ.. ಈ ಇತಿಹಾಸ' ಕುರಿತು ಮಾಸಿಕ ಸರಣಿ ವಿಶೇಷ ಉಪನ್ಯಾಸವನ್ನು ಹಮ್ಮಿಕೊಂಡಿದ್ದು, ಸಂಪನ್ಮೂಲ ವ್ಯಕ್ತಿಗಳಾದ ಮೈಸೂರಿನ ಖ್ಯಾತ ಇತಿಹಾಸಕಾರರು ವಸುಂಧರ ಫಿಲಿಯೋಜ ಅವರು ಉಪನ್ಯಾಸ ನೀಡಲಿದ್ದಾರೆ. ಸದರಿ ಉಪನ್ಯಾಸ ಕಾರ್ಯಕ್ರಮದಲ್ಲಿ ಆಸಕ್ತ ವಿದ್ಯಾರ್ಥಿಗಳು, ಇತಿಹಾಸ ಆಸಕ್ತರು, ಸಾರ್ವಜನಿಕರು ಉಚಿತವಾಗಿ ಭಾಗವಹಿಸಬಹುದಾಗಿದೆ.

ಮಾಹಿತಿಗಾಗಿ ಶಶಿಧರ. ಎಸ್, ಪ್ರಥಮ ದರ್ಜೆ ಸಹಾಯಕ (ಮೊ.7349057976) ರನ್ನು ಸಂಪರ್ಕಿಸಬಹುದಾಗಿದೆ.

# ವಿದ್ಯುತ್ ವ್ಯತ್ಯಯ

ಮೈಸೂರು,ನ.17– ಹೆಬ್ಬಾಳ್ ವಿದ್ಯುತ್ ಮಾರ್ಗದ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ನ.18 ರಂದು ಬೆಳಿಗ್ಗೆ 10ರಿಂದ ಸಂಜೆ 4 ರವರೆಗೆ ಹೆಬ್ಬಾಳ್, ಹೆಬ್ಬಾಳ್ ಕಾಲೋನಿ, ಸುಬ್ರಮಣ್ಯನಗರ, ಲಿಂಗಯ್ಯನ ಕೆರೆ, ಲೋಕನಾಯಕನಗರ, ಪೊಲೀಸ್ ಕ್ವಾರ್ಟಸ್ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

# ಪ್ರಧಾನಮಂತ್ರಿ ನರೇಂದ್ರ ಮೋದಿ ಭೇಟಿಯಾದ ಸಿಎಂ ಸಿದ್ದರಾಮಯ್ಯ

## ಏಮ್ಸ್, ಪ್ರವಾಹ ಪರಿಹಾರ ಹಾಗೂ ನೀರಾವರಿ ಯೋಜನೆಗಳಿಗೆ ತೀರುವಳಿ ನೀಡಲು ಆಗ್ರಹ

ನವದೆಹಲಿ, ನ.17– ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ ರಾಜ್ಯಕ್ಕೆ ಸಂಬಂಧಿಸಿದಂತೆ ಬಹುದಿನಗಳಿಂದ ಬಾಕಿಯಿರುವ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಸಲ್ಲಿಸಿದರು. ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ, ಕಬ್ಬು ಬೆಲೆ ನಿಗದಿ, 2100 ಕೋಟಿ ಪ್ರವಾಹ ಪರಿಹಾರ ಹಾಗೂ ಪ್ರಮುಖ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ತೀರುವಳಿಗಳನ್ನು ನೀಡಲು ಒತ್ತಾಯಿಸಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಧಾನಿ ಮೋದಿ ಅವರೊಂದಿಗೆ ಚರ್ಚಿಸುತ್ತಿರುವುದು

**ಪ್ರಮುಖ ನೀರಾವರಿ ಯೋಜನೆಗಳು:** ರಾಜ್ಯದ ಪ್ರಮುಖ ನೀರಾವರಿ ಹಾಗೂ ಕುಡಿಯುವ ನೀರಿನ ಯೋಜನೆಗಳಿಗೆ ಕೇಂದ್ರದಿಂದ ಬಾಕಿ ಇರುವ ತೀರುವಳಿಗಳನ್ನು ದೊರಕಿಸಲು ಪ್ರಧಾನಮಂತ್ರಿಗಳು ಮಧ್ಯಪ್ರವೇಶ ಮಾಡಬೇಕು.

ಸಮತೋಲನ ಅಣೆಕಟ್ಟು ಯೋಜನೆಗೆ ಸಂಬಂಧಿಸಿದಂತೆ ಬಾಕಿ ಇರುವ ತೀರುವಳಿಗಳನ್ನು ನೀಡುವಂತೆ ಕೇಂದ್ರ ಜಲ ಆಯೋಗಕ್ಕೆ ನಿರ್ದೇಶಿಸಬೇಕು. ಕಳೆದ ಒಂದು ದಶಕದಿಂದ ಕೃಷ್ಣಾ ಜಲ ವಿವಾದ ನ್ಯಾಯ ಮಂಡಳಿ -2 ರಲ್ಲಿ ಬಾಕಿ ಇರುವ ಗೆಜೆಟ್ ಅಧಿಸೂಚನೆಯನ್ನು ಹೊರಡಿಸಲು ಹಾಗೂ ಕೇಂದ್ರ 2023-24 ರ ಬಜೆಟ್‌ನಲ್ಲಿ ಘೋಷಿಸಿರುವಂತೆ ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ. ಕಳಸಾ- ಬಂಡೂರಿ ಯೋಜನೆಗೆ ಸಂಬಂಧಿಸಿದಂತೆ ಹುಬ್ಬಳ್ಳಿ-ಧಾರವಾಡ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸಲು ಅರಣ್ಯ ಮತ್ತು ವನ್ಯ ಜೀವಿ ಪರಿಸರ ಇಲಾಖೆ ವತಿಯಿಂದ ನೀಡ ಬೇಕಾದ ತೀರುವಳಿಗಳನ್ನು ನೀಡಲು ಆಗ್ರಹಿಸಿದ್ದಾರೆ.

**ಪ್ರವಾಹದಿಂದಾಗಿರುವ ಹಾನಿಗೆ 2136 ಕೋಟಿ ಪರಿಹಾರಕ್ಕೆ ಮನವಿ :** ಅಭಾರಿ ಮಳೆಯಿಂದಾಗಿ ರಾಜ್ಯದ 14.5 ಲಕ್ಷ ಹೆಕ್ಟೇರ್ ಬೆಳೆ ನಾಶವಾಗಿದ್ದು, 19 ಲಕ್ಷ ರೈತರಿಗೆ ನಷ್ಟ ಉಂಟಾಗಿದೆ. ಇದಲ್ಲದೇ ಸಾವಿರಾರು ಮನೆಗಳು, ರಸ್ತೆ ಹಾಗೂ ಶಾಲೆಗಳು ಹಾನಿಗೀಡಾಗಿದ್ದು ಎನ್.ಡಿ.ಆರ್ ಎಫ್ ವತಿಯಿಂದ ಪರಿಹಾರವನ್ನು ಕೋರಿ ಎರಡು ಮನವಿ ಪತ್ರಗಳನ್ನು ಸಲ್ಲಿಸಲಾಗಿದೆ. ಇನ್ಪುಟ್ ಸಬ್ಸಿಡಿಯಲ್ಲಿನ ಕೊರತೆಗಳನ್ನು ನೀಗಿಸಲು ರಕ್ಷಣೆ ಮತ್ತು ಪರಿಹಾರದಡಿ 614.9 ಕೋಟಿಗಳು ಹಾಗೂ ದಡಿ ಹಾನಿಗೊಳಗಾದ ಸಾರ್ವಜನಿಕ ಮೂಲಸೌಕರ್ಯಗಳ ಪುನರ್ವಸತಿ ಮತ್ತು ಪುನರ್ ನಿರ್ಮಾಣಕ್ಕಾಗಿ 1521.67 ಕೋಟಿಗಳ ಪರಿಹಾರ ನೀಡಲು ಮನವಿ ಪತ್ರದಲ್ಲಿ ಕೋರಲಾಗಿದೆ.

**ಜಲ ಜೀವನ ಮಿಷನ್ :** ಕರ್ನಾಟಕ ರಾಜ್ಯದಲ್ಲಿ ಜಲ ಜೀವನ ಮಿಷನ್ (ಎಎಂ) ಯೋಜನೆಯಡಿ 2025-26ರ ಅಂತ್ಯದ ವರೆಗೆ ಕರ್ನಾಟಕಕ್ಕೆ ಕೊಡಬೇಕಾದ ಪಾಲಿನಲ್ಲಿ ರೂ.13,004.63 ಕೋಟಿ ಹಣವನ್ನು ಇನ್ನೂ ಬಿಡುಗಡೆ ಮಾಡಿಲ್ಲ. 2024-25ರ ಹಣಕಾಸು ವರ್ಷದಲ್ಲಿ ಹಂಚಿಕೆಯಾಗಬೇಕಿದ್ದ 3,804.41 ಕೋಟಿ ರೂ. ಪೈಕಿ ಕೇವಲ 570.66 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರವು ಸ್ವೀಕರಿಸಲಾಗಿದ್ದರೂ ರಾಜ್ಯ ಸರ್ಕಾರ ತಾನೇ ಮುಂಗಡವಾಗಿ ರೂ.7,045.64 ಕೋಟಿ ಬಿಡುಗಡೆ ಮಾಡುವ ಮೂಲಕ, ಯೋಜನೆಯ ಯಶಸ್ಸಿಗೆ ಅಗತ್ಯ 7,602.99 ಕೋಟಿ ರೂ. ಮೊತ್ತವನ್ನು ಒದಗಿಸಲಾಗಿದೆ.

2025-26ನೇ ಸಾಲಿನಲ್ಲಿ ಕೇಂದ್ರದಿಂದ ಯೋಜನೆಯಡಿ ಹಣ ಬಿಡುಗಡೆಯಾಗಿಲ್ಲ. ಆದರೂ ರಾಜ್ಯಮುಂಗಡವಾಗಿ ರೂ.1,500 ಕೋಟಿ ಬಿಡುಗಡೆ ಮಾಡಿದೆ. ಪ್ರಸ್ತುತ 1,700 ಕೋಟಿ ರೂ. ಮೊತ್ತದ ಬಿಲ್‌ಗಳು ಪಾವತಿಗೆ ಬಾಕಿ ಇವೆ ಮತ್ತು 2,600 ಕೋಟಿ ರೂ. ಮೊತ್ತದ ಬಿಲ್ಲುಗಳು ಸಲ್ಲಿಕೆಯಾಗಬೇಕಿದೆ. ಗ್ರಾಮೀಣ ಜನತೆಗೆ ಶುದ್ಧ ಕುಡಿಯುವ ನೀರು ಒದಗಿಸುವುದು ಅತ್ಯಂತ ಮುಖ್ಯವಾದ ಕೇಂದ್ರದ ಯೋಜನೆಯಾಗಿದೆ. ಇದನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಲು ಕೇಂದ್ರ ಸರ್ಕಾರದ ಸಹಾಯ ಅನಿವಾರ್ಯ. ಆದ್ದರಿಂದ, ಜಲ ಜೀವನ ಮಿಷನ್ ಯೋಜನೆಯಡಿ ರಾಜ್ಯಕ್ಕೆ ಬಾಕಿ ಇರುವ ಕೇಂದ್ರದ ಪಾಲಿನ ಹಣವನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು ಮುಖ್ಯಮಂತ್ರಿಗಳು ಒತ್ತಾಯಿಸಿದ್ದಾರೆ.

**ಕಬ್ಬು ಬೆಳೆ ದರ ನಿಗದಿಗೆ ಸುಸ್ಥಿರ ಪರಿಹಾರ :** ಕಬ್ಬು ಬೆಳೆಗಾರರಿಗೆ ತುರ್ತು ಆರ್ಥಿಕ ನೆರವು ನೀಡಲು ಮತ್ತು ಹೆಚ್ಚಿನ ನಿವ್ವಳ ದರವನ್ನು ಖಚಿತಪಡಿಸಲು ಸರ್ಕಾರ ಆದೇಶವನ್ನು ಹೊರಡಿಸಿದ್ದು, ಸಕ್ಕರೆಯ ಕನಿಷ್ಠ ಬೆಂಬಲ ಬೆಲೆ ಪ್ರತಿ ಕೆ.ಜಿಗೆ ರೂ.31 ರಲ್ಲಿ ಸ್ಥಗಿತಗೊಂಡಿರುವುದೇ ಸಕ್ಕರೆ ಕಾರ್ಖಾನೆಗಳು ಈ ನಿಗದಿತ ಬೆಲೆಯನ್ನು ರೈತರಿಗೆ ನೀಡಲು ಸಾಧ್ಯವಾಗದಿರುವ ಕಾರಣವನ್ನು ಪತ್ರದಲ್ಲಿ ವಿವರಿಸಿ, ಈ ಸಂಕಷ್ಟಕ್ಕೆ ಶಾಶ್ವತ ಮತ್ತು ಸಮರ್ಥ ಪರಿಹಾರ ಒದಗಿಸುವ ದಿಸೆಯಲ್ಲಿ, ಸಕ್ಕರೆಯ ಎಂಎಸ್‌ಪಿಯ ತಕ್ಷಣದ ಪರಿಷ್ಕರಣೆ(ಪ್ರಸ್ತುತ ಪ್ರತಿ ಕೆ.ಜಿ.ಗೆ 31 ರೂ.ಗಳು), ಕರ್ನಾಟಕದ ಸಕ್ಕರೆ ಆಧಾರಿತ ಡಿಸ್ಟಿಲರಿಗಳಿಂದ ಎಥನಾಲ್ ಖರೀದಿ ಮಂಜೂರಾತಿಯ ಹೆಚ್ಚಳ, ರಾಜ್ಯಗಳಿಗೆ ಕಬ್ಬಿನ ಬೆಲೆಯನ್ನು ನಿಗದಿಪಡಿಸಲು ಅಥವಾ ಅನುಮೋದಿಸಲು ಅಧಿಕಾರ ನೀಡುವಂತಹ ಕೇಂದ್ರ ಅಧಿಸೂಚನೆಯ ಹೊರಡಿಸುವುದೂ ಸೇರಿದಂತೆ ಮನವಿ ಪತ್ರದಲ್ಲಿ ಮೂರು ಬೇಡಿಕೆಗಳನ್ನು ಸಲ್ಲಿಸಿದ್ದಾರೆ

**ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ :** ಕಲ್ಯಾಣ ಕರ್ನಾಟಕದ ಭಾಗವಾದ ರಾಯಚೂರು ಜಿಲ್ಲೆಯು ಆರೋಗ್ಯ ರಕ್ಷಣೆ, ಶಿಕ್ಷಣ ಹಾಗೂ ತಲಾ ಆದಾಯದ ಮಟ್ಟದಲ್ಲಿ ಆರಂಭಿಕ ಹಂತದಲ್ಲಿದೆ. ದಲಿತರು ಹಾಗೂ ಹಿಂದುಳಿದ ವರ್ಗಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಜಿಲ್ಲೆಯ ಜನರಿಗೆ ಗುಣಮಟ್ಟದ ರೆಫರೆಲ್ ವೈದ್ಯಕೀಯ ಕೇಂದ್ರದ ಅಗತ್ಯತೆಯನ್ನು ಪೂರೈಸಲು ರಾಯಚೂರು ಜಿಲ್ಲೆಯಲ್ಲಿ ಏಮ್ಸ್ ಸ್ಥಾಪನೆಗೆ ಅನುಮೋದನೆಯನ್ನು ನೀಡುವಂತೆ ಮನವಿಪತ್ರದಲ್ಲಿ ಕೋರಲಾಗಿದೆ.

ಕರ್ನಾಟಕ ಸರ್ಕಾರವು ರಾಯಚೂರಿನಲ್ಲಿ AIIMS ಸ್ಥಾಪನೆಗೆ ಅನುಮೋದನೆ ಕೋರಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯಕ್ಕೆ ವಿವರವಾದ ಯೋಜನಾ ವರದಿಯನ್ನು ಈಗಾಗಲೇ ಸಲ್ಲಿಸಿದೆ. ಯೋಜನೆಗೆ ಅವಶ್ಯವಾದ ಭೂಮಿಯ ಲಭ್ಯತೆ, ಸಂಪರ್ಕ ವ್ಯವಸ್ಥೆ ಮತ್ತು ಸ್ಥಳೀಯ ಆಡಳಿತದ ಬೆಂಬಲ ಸೇರಿದಂತೆ AIIMS ನಂತಹ ರಾಷ್ಟ್ರೀಯ ಮಟ್ಟದ ಸಂಸ್ಥೆಯನ್ನು ಜಿಲ್ಲೆಯಲ್ಲಿ ಸ್ಥಾಪಿಸಲು ಪೂರಕ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮನವಿ ಪತ್ರದಲ್ಲಿ ಕೋರಲಾಗಿದೆ.

ಮೈಸೂರು ಮಿತ್ರ ಮಂಗಳವಾರ 18 ನವೆಂಬರ್ 2025

# ಹಿರಿಯರಿಗೆ ಗೌರವ ನೀಡದಿದ್ದರೆ ಕಾಯ್ದೆ ಜಾರಿ ಅವಶ್ಯ

ನಾಗಮಂಗಲ, ನ.17–ಹಿರಿಯ ಜೀವಗಳ ಆರೋಗ್ಯ ಪೋಷಣೆ ಮಾಡುವುದು ನಮ್ಮಗಳ ಕರ್ತವ್ಯ. ಹಿರಿಯರನ್ನು ಕಡೆಗಣಿಸಿದ ಪಕ್ಷದಲ್ಲಿ ಅವರ ವಿರುದ್ಧ ಕ್ರಮಕ್ಕಾಗಿ ಕಾನೂನಾತ್ಮಕ ಕಾಯ್ದೆ ಜಾರಿಗೆ ತರುವ ಅವಶ್ಯಕತೆ ಇದೆ ಎಂದು ಹಿರಿಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಎಚ್.ಎಸ್.ಶಿವಾಜು ಅಭಿಪ್ರಾಯ ಪಟ್ಟಿದ್ದಾರೆ.



ಹಿರಿಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಎಚ್.ಎಸ್.ಶಿವರಾಜು ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಅಭಿಯೋಜನೆ ಇಲಾಖೆ, ಪೊಲೀಸ್ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಪೋಷಕರ ನಿರ್ವಹಣೆ ಮತ್ತು ಕಲ್ಯಾಣ ಹಾಗೂ ಹಿರಿಯ ನಾಗರಿಕ ಕಾಯ್ದೆ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 60 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಅವರ ಒಡೆತನದ ಆಸ್ತಿಯಿಂದ ಸ್ವಯಂಪಾಲನೆ ಘೋಷಣೆ ಮಾಡಿಕೊಳ್ಳಲು ಅಸಮರ್ಥರಾಗಿದ್ದಲ್ಲಿ ಅವರ ಮಕ್ಕಳು, ವಾರಸುದಾರರು ಅವರ ಜೀವನ ನಿರ್ವಹಣೆ ಜವಾಬ್ದಾರಿ ವಹಿಸಬೇಕಾಗುತ್ತದೆ. ಒಂದು ವೇಳೆ ಮಕ್ಕಳು ಈ ನಿರ್ವಹಣೆ ಮಾಡದಿದ್ದಲ್ಲಿ ಹಿರಿಯ ನಾಗರಿಕರ ರಕ್ಷಾ ಕಾಯಿದೆ ಅಡಿಯಲ್ಲಿ ವ್ಯವಸ್ಥೆಯನ್ನು ಮಾಡಲಾಗುವುದು ಎಂದು ತಿಳಿಸಿದರು.

ಪಾಲಕರ ಪೋಷಕರ ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯಿದೆ 2007 ಮತ್ತು ಅಧಿನಿಯಮ 2009 ಆಗಿದ್ದು, ಈ ಕಾಯ್ದೆಯು ಆರ್ಥಿಕ ಸಾಮಾಜಿಕ ಪ್ರಾಮುಖ್ಯತೆಯ ಸಾಂಸ್ಕೃತಿಕ ಪಾತ್ರಗಳು ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ಅರ್ಥಪೂರ್ಣವಾಗಿದ್ದು ಇವುಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ ಇನ್ಸ್‌ಪೆಕ್ಟರ್ ಎಚ್‌ಎಸ್ ಶಿವಕುಮಾರ್ ತಿಳಿಸಿದರು.

ಹಿರಿಯ ನಾಗರಿಕರು ಸಮಾಜಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿ ಅವರನ್ನು ಗೌರವಿಸಿ ಸಮಾಜಕ್ಕೆ ಗುಣಮಟ್ಟದ ಮೌಲ್ಯವನ್ನು ನೀಡುವುದರ ಜೊತೆಗೆ ಸಮಾಜದ ಸಮತೋಲನದಲ್ಲಿ ಹಿರಿಯ ನಾಗರಿಕರ ಸಹಭಾಗಿತ್ವ ಮುಖ್ಯವಾಗಿದೆ ಎಂದು ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಸಾದ್ ಮಾತನಾಡಿದರು. ಇದೇ ಸಮಾರಂಭದಲ್ಲಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಮಂಜುನಾಥ್ ಹಿರಿಯ ನಾಗರಿಕರ ಕಾಯ್ದೆ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಗಣ್ಯರನ್ನು ಪೊಲೀಸ್ ಪೇದೆ ನಿಂಗರಾಜ್ ಸ್ವಾಗತಿಸಿ ವಂದಿಸಿದರು.

# ಸಾಲು ಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ ಅರ್ಪಣೆ



ಕನ್ನಡ ಸಾಹಿತ್ಯ ಪರಿಷತ್ ಹಾಗೂ ತಾಲೂಕಿನ ಪ್ರಗತಿಪರ ಸಂಘಟನೆಗಳು ಸಾಲುಮರದ ತಿಮ್ಮಕ್ಕ ಅವರಿಗೆ ಗೌರವ ನಮನ ಸಲ್ಲಿಸಿದವು.

ಕೆ.ಆರ್.ಪೇಟೆ, ನ.17–ಮಕ್ಕಳಿಲ್ಲವೆಂಬುದು ಕೊರತೆಯ ಕಾರಣವಾಗದೆ. ರಸ್ತೆಯ ಬದಿಯಲ್ಲಿ ಸಾವಿರಾರು ಸಸಿಗಳನ್ನು ನೆಟ್ಟು ಅವುಗಳನ್ನೇ ಮಕ್ಕಳಂತೆ ಭಾವಿಸಿ ಬೆಳೆಸಿದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ನಮಗೆಲ್ಲಾ ಸ್ಪೂರ್ತಿದಾಯಕ ಎಂದು ಹಿರಿಯ ರೈತ ಮುಖಂಡ ಮುದುಗೆರೆ ರಾಜೇಗೌಡ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹಾಗೂ ತಾಲೂಕಿನ ಪ್ರಗತಿಪರ ಸಂಘಟನೆಗಳು ಆಯೋಜಿಸಿದ್ದ ಭಕ್ತಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೃಕ್ಷಮಾತೆ ಸಾಲುಮರದ ತಿಮ್ಮಕ್ಕನವರ ನಿಧನ ರಾಜ್ಯಮಾತ್ರವಲ್ಲದೇ ಇಡೀ ಭರತ ವರ್ಷಕ್ಕೆ ತುಂಬಲಾರದ ನಷ್ಟವಾಗಿದೆ. ಸಾವಿರಾರು ಗಿಡಗಳನ್ನು ನೆಟ್ಟು, ಅವುಗಳನ್ನು ಮಕ್ಕಳಂತೆ ಸಾಕಿ ಸಲಹಿದ ತಿಮ್ಮಕ್ಕನವರು ತಮ್ಮ ಬಹುಪಾಲು ಜೀವಿತ ಕಾಲವನ್ನು ಪರಿಸರ ಸಂರಕ್ಷಣೆಗಾಗಿ ಮುಡಿಪಾಗಿಟ್ಟಿದ್ದರು. ಎಂದು ಸ್ಮರಿಸಿದರು.

ಸಾಹಿತ್ಯ ಪರಿಷತ್ ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ ಮಾತನಾಡಿ, ತಿಮ್ಮಕ್ಕನವರ ಸೇವೆಯನ್ನು ಮುಕ್ತಕಂಠದಿಂದ ಸ್ಮರಿಸಿದರು.

ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್, ಗ್ಯಾಸ್ ರಾಜಶೇಖರ್, ಕಸಾಪ ಕಾರ್ಯದರ್ಶಿ ಕಟ್ಟೆ ಮಹೇಶ್, ಪುರಸಭಾ ಮಾಜಿ ಸದಸ್ಯ ಕೆ.ಆರ್. ನೀಲಕಂಠ, ಸಾಹಿತಿ ಚಾ.ಶಿ ಜಯಕುಮಾರ್, ಉಪನ್ಯಾಸಕ ಕತ್ತರಘಟ್ಟ ವಾಸು, ಭಾರತೀಪುರ ಪುಟ್ಟಣ್ಣ, ಕಾಡುಮೆಣಸ ಚಂದ್ರು, ಕೊಮ್ಮೆನಹಳ್ಳಿ ಅನಿಲ್, ಹೊನ್ನೇನಹಳ್ಳಿ ಸ್ವಾಮಿ, ವೆಂಕಟೇಶ್, ಐ ಬಿ ತಮ್ಮಣ್ಣ, ಕುಪ್ಪಹಳ್ಳಿ ಸುರೇಶ್, ಆರ್‌ಟಿ.ಓ ಮಲ್ಲಿಕಾರ್ಜುನ್, ಆಪ್ತ ಸಹಾಯಕ ಗಂಜಿಗೆರೆ ಮಹೇಶ್ ಸೇರಿದಂತೆ ಉಪಸ್ಥಿತರಿದ್ದರು.

# ರಾಜ್ಯಮಟ್ಟದ ಚಕ್ಕಡಿಗಾಡಿ ಓಟದ ಸ್ಪರ್ಧೆ



ಅಂಬರಹಳ್ಳಿ ಗ್ರಾಮದಲ್ಲಿ ನಡೆದ ಚಕ್ಕಡಿಗಾಡಿ ಓಟದ ಸ್ಪರ್ಧೆ.

**ಭಾರತೀನಗರ:** ಇಲ್ಲಿಗೆ ಸಮೀಪದ ಅಂಬರಹಳ್ಳಿ ಗ್ರಾಮದಲ್ಲಿ ಹಳ್ಳಿಕಾರ್ ಬಾಯ್ಸ್ ವತಿಯಿಂದ ರಾಜ್ಯ ಮಟ್ಟದ ಮೊದಲನೇ ವರ್ಷದ ಚಕ್ಕಡಿ ಗಾಡಿ ಓಟದ ಸ್ಪರ್ಧೆ ನಡೆಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಬನ್ನೂರಿನ ಡಾ.ರಾಹುಲ್‌ಗೌಡ ನೆರವೇರಿಸಿ, ಹಳ್ಳಿಕಾರ್ ತಳಿಗಳ ರಾಸುಗಳನ್ನು ಹೆಚ್ಚು ಹೆಚ್ಚು ಸಾಕಬೇಕು. ರೈತರು ರಾಸುಗಳೊಂದಿಗೆ ವರ್ಷವಿಡಿ ದುಡಿಯುತ್ತಾರೆ. ಹಾಗಾಗಿ ಅವರಿಗೆ ಮನರಂಜನೆ ನೀಡಲು ಇಂತಹ ಕಾರ್ಯಕ್ರಮವನ್ನು ಆಯೋಜಿಸುವುದು ಒಳ್ಳೆಯ ಬೆಳವಣಿಗೆ ಎಂದರು.

ಈ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಹೈಸ್ಪೀಡ್ ಜಾವಾ ದೋಸ್ತಿ ದರ್ಬಾರ್ ಮಂಡ್ಯಕ್ಕೆ 30 ಸಾವಿರ ನಗದು ಹಾಗೂ ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನ ಚನ್ನಪಟ್ಟಣ ವಿನುಅಣ್ಣ ವಿರಾಟ್‌ಗೆ 20 ಸಾವಿರ ನಗದು ಹಾಗೂ ಆಕರ್ಷಕ ಟ್ರೋಫಿ, ತೃತೀಯ ಬಹುಮಾನ ಸೀನಹಳ್ಳಿ ಹುಚ್ಚಮ್ಮ ಬ್ರಾಂಡ್ ಕರಿಯಪ್ಪ ಡಾನ್ ನಂಬರ್1 10 ಸಾವಿರ ನಗದು ಹಾಗೂ ಆಕರ್ಷಕ ಟ್ರೋಫಿ, ನಾಲ್ಕನೇ ಬಹುಮಾನ ಆಂಜನೇಯ ಸ್ವಾಮಿ ಕೃಪೆ ಚನ್ನರಾಯಪಟ್ಟಣ ಜೂನಿಯರ್ ಕುಳ್ಳಿ ಕಾವೇರಿಗೆ 5 ಸಾವಿರ ನಗದು ಹಾಗೂ ಆಕರ್ಷಕ ಟ್ರೋಫಿ, ಐದನೇ ಬಹುಮಾನ ಅಂಬರಹಳ್ಳಿ ಹಳ್ಳಿಕಾರ್ ಅಭಿಮಾನಿಗಳು ಶ್ರೀಕಾಲಭೈರವೇಶ್ವರ ಪ್ರಸನ್ನ ಎ–1 ಬ್ರ್ಯಾಂಡ್ 3 ಸಾವಿರ ನಗದು ಹಾಗೂ ಆಕರ್ಷಕ ಟ್ರೋಫಿ ಪಡೆದುಕೊಂಡಿದ್ದಾರೆ.

ಆಯೋಜಕರಾದ ಅಂಬರಹಳ್ಳಿ ಹೇಮಂತ್, ವಿಜಯ್, ಕೃಪಾಕರ, ಯೋಗ, ಸಂಜಯ್, ವಿನಯ್, ಯುವ ಮುಖಂಡರಾದ ಎ.ಸಿ. ಮಹೇಶ್, ಮನು, ಕಿರಣ್, ಹರೀಶ್, ಚಂದ್ರಶೇಖರ್, ಅರುಣ್, ಅಭಿ, ಜೈಕುಮಾರ್, ನಂದೀಶ್, ಕುಮಾರ್, ಹಾಗೂ ಗ್ರಾಮಸ್ಥರು ಸೇರಿದಂತೆ ಹಲವರಿದ್ದರು.

## ಸಾಸಲು ಗ್ರಾಮಕ್ಕೆ ಹರಿದು ಬಂದ ಭಕ್ತ ಸಾಗರ

ಕಿಕ್ಕೇರಿ, ನ.17–ಬಯಲು ಸೀಮೆಯ ಕುಕ್ಕೆ ಸುಬ್ರಹ್ಮಣ್ಯ ಎಂದು ಪ್ರಸಿದ್ಧಿ ಪಡೆದಿರುವ ಹೋಬಳಿಯ ಸಾಸಲು ಧಾರ್ಮಿಕ ಕ್ಷೇತ್ರಕ್ಕೆ ಕಾರ್ತಿಕ ಮಾಸದ ಕೊನೆಯ ಸೋಮವಾರ ಸಾಗರೋಪಾದಿಯಲ್ಲಿ ಭಕ್ತರು ಹರಿದು ಬಂದರು. ಸಮೀಪದ ನೂರಾರು ಹಳ್ಳಿಯ, ತಾಲೂಕು, ಜಿಲ್ಲೆಯ ರಾಜ್ಯದ ಹಾಗೂ ಹೊರರಾಜ್ಯದಿಂದಲೇ ಬೆಳಗ್ಗಿನಿಂದ ಸಂಜೆಯವರೆಗೆ ಲಕ್ಷಾಂತರ ಭಕ್ತರು ದೇಗುಲ ದರ್ಶನವನ್ನು ಸರತಿಯಲ್ಲಿ ನಿಂತು ಪಡೆದರೆ, ನಡುರಾತ್ರಿ 3 ಗಂಟೆಯಿಂದಲೇ ಸಮೀಪದ ಗ್ರಾಮದವರು ಎತ್ತಿನ ಗಾಡಿಯಲ್ಲಿ ಬಂದರೆ, ಹಲವರು ವಾಹನಗಳಲ್ಲಿ ಆಗಮಿಸಿ ಪವಿತ್ರ ಕೊಳದಲ್ಲಿ ಸ್ನಾನ ಮಾಡಲು ಮುಂದಾಗಿದ್ದರು.

# ಪತ್ರಕರ್ತರು ಸಮಾಜ ಕಟ್ಟುವ, ಒಡೆಯುವ ನಡುವಿನ ವ್ಯತ್ಯಾಸ ತಿಳಿದಿರಬೇಕು: ಚುಂಚಶ್ರೀ

ಮಂಡ್ಯ, ನ.17–ಸಮಾಜಕ್ಕೆ ಮಾಹಿತಿ, ಮಾರ್ಗದರ್ಶನ ನೀಡುವ ಪತ್ರಕರ್ತರು, ಸಮಾಜ ಕಟ್ಟುವ ಅಥವಾ ಒಡೆಯುವುದರ ನಡುವಿನ ವ್ಯತ್ಯಾಸಗಳನ್ನು ತಿಳಿದಿರಬೇಕು ಎಂದು ಆದಿಚುಂಚನಗಿರಿ ಮಠದ ಪೀಠಾಧಿಪತಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಕಿವಿಮಾತು ಹೇಳಿದ್ದಾರೆ.



ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಮತ್ತು ಮಂಡ್ಯ ಜಿಲ್ಲಾ ಘಟಕ ನೂತನ ಆಡಳಿತ ಮಂಡಳಿಯ ಪದಗ್ರಹಣವನ್ನು ಆದಿ ಚುಂಚನಗಿರಿ ಶ್ರೀಗಳು ಉದ್ಘಾಟಿಸಿದರು.

ನಗರದ ಕೆ.ವಿ.ಶಂಕರೇಗೌಡ ಭವನದಲ್ಲಿ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕ ಆಯೋಜಿಸಿದ್ದ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಮತ್ತು ಮಂಡ್ಯ ಜಿಲ್ಲಾ ಘಟಕ ನೂತನ ಆಡಳಿತ ಮಂಡಳಿಯ ಅಧಿಕಾರ ಸ್ವೀಕಾರ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಸಮಾಜ ಹಾಗೂ ಆಳುವ ವರ್ಗಗಳ ನಡುವೆ ನಿಜವಾದ ಸೇತುವೆಯಾಗಿ ಕೆಲಸ ಮಾಡುವುದೇ ಪತ್ರಿಕಾ ರಂಗದ ಜವಾಬ್ದಾರಿ ಪತ್ರಿಕಾ ರಂಗಕ್ಕಿರುವ ಶಕ್ತಿಯನ್ನು ಜಾಗರೂಕತೆಯಿಂದ ಬಳಸಿಕೊಳ್ಳಬೇಕು. ಆರೋಗ್ಯಕರ ಮಾಹಿತಿ, ಅನಾರೋಗ್ಯಕರವಾದರೆ ಪ್ರಜಾಪ್ರಭುತ್ವದ ವ್ಯವಸ್ಥೆ ಕುಸಿಯುತ್ತದೆ. ಅನಾರೋಗ್ಯಕರ ಮಾಹಿತಿ, ಸಮಾಜವನ್ನು ಒಡೆಯುವ ಕೆಲಸ ಮಾಡುತ್ತದೆ ಎಂಬುದನ್ನು ಮರೆಯಬಾರದು ಎಂದು ಸಲಹೆ ನೀಡಿದರು.

ಶಾಸಕ ಪಿ.ರವಿಕುಮಾರ್‌ಗೌಡ ಮಾತನಾಡಿ, ಜಿಲ್ಲಾ ಪತ್ರಕರ್ತರ ಸಂಘ ರಾಜ್ಯದಲ್ಲಿಯೇ ಅತಿ ದೊಡ್ಡ ಭವನವನ್ನು ಹೊಂದುವಂತಾಗಬೇಕು. ಸಂಘವು ಒಂದು ಎಕರೆ ಸ್ಥಳ ಪಡೆದು ದೊಡ್ಡ ಪತ್ರಕರ್ತರ ಭವನ ನಿರ್ಮಾಣವಾಗಬೇಕು ಮೂಡಾ ಮೂಲಕ ಜಿಲ್ಲಾ ಸಂಘಕ್ಕೆ ಸ್ಥಳ ನೀಡಲು ಸಿದ್ದನಿದ್ದೇನೆ. ನೀವು ಅರ್ಜಿ ಸಲ್ಲಿಸಿ ನಿಮ್ಮ ಜೊತೆ ಇರುತ್ತೇವೆ ಎಂದು ಘೋಷಣೆ ಮಾಡಿದರು.

ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಸಂಘಟನೆ ಬೆಳೆಯಲು ಮಂಡ್ಯ ಜಿಲ್ಲೆಯ ಪತ್ರಕರ್ತ ಸಮುದಾಯ ಅಪಾರ ಕೊಡುಗೆ ನೀಡಿದೆ. ಈ ಕಾರಣದಿಂದಾಗಿ ರಾಜ್ಯದ ಎಲ್ಲಾ ಜಿಲ್ಲೆಗಳ ಪತ್ರಕರ್ತರೊಂದಿಗೆ ಮಾತನಾಡಿ, ರಾಜ್ಯ ಉಪಾಧ್ಯಕ್ಷ, ಕಾರ್ಯದರ್ಶಿ ಸ್ಥಾನಗಳನ್ನು ಜಿಲ್ಲೆಗೆ ಉಳಿಸಿಕೊಟ್ಟಿದ್ದೇವೆ. ರಾಜ್ಯ ಸಂಘದಲ್ಲಿ ಉಪಾಧ್ಯಕ್ಷ ಮತ್ತೀಕೆರೆ ಜಯರಾಮ್, ಕಾರ್ಯದರ್ಶಿ ಸೋಮಶೇಖರ್ ಕೆರಗೋಡು ಸಂಘಟನೆಯಲ್ಲಿ ಹಗಲಿಗೆ ಹಗಲು ನೀಡಿ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿದರು. ಜಿಲ್ಲಾ ಪತ್ರಕರ್ತರ ಸಂಘದ ನಿರ್ಗಮಿತ ಅಧ್ಯಕ್ಷ ಕೆ.ಎನ್.ನವೀನ್ ಕುಮಾರ್ ಹಾಗೂ ಪ್ರಧಾನ ಕಾರ್ಯದರ್ಶಿ ಆನಂದ್ ನೂತನ ಅಧ್ಯಕ್ಷ ಕೆ.ಎನ್.ರಾಘವೇಂದ್ರ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷರಾದ ಪಿ.ಜೆ.ಚೈತನ್ಯ ಕುಮಾರ್, ಕೆ.ಎನ್. ರವಿ, ಬಿ.ಪಿ.ಪ್ರಕಾಶ್, ಹಿರಿಯ ಪತ್ರಕರ್ತ ಎ.ಎಲ್.ಬಸವೇಗೌಡ, ಚುನಾವಣಾಧಿಕಾರಿ ಶಿವನಂಜಯ್ಯ, ನಿರ್ಗಮಿತ ಅಧ್ಯಕ್ಷ ಕೆ.ಎನ್.ನವೀನ್ ಕುಮಾರ್, ನಿರ್ಗಮಿತ ಪ್ರಧಾನ ಕಾರ್ಯದರ್ಶಿ ಆನಂದ್ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಂಘದ ರಾಜ್ಯ ಉಪಾಧ್ಯಕ್ಷ ಮತ್ತೀಕೆರೆ ಜಯರಾಮ್, ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್, ಕಾರ್ಯದರ್ಶಿ ಸೋಮಶೇಖರ್ ಕೆರಗೋಡು ಸೇರಿದಂತೆ ಜಿಲ್ಲಾ ಪದಾಧಿಕಾರಿಗಳು ಹಾಜರಿದ್ದರು.

# ನಾಳೆ ಚಿನಕುರಳಿಯಲ್ಲಿ ಸಹಕಾರ ಸಪ್ತಾಹ


ಪಾಂಡವಪುರ, ನ.17– 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ತಾಲೂಕಿನ ಚಿನಕುರಳಿ ಗ್ರಾಮದ ಶ್ರೀ ಜಯಮ್ಮ ಕಾಳೇಗೌಡ ಸಮುದಾಯ ಭವನದಲ್ಲಿ ನ.19ರ ಬುಧವಾರ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಹೇಳಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಾಜಿ ಎಂಎಲ್‌ಸಿ ಅಪ್ಪಾಜಿಗೌಡ ಘನ ಉಪಸ್ಥಿತಿ ವಹಿಸುವರು. ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಕಾರ್ಯಕ್ರಮ ಅಧ್ಯಕ್ಷತೆ ವಹಿಸಲಿದ್ದಾರೆ. ಚಿನಕುರಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ ಧ್ವಜಾರೋಹಣ ನೆರವೇರಿಸಲಿದ್ದಾರೆ. ಪ್ರಾಧ್ಯಾಪಕ ಡಾ.ಕೆಂಪೇಗೌಡ ಉಪನ್ಯಾಸ ನೀಡಲಿದ್ದಾರೆ. ಎಂದು ಸುದ್ಧಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಸಹಕಾರ ಒಕ್ಕೂಟದ ವಿಶೇಷಾಧಿಕಾರಿ ಕೆ.ಅನಿತಾ, ಮನ್‌ಮುಲ್ ಅಧ್ಯಕ್ಷ ಯು.ಸಿ.ಶಿವಕುಮಾರ್, ರಾಜ್ಯ ಸಹಕಾರ ಮಾರಾಟ ಮಹಾಮಂಡಳಿಯ ನಿರ್ದೇಶಕ ಎಸ್.ಎಲ್. ಮೋಹನ್, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಎಚ್.ಸಿ.ಪುಟ್ಟಸ್ವಾಮಿಗೌಡ, ಎ.ವಿಜಯೇಂದ್ರಮೂರ್ತಿ, ಆರ್.ಎ. ನಾಗಣ್ಣ, ಎಚ್.ಕೆ.ಕೃಷ್ಣ, ಟಿಎಪಿಸಿಎಂಎಸ್ ಅಧ್ಯಕ್ಷ ಎಚ್.ಗಿರೀಶ್, ಎಚ್.ಪಿ.ಚಲುವೇಗೌಡ, ಜಿ.ಕೆ.ಶಿವಕುಮಾರ್, ಶಿವಪ್ಪ ಭಾಗವಹಿಸುವರು.

ಗೋಷ್ಠಿಯಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಎಚ್.ಸಿ.ಪುಟ್ಟಸ್ವಾಮಿ ಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಚಿಕ್ಕಾಡೆ ಗಿರೀಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಚಲುವೇಗೌಡ, ಟಿಎಪಿಸಿಎಂಎಸ್ ನಿರ್ದೇಶಕ ವಿ.ಎಸ್. ನಿಂಗೇಗೌಡ, ಮಾಜಿ ಅಧ್ಯಕ್ಷ ರಾಮಕೃಷ್ಣೇ ಗೌಡ, ಎಆರ್ ನಿರ್ಮಲಾ, ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್ ಹಾಜರಿದ್ದರು.

## ಇಂದಿನಿಂದ 3 ದಿನ ನಾಗಮಂಗಲದಲ್ಲಿ ವಿದ್ಯುತ್ ವ್ಯತ್ಯಯ



ನಾಗಮಂಗಲ, ನ.17– ನಾಗಮಂಗಲ ಪಟ್ಟಣ ವ್ಯಾಪ್ತಿ ಜುಟ್ಟನಹಳ್ಳಿ, ಎಂ.ಹೊಸೂರು. ಹೊನ್ನಬೆಟ್ಟದ ಹೊಸೂರು, ಕಲ್ಲುದೇವನಹಳ್ಳಿ. ಹೊಟ್ಟೇಗೌಡನಕೊಪ್ಪಲು, ಶೀರಾಪಟ್ಟಣ. ಎ.ಶ್ರೀರಾಮನಹಳ್ಳಿ, ಜೋಡಿ ನೇರಲಕೆರೆ, ಸಂಕನಹಳ್ಳಿ ಗಂಗಸಮುದ್ರ, ಬಂಕಾಪುರ, ಗೊಲ್ಲರಹಳ್ಳಿ, ಕಾರಹಳ್ಳಿ, ಸೀತಾಪುರ, ಬೆಟ್ಟದಮಲ್ಲೇನಹಳ್ಳಿ, ಭದ್ರೇಗೌಡನಕೊಪ್ಪಲು, ಬಾಳನಕೊಪ್ಪಲು, ಚಿಕ್ಕವೀರನಕೊಪ್ಪಲು, ಕುಂಬಾರಕೊಪ್ಪಲು, ಬ್ಯಾಟೆರಾಮನ ಕೊಪ್ಪಲು ಮತ್ತು ಪಡುವಲಪಟ್ಟಣ ಗ್ರಾಮಗಳಿಗೆ ನಾಳೆ (ನ.18)ಯಿಂದ ನ.20ರವರೆಗೆ ಬೆಳಿಗ್ಗೆ 10ರಿಂದ ಸಂಜೆ 6ಗಂಟೆ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ನಿಗಮದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

# ಭಾರತೀಯ ಯಾತ್ರಿಕರು ಸಜೀವ ದಹನ

ಭಾರತಕ್ಕೆ ತರುವಂತೆ ಭಾರತ ಸರ್ಕಾರಕ್ಕೆ ಮನವಿ ಮಾಡುವುದಾಗಿ ತಿಳಿಸಿದರು. ಬೆಳಗಿನ ಜಾವ 1:30 ರ ಸುಮಾರಿಗೆ (IST) ಡೀಸೆಲ್ ಟ್ಯಾಂಕರ್‌ಗೆ ಬಸ್ ಡಿಕ್ಕಿ ಹೊಡೆದಾಗ ಸುಮಾರು 46 ಜನರು ಬಸ್‌ನಲ್ಲಿದ್ದರು ಎಂದು ಹೇಳಲಾಗಿದೆ. ಸಂತ್ರಸ್ತ ಕುಟುಂಬಕ್ಕೆ ನೆರವು ನೀಡಲು ಸಹಾಯವಾಣಿ ಸ್ಥಾಪಿಸಲಾಗಿದೆ ಎಂದು ಜೆದ್ದಾದಲ್ಲಿರುವ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ. ಪ್ರಸ್ತುತ ರಷ್ಯಾ ಭೇಟಿಯಲ್ಲಿ ರುವ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅಪಘಾತದ ಬಗ್ಗೆ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ.

**ಹುಬ್ಬಳ್ಳಿ ವ್ಯಕ್ತಿ ಸಾವು:** ಸೌದಿ ಅರೇಬಿಯಾದಲ್ಲಿ ಸಂಭವಿಸಿದ ಭೀಕರ ಬಸ್ ಅಪಘಾತದಲ್ಲಿ ಓರ್ವ ಕನ್ನಡಿಗ ಕೂಡ ಸಾವನ್ನಪ್ಪಿದ್ದಾರೆ. ಹುಬ್ಬಳ್ಳಿಯ ಅಬ್ದುಲ್ ಘಣಿ ಶಿರಹಟ್ಟಿ (55) ಸಾವಿಗೀಡಾಗಿರುವ ಕನ್ನಡಿಗ ಎಂದು ಅವರ ಪಾಸ್‌ಪೋರ್ಟ್ ಉಲ್ಲೇಖಿಸಿ ದೃಢಪಡಿಸಲಾಗಿದೆ. ಹುಬ್ಬಳ್ಳಿ ನಗರದ ಗಣೇಶಪೇಟ್ ನಿವಾಸಿಯಾದ ಇವರು, ಎರಡು ತಿಂಗಳ ಹಿಂದೆ ದುಬೈಗೆ ಹೋಗಿದ್ದರು. ಅಬುದಾಬಿ ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದರು.

ರಿಯಾದ್‌ನಲ್ಲಿರುವ ನಮ್ಮ ರಾಯಭಾರ ಕಚೇರಿ ಮತ್ತು ಜೆದ್ದಾದಲ್ಲಿರುವ ರಾಯಭಾರಿ ಕಚೇರಿ, ಈ ಅಪಘಾತದಿಂದ ಹಾನಿಗೊಳಗಾದ ಭಾರತೀಯ ಪ್ರಜೆಗಳು ಮತ್ತು ಕುಟುಂಬಗಳಿಗೆ ಸಂಪೂರ್ಣ ಬೆಂಬಲವನ್ನು ನೀಡುತ್ತಿದೆ ಎಂದು ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

# ಪಾರ್ವತಿಗೆ ಅನಾರೋಗ್ಯ

ವೈದ್ಯರ ತಂಡ ಚಿಕಿತ್ಸೆ ಆರಂಭಿಸಿದ್ದು, ಐಸಿಯುನಲ್ಲಿ ಚಿಕಿತ್ಸೆ ನೀಡುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯರೂ ಆದ ಸಿಎಂ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಹೇಳಿದ್ದಾರೆ. ಪ್ರಧಾನಿ ಮೋದಿ ಭೇಟಿ ಹಾಗೂ ಹೈಕಮಾಂಡ್ ಜತೆ ಚರ್ಚೆ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು ದೆಹಲಿಗೆ ತೆರಳಿದ್ದರು. ಸಭೆ ಮುಕ್ತಾಯವಾದ ಬೆನ್ನಲ್ಲೇ ಪತ್ನಿ ಅನಾರೋಗ್ಯ ವಿಚಾರ ಅವರಿಗೆ ತಿಳಿಸಲಾಗಿದೆ. ರಾತ್ರಿ ವೇಳೆಗೆ ಬೆಂಗಳೂರಿಗೆ ಆಗಮಿಸಿದ ಕೂಡಲೇ ನೇರವಾಗಿ ಆಸ್ಪತ್ರೆಗೆ ತೆರಳಿದ ಸಿದ್ದರಾಮಯ್ಯ ಅವರು ಪತ್ನಿಯ ಆರೋಗ್ಯ ವಿಚಾರಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ, ತಮ್ಮ ಪತ್ನಿಗೆ ಶ್ವಾಸಕೋಶ ಸೋಂಕು ಇದೆ. ಆದರೆ, ಈಗ ಸುಧಾರಿಸಿದ್ದು, ಯಾವುದೇ ಸಮಸ್ಯೆ ಇಲ್ಲ. ಇನ್ನು 2–3 ದಿನ ಅವರು ಆಸ್ಪತ್ರೆಯಲ್ಲಿ ಇರಬೇಕಾಗುತ್ತದೆ ಎಂದು ವೈದ್ಯರು ತಿಳಿಸಿದ್ದಾರೆ ಎಂದರು.

# ಶೇಖ್ ಹಸೀನಾಗೆ ಗಲ್ಲು ಶಿಕ್ಷೆ

ಅವರ ನಿಷ್ಕ್ರಿಯತೆಯ ಮೂಲಕ ವಿದ್ಯಾರ್ಥಿಗಳನ್ನು ಹತ್ಯೆ ಮಾಡಲಾಗಿದೆ. ಈ ಹತ್ಯೆಗಳು ಪ್ರಧಾನಿ ಶೇಖ್ ಹಸೀನಾ ಅವರ ಆದೇಶ ಮತ್ತು ಅವರ ಅರಿವಿನಲ್ಲೇ ನಡೆದಿದೆ. ಇಂತಹ ಕೃತ್ಯಗಳನ್ನು ಎಸಗುವ ಮೂಲಕ ಮಾನವೀಯತೆಯ ವಿರುದ್ಧ ಅಪರಾಧ ಗಳನ್ನು ಮಾಡಿದ್ದಾರೆ ಎಂದು ಕೋರ್ಟ್ ಹೇಳಿದೆ.

ಇದೀಗ ತಿಂಗಳುಗಳ ಕಾಲ ನಡೆದ ವಿಚಾರಣೆಯಲ್ಲಿ ಉತ್ಪಾದಿಸಲಾದ ಸಾಕ್ಷ್ಯಗಳು, ಭದ್ರತಾ ಸಿಬ್ಬಂದಿಯ ಹೇಳಿಕೆಗಳು ಮತ್ತು ತನಿಖಾ ವರದಿಗಳ ಆಧಾರದಲ್ಲಿ ನ್ಯಾಯಾಲಯವು ಹಸೀನಾ ಅವರ ಪಾತ್ರವನ್ನು ಉಲ್ಲೇಖಿಸಿದೆ. ಪ್ರತಿಭಟನೆಗಳನ್ನು ಕುಂಠಿತಗೊಳಿಸುವ ಹೆಸರಿನಲ್ಲಿ ಭದ್ರತಾ ಪಡೆಗಳು ಅತಿಯಾದ ಬಲಪ್ರಯೋಗಕ್ಕೆ ಮುಂದಾಗಿದ್ದವು ಎಂಬ ವಿಚಾರವನ್ನು ನ್ಯಾಯಾ ಲಯ ವಿಶೇಷವಾಗಿ ಉಲ್ಲೇಖಿಸಿದೆ. ಶೇಖ್ ಹಸೀನಾ ಮಾತ್ರವಲ್ಲದೇ ಅವರ ಆಪ್ತರಾಗಿದ್ದ ಮಾಜಿ ಗೃಹ ಸಚಿವ ಅಸಾದು ಜ್ಜಮಾನ್ ಖಾನ್ ಕಮಲ್ ಮತ್ತು ಮಾಜಿ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಚೌಧು ಅಬ್ದುಲ್ಲಾ ಅಲ್–ಮಾಮುನ್ ಅವರನ್ನೂ ಕೋರ್ಟ್ ದೋಷಿ ಎಂದು ಹೇಳಿದೆ

ಐಸಿಟಿ ನೀಡಿರುವ ವರದಿ ಪ್ರಕಾರ, 2024ರ ಜುಲೈನಲ್ಲಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ನಡೆದ ಸರ್ಕಾರ ವಿರೋಧಿ ಪ್ರತಿಭಟನೆಗಳನ್ನು ಹತ್ತಿಕ್ಕಲು ಹಸೀನಾ ಸರ್ಕಾರವು ಭದ್ರತಾ ಪಡೆಗಳಿಗೆ ಅತಿಯಾದ ಬಲಪ್ರಯೋಗಕ್ಕೆ ಅನುಮತಿ ನೀಡಿರುವುದು ದಾಖಲಾಗಿದೆ. ಈ ಕ್ರಮದಲ್ಲಿ ಅನೇಕ ವಿದ್ಯಾರ್ಥಿಗಳು ಮತ್ತು ನಾಗರಿಕರು ಪ್ರಾಣ ಕಳೆದುಕೊಂಡಿದ್ದರು. ಪ್ರತಿಭಟನೆಗಳ ದಮನದ ಕ್ರಮ ದೇಶದಲ್ಲಿ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿತ್ತು. ದಂಗೆಯ ಸಂಬಂಧಿಸಿದ ಪ್ರಕರಣಗಳ ತನಿಖೆಯನ್ನು ಕೈಗೊಂಡಿದ್ದ ಐಸಿಟಿ ಹಲವು ತಿಂಗಳ ವಿಚಾರಣೆಯ ನಂತರ ಇಂದು ಅಂತಿಮ ತೀರ್ಪು ಪ್ರಕಟಿಸಿದೆ

**ಪಿತೂರಿ ಎಂದ ಅವಾಮಿ ಲೀಗ್:** ಇನ್ನು ಈ ತೀರ್ಪಿನ ವಿರುದ್ಧ ಕೆಂಡಕಾರಿರುವ ಅವಾಮಿ ಲೀಗ್ ಪಕ್ಷ ಹಸೀನಾ ವಿರುದ್ಧದ ಪ್ರಕರಣಗಳನ್ನು ಪಿತೂರಿ ಎಂದು ಕರೆದಿದೆ. ಹಸೀನಾ ಮತ್ತು ಖಾನ್ ವಿಚಾರಣೆಗೆ ಹಾಜರಾಗದ ಕಾರಣ 54 ಸಾಕ್ಷ್ಯಗಳನ್ನು ಪರಿಶೀಲಿಸಿ, ಆರೋಪಿಗಳ ಅನುಪಸ್ಥಿತಿಯಲ್ಲೇ ಅಕ್ಟೋಬರ್ 23ರಂದು ವಿಚಾರಣೆ ಪೂರ್ಣಗೊಳಿಸಲಾಗಿತ್ತು. ಆರೋಪಿಗಳಿಗೆ ಮರಣ ದಂಡನೆಯನ್ನೇ ವಿಧಿಸಬೇಕು ಎಂದು ನ್ಯಾಯ ಮಂಡಳಿಯ ವಕೀಲರು ವಾದ ಮಂಡಿಸಿದ್ದರು. ತೀರ್ಪು ಪ್ರಕಟವಾದ ನಂತರ ನ್ಯಾಯಾಲಯದ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

# ಕ್ಲೈಮ್ಯಾಕ್ಸ್ ನಿಗೂಢ!

ಇದು ಸೂಕ್ತ ಸಮಯವಲ್ಲ, ಎರಡೂವರೆ ವರ್ಷ ಆಡಳಿತ ಪೂರ್ಣಗೊಳಿಸಿದ ಬಳಿಕ ಈ ವಿಚಾರ ಕೈಗೆತ್ತಿಕೊಳ್ಳೋಣ ಎಂದು ನಾನೇ ಹೇಳಿದ್ದೆ. ಈಗ ಅವರು ಏನು ಹೇಳ್ತಾರೋ ಹಾಗೇ ಮಾಡ್ತೇನೆ ಎಂದು ಒತ್ತಿ ಹೇಳಿದರು. ಆದರೆ ಖರ್ಗೆ ಅವರೊಂದಿಗೆ ಚರ್ಚೆ ನಡೆಸಿದ ನಂತರ ಸುದ್ದಿಗಾರರು ಮಾತನಾಡಿಸಲು ಮುಂದಾದಾಗ ಯಾವುದೇ ಪ್ರತಿಕ್ರಿಯೆ ನೀಡದೆ ತೆರಳಿದರು.

ಖರ್ಗೆ ಅವರ ಭೇಟಿಗೂ ಮುನ್ನ ನಗುತ್ತಲೇ ಸಹಜವಾಗಿ ಮಾತನಾಡಿದ್ದ ಮುಖ್ಯಮಂತ್ರಿಗಳು, ಭೇಟಿಯ ನಂತರ ಯಾವುದೇ ಪ್ರತಿಕ್ರಿಯೆ ನೀಡದಿರುವುದು ತೀವ್ರ ಕುತೂಹಲ ಕೆರಳಿಸಿದೆ. ಸಂಪುಟ ಪುನರ್ ರಚನೆ ಮೂಲಕ ಮತ್ತೊಂದು ಮಹತ್ವದ ವಿಚಾರ ಸಂಬಂಧ ಚರ್ಚೆಗೆ ಬ್ರೇಕ್ ಹಾಕುವ ಪ್ರಯತ್ನ ಫಲ ನೀಡಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ ಎಂಬ ಚರ್ಚೆಗಳು ಶುರುವಾಗಿವೆ. ಈ ಮಧ್ಯೆ ಸಚಿವ ಸ್ಥಾನದ ಆಕಾಂಕ್ಷಿಗಳು ಅದರಲ್ಲೂ ಸಿದ್ದರಾಮಯ್ಯ ಅವರ ಆಪ್ತ ಸಚಿವರು ಹಾಗೂ ಶಾಸಕರು ದೆಹಲಿಗೆ ಎಡತಾಕುತ್ತಿದ್ದಾರೆ.

**ಹೆಚ್ಚುತ್ತಿದೆ 'ನವೆಂಬರ್ ಕ್ರಾಂತಿ' ಕಿಚ್ಚು:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಅಧಿಕಾರಕ್ಕೆ ಬರುವಲ್ಲಿ ಮಹತ್ವದ ಪಾತ್ರ ವಹಿಸಿದ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರಿಗೆ ತಲಾ ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆ ಒಪ್ಪಂದವಾಗಿದೆ ಎಂಬ ವಿಚಾರ ಚರ್ಚೆಗೆ ಬಂದಾಗಿನಿಂದ ಉಭಯ ನಾಯಕರ ಆಪ್ತರು ತಮ್ಮದೇ ಆದ ಶೈಲಿಯಲ್ಲಿ ಬ್ಯಾಟ್ ಬೀಸುತ್ತಲೇ ಇದ್ದಾರೆ. ಅತ್ತ ವಿಪಕ್ಷ ಬಿಜೆಪಿ ನಾಯಕರೂ ಆಗಾಗ್ಗೆ 'ನವೆಂಬರ್ ಕ್ರಾಂತಿ' ಭವಿಷ್ಯವನ್ನು ಹೇಳುತ್ತಲೇ ಬಂದಿದ್ದಾರೆ. ಈ ನಡುವೆ ಸಿದ್ದರಾಮಯ್ಯನವರು ಯಾವ ಕ್ರಾಂತಿಯೂ ಇಲ್ಲ, ಭ್ರಾಂತಿಯೂ ಇಲ್ಲ ಎಂದು ಅಧಿಕಾರ ಹಂಚಿಕೆ ಪ್ರಸ್ತಾಪವೇ ಆಗಿಲ್ಲ ಎಂಬಂತೆ ನಡೆದುಕೊಂಡಿದ್ದರು. ಏನೂ ಇಲ್ಲ... ಏನೂ ಇಲ್ಲ... ಎಂತಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನವದೆಹಲಿಯಲ್ಲೇ ತಂತ್ರಗಾರಿಕೆ ಹೂಡುತ್ತಿರುವುದು ಭಾರೀ ಸಂಚಲನದ ಮುನ್ಸೂಚನೆ ಎನ್ನಲಾಗುತ್ತಿದೆ.

ಡಿ.ಕೆ.ಶಿವಕುಮಾರ್ ಅವರು ಈ ವಿಚಾರವಾಗಿ ಮಾಧ್ಯಮಗಳ ಮುಂದೆ ನೇರವಾಗಿ ಮಾತನಾಡದಿದ್ದರೂ, ತಮ್ಮ ತಮ್ಮ ಉದ್ದೇಶ ಸಾಧನೆಗೆ ಎಲ್ಲಾ ರೀತಿಯ ಪ್ರಯತ್ನ ಮುಂದುವರೆಸಿದ್ದಾರೆ. ಈ ನಡುವೆ ನಾನು ಪಕ್ಷಕ್ಕೆ ನಿಷ್ಠೆಯುಳ್ಳ ವನು. ನಾನು ಎಂದಿಗೂ ಬ್ಲ್ಯಾಕ್‌ಮೇಲ್ ಮಾಡುವವನಲ್ಲ. ಪಕ್ಷದ ಶಿಸ್ತಿನ ಸಿಪಾಯಿ. ದೇಶದ ನಾನಾ ರಾಜ್ಯದಲ್ಲಿ ಕಾಂಗ್ರೆಸ್ ಸಂಕಷ್ಟಕ್ಕೆ ಸಿಲುಕಿದ್ದಾಗ ಒಂಟಿಯಾಗಿ ನಿಂತು ಪರಿಸ್ಥಿತಿ ಎದುರಿಸಿದ್ದೇನೆ. ಪಕ್ಷವನ್ನು ಕಾಪಾಡಿದ್ದೇನೆ. ಇದೇ ಕಾರಣದಿಂದ ನಾನು ಜೈಲಿಗೂ ಹೋಗಿದ್ದೆ. ಪಕ್ಷ ನಿಷ್ಠೆಯಿಂದ ಒಂಟಿಯಾಗಿ ನಿಂತು ಕೆಲಸ ಮಾಡಿದ್ದೇನೆ. ಈಗ ಅವಕಾಶ ಬಂದಿದೆ. ಒಬ್ಬನೇ ಕೇಳುತ್ತಿದ್ದೇನೆ. ಒಂದು ಅವಕಾಶ ಕೊಡಿ. ಈ ವಿಚಾರದಲ್ಲೂ ನಾನು ಒಂಟಿಯಾಗಿಯೇ ಪ್ರಯತ್ನ ಮುಂದುವರೆಸುತ್ತೇನೆ ಎಂದು ಹೇಳಿಕೊಂಡಿದ್ದಾರೆ ಎನ್ನಲಾಗಿದೆ

ಈ ಎಲ್ಲಾ ವಿದ್ಯಮಾನಗಳನ್ನು ಗಮನಿಸಿದರೆ ಇನ್ನೊಂದು ವಾರದಲ್ಲಿ ರಾಜ್ಯ ರಾಜಕೀಯದಲ್ಲಿ ಮಹತ್ತರ ಬೆಳವಣಿಗೆಗಳಾದರೂ ಅಚ್ಚರಿ ಇಲ್ಲ. ಸಂಪುಟ ಪುನರ್ ರಚನೆ ಮೂಲಕ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರೆಯುವರೋ ಅಥವಾ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಅದೃಷ್ಟ ಒಲಿಯುವುದೋ ಇಲ್ಲ ಇವೆರಡನ್ನೂ ಮೀರಿದ ಬೆಳವಣಿಗೆಯೇನಾದರೂ ನಡೆಯಬಹುದೋ ಕಾದು ನೋಡಬೇಕಿದೆ.

# ನವೆಂಬರ್– ಡಿಸೆಂಬರ್ ಒಳಗೆ ಸಿಎಂ ಸ್ಥಾನ ಕಲ್ಪಿಸಿ

ಭೇಟಿ ಮಾಡಿ ಹಕ್ಕೋತ್ತಾಯ ಮಂಡಿಸಿ ದ್ದಾರೆ. ಈ ನಾಯಕರ ಭೇಟಿಗೂ ಮುನ್ನ ಪಕ್ಷದ ಪ್ರಮುಖ ನಾಯಕಿ ಪ್ರಿಯಾಂಕಾ ಗಾಂಧಿ ಅವರನ್ನು ದೆಹಲಿ–ಹರಿಯಾಣ ಗಡಿ ಭಾಗದಲ್ಲಿರುವ ಗುರುಗ್ರಾಮ್ ನಿವಾಸಕ್ಕೆ ತೆರಳಿ ಎರಡು ಬಾರಿ ಭೇಟಿ ಮಾಡಿ, ನಾಯಕತ್ವ ಹಸ್ತಾಂತರಕ್ಕೆ ಸಂಬಂಧಿಸಿ ದಂತೆ ಚರ್ಚಿಸಿದ್ದಾರೆ. ಪ್ರಿಯಾಂಕಾ ಭೇಟಿ ನಂತರವೇ ಖರ್ಗೆ ಹಾಗೂ ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಅಧಿಕಾರ ಹಸ್ತಾಂತರ ಕುರಿತಂತೆ ಚರ್ಚೆ ನಡೆಸಿದರು. ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಭೇಟಿಗೆ ಸಮಯಾವಕಾಶ ಕೋರಿದ್ದರಾದರೂ ಸೋಮವಾರ ಸಂಜೆವರೆಗೂ ಸಮಯ ನೀಡಿರಲಿಲ್ಲ.

ರಾಜಗುರು ಡಾ.ದ್ವಾರಕನಾಥ್ ಸೇರಿದಂತೆ ತಮ್ಮ ನಂಬುಗೆಯ ಪೀಠ ನವೆಂಬರ್–ಡಿಸೆಂಬರ್‌ನಲ್ಲೇ ಮುಖ್ಯಮಂತ್ರಿ ಅಧಿಕಾರ ಸ್ಥಾನ ಪಡೆಯುವಂತೆ ಭವಿಷ್ಯ ನುಡಿದಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಸುರ್ಜೇವಾಲ ಮೂಲಕ ವೇಣುಗೋಪಾಲ್ ಮತ್ತು ಖರ್ಗೆ ಅವರನ್ನು ಭೇಟಿ ಮಾಡಿದ ಶಿವಕುಮಾರ್, ಅಧಿಕಾರ ಹಸ್ತಾಂತರಕ್ಕೆ ಒತ್ತಡ ಹೇರಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ 2026ರ ಏಪ್ರಿಲ್–ಮೇ ವೇಳೆಗೆ ಅಧಿಕಾರ ಹಸ್ತಾಂತರಿಸುವ ಮಾಹಿತಿಯನ್ನು ಶಿವ ಕುಮಾರ್ ಮತ್ತು ವರಿಷ್ಠ ರಿಗೆ ಸಂದೇಶ ರವಾನಿಸಿದ್ದರು. ಸಿದ್ದರಾಮಯ್ಯ ಸಂದೇಶಕ್ಕೆ ಒಪ್ಪಿಗೆ ಸೂಚಿಸಲು ಶಿವಕುಮಾರ್ ಮುಂದಾಗಿದ್ದರಾದರೂ, ಜ್ಯೋತಿಷಿಗಳು

ಡಿಸೆಂಬರ್ ನಂತರ ಉನ್ನತ ಅಧಿಕಾರ ಯೋಗ ಲಭ್ಯ ಅವಕಾಶ ಕ್ಷೀಣವಾಗಿದ್ದು, ನೀವು ಇಚ್ಛಿಸಿರುವುದನ್ನು ಈ ವರ್ಷವೇ ಪಡೆದುಕೊಳ್ಳಿ ಎಂಬ ಸಲಹೆ ನೀಡಿದ್ದಾರೆ ಎನ್ನಲಾಗಿದೆ. ಜ್ಯೋತಿಷ್ಯದ ಮೇಲೆ ನಂಬಿಕೆ ಹೊಂದಿರುವ ಶಿವಕುಮಾರ್ 2025ರಲ್ಲೇ ಅಧಿಕಾರ ಪಡೆಯಲು ದೆಹಲಿಯಲ್ಲಿ ತೀವ್ರ ಲಾಬಿ ನಡೆಸಿದ್ದಾರೆ. ಉನ್ನತ ಮೂಲಗಳ ಪ್ರಕಾರ ಶಿವಕುಮಾರ್ ಸೋಮವಾರ ರಾತ್ರಿ ಬೆಂಗಳೂರಿಗೆ ಹಿಂತಿರುಗಿ, ಮಂಗಳವಾರ ಬೆಳಗ್ಗೆ ಮತ್ತೆ ದೆಹಲಿಗೆ ತೆರಳಲಿ ದ್ದಾರೆ, ಅವರ ಸಹೋದರ ಸುರೇಶ್ ಮಾತ್ರ ಅಲ್ಲಿಯೇ ಬಿಡಾರ ಹೂಡಿದ್ದಾರೆ.

# ದೆಹಲಿಯ ಕರ್ನಾಟಕ ಭವನದಲ್ಲಿ ಭೋಜನ....



ದೆಹಲಿಯ ಕರ್ನಾಟಕ ಭವನದಲ್ಲಿ ಸೋಮವಾರ ಮಧ್ಯಾಹ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಡಾ. ಹೆಚ್.ಡಿ. ಮಹದೇವಪ್ಪ, ಬಸವರಾಜ ರಾಯರೆಡ್ಡಿ ಇನ್ನಿತರರು ಮುದ್ದೆ ಊಟ ಸೇವಿಸಿದರು.

# ಸಿಎಂ ಸ್ಥಾನ ಈಗ ಮ್ಯೂಸಿಕಲ್ ಚೇರ್

ಬೆಂಗಳೂರು, ನ.17(ಕೆಎಂಶಿ)– ಆಢಳಿತಾರೂಢ ಕರ್ನಾಟಕ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಹುದ್ದೆ ಮ್ಯೂಸಿಕಲ್ ಚೇರ್ ಆಗಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ವ್ಯಂಗ್ಯವಾಡಿದ್ದಾರೆ.



ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ಉಳಿಸಿಕೊಳ್ಳಲು ಸಿದ್ದರಾಮಯ್ಯ, ಅಧಿಕಾರ ಕಸಿಯಲು ಡಿ.ಕೆ.ಶಿವಕುಮಾರ್ ದೆಹಲಿಯಲ್ಲೇ ರಾಜಕಾರಣ ಮಾಡುತ್ತಾ ರಾಜ್ಯದ ಜನರ ಕಡೆ ಗಮನ ಹರಿಸುತ್ತಿಲ್ಲ ಎಂದು ಕಿಡಿಕಾರಿದ್ದಾರೆ. ರೈತರು ಹಲವು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ, ಭಾರೀ ಮಳೆಯಿಂದ ಉಂಟಾಗಿರುವ ಬೆಳೆ ನಷ್ಟಕ್ಕೆ ಪರಿಹಾರ ನೀಡಿಲ್ಲ, ಕಾಡು ಪ್ರಾಣಿಗಳಿಂದ ಜನರಿಗೆ ರಕ್ಷಣೆ ಇಲ್ಲ, ಮತ್ತೊಂದೆಡೆ ಕಾಡಿನಲ್ಲಿರುವ ಪ್ರಾಣಿಗಳೂ ಸಾಯುತ್ತಿವೆ. ಇದಾವುದಕ್ಕೂ ಗಮನಹರಿಸದೆ ಮುಖ್ಯಮಂತ್ರಿ ಹುದ್ದೆಗಾಗಿ ಪೈಪೋಟಿ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರನ್ನು ಅಧಿಕಾರದಲ್ಲಿ ಉಳಿಸಿಕೊಳ್ಳಲು ಅವರ ಸಂಪುಟದ ಅನೇಕ ಸಚಿವರು ದೆಹಲಿಯಲ್ಲೇ ಬಿಡಾರ ಹೂಡಿ ಪಕ್ಷದ ವರಿಷ್ಠರ ಮನವೊಲಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಕರ್ನಾಟಕದಲ್ಲಿ ಮುಖ್ಯಮಂತ್ರಿ ಸ್ಥಾನ ಮ್ಯೂಸಿಕಲ್ ಚೇರ್ ಆಗಿ ಪರಿವರ್ತನೆಗೊಂಡಿದೆ. ಅಧಿಕಾರದ ಗದ್ದುಗೆ ಹಿಡಿಯುವ, ಉಳಿಸಿಕೊಳ್ಳುವ ಭರಾಟೆಯಲ್ಲಿ ರಾಜ್ಯದ ಅಭಿವೃದ್ಧಿ ಸಂಪೂರ್ಣ ನೆಲಕಚ್ಚಿದೆ. ಕಳೆದ ಕೆಲವು ತಿಂಗಳಿಂದ ಅಧಿಕಾರ ಹಂಚಿಕೆಯೇ ವಿಷಯವಾಗಿ ಮಾರ್ಪಟ್ಟು, ಅಧಿಕಾರಿಗಳು ತಮ್ಮ ಮನಬಂದಂತೆ ಆಡಳಿತ ನಡೆಸುತ್ತಿದ್ದಾರೆ.

ಸರ್ಕಾರದ ಮೇಲೆ ಯಾರ ಹಿಡಿತವೂ ಇಲ್ಲ. ಇಂತಹ ಪರಿಸ್ಥಿತಿ ಇನ್ನೂ ಎಷ್ಟು ದಿನ ಮುಂದುವರೆಯುತ್ತದೆ ಎಂದು ಕಾದು ನೋಡಬೇಕು. ನಾವಂತೂ ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ಎಲ್ಲಾ ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡು ಹೋರಾಟ ನಡೆಸುವುದಾಗಿ ಅಶೋಕ್ ತಿಳಿಸಿದರು.

## ನ.19ರಂದು ಮೈಸೂರಿಗೆ ಯತ್ನಾಳ್; ಹಿಂದೂ ಧರ್ಮ ರಕ್ಷಣೆ ಕುರಿತ ಕಾರ್ಯಕ್ರಮದಲ್ಲಿ ಭಾಗಿ

ಮೈಸೂರು, ನ.17– ಮೈಸೂರಿನ ಹಿಂದೂ ಜಾಗೃತಾ ವೇದಿಕೆ ವತಿಯಿಂದ ಕಲಾಮಂದಿರದಲ್ಲಿ ನ.19ರಂದು ಬೆಳಗ್ಗೆ 11ಕ್ಕೆ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಹಿಂದೂ ಧರ್ಮ ರಕ್ಷಣೆ ಕುರಿತು ಮಾತನಾಡಲಿದ್ದು, ಅಂದು ಅವರನ್ನು ಮೈಸೂರು–ಬೆಂಗಳೂರು ಹೆದ್ದಾರಿ ಟೋಲ್‌ಗೇಟ್ (ಮಣಿಪಾಲ್ ಆಸ್ಪತ್ರೆ ಜಂಕ್ಷನ್) ಬಳಿ ಅದ್ದೂರಿಯಾಗಿ ಸ್ವಾಗತಿಸಿ, ವಾಹನ ರ‍್ಯಾಲಿ ಮೂಲಕ ಕರೆತರಲಾಗುವುದು ಎಂದು ಪ್ರಕಟಣೆ ತಿಳಿಸಿದೆ



ಯತ್ನಾಳ್

## ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು,ನ.17– ಜಯಲಕ್ಷ್ಮಿಪುರಂ ವಿದ್ಯುತ್ ಮಾರ್ಗಗಳಲ್ಲಿ ಭೂಗತ ಕೇಬಲ್ ಅಳವಡಿಸುವ ಕಾರ್ಯ ನಿಮಿತ್ತ ನ.19 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಟೆಂಪಲ್‌ರಸ್ತೆ ಗೋಕುಲಂ ರಸ್ತೆ ಈಜಿಡೇ ಸುತ್ತಮುತ್ತ, ಕೆ.ಡಿರೋಡ್, ಜಯಲಕ್ಷ್ಮಿಪುರಂ, ಹಿನಕಲ್, ವಿಜಯನಗರ 1ನೇ ಹಂತ, ಯೋಗನರಸಿಂಹಸ್ವಾಮಿ ದೇವಸ್ಥಾನ ಸುತ್ತಮುತ್ತ, ವಿಜಯನಗರ 2ನೇ ಹಂತ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ

# ರೈಲ್ವೆ ಪಿಂಚಣಿದಾರರಿಗೆ ಡಿಜಿಟಲ್ ಜೀವನ ಪ್ರಮಾಣ ಪತ್ರ ವಿತರಣೆ



ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಅಭಿಯಾನದ ಅಂಗವಾಗಿ ನೈರುತ್ಯ ರೈಲ್ವೆ ಮೈಸೂರು ವಿಭಾಗದಿಂದ ಮೆಗಾ ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಶಿಬಿರ ನಡೆಯಿತು

ಮೈಸೂರು,17(ಎಂಕೆ)– ನೈರುತ್ಯ ರೈಲ್ವೆ ಮೈಸೂರು ವಿಭಾಗದ ವತಿಯಿಂದ 350ಕ್ಕೂ ಹೆಚ್ಚು ಪಿಂಚಣಿದಾರರು ಮತ್ತು ಕುಟುಂಬ ಪಿಂಚಣಿದಾರರಿಗೆ ಡಿಜಿಟಲ್ ಜೀವನ ಪ್ರಮಾಣ ಪತ್ರ ನೀಡಲಾಯಿತು.

ಮೈಸೂರಿನ ರೈಲ್ವೆ ಕಲ್ಯಾಣ ಮಂಟಪದಲ್ಲಿ ರಾಷ್ಟ್ರಮಟ್ಟದ ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಅಭಿಯಾನದ ಅಂಗವಾಗಿ ಸೋಮವಾರ ಆಯೋಜಿಸಿದ್ದ ಶಿಬಿರದಲ್ಲಿ ಪಿಂಚಣಿದಾರರಿಗೆ ಹೆಚ್ಚಿನ ಸೌಲಭ್ಯ, ಸುಲಭ ಮತ್ತು ಸರಳ ಜೀವನ ಅನುಭವ ಒದಗಿಸುವ ನಿಟ್ಟಿನಲ್ಲಿ ವಿವಿಧ ಬ್ಯಾಂಕ್ ಅಧಿಕಾರಿಗಳ ಸಮ್ಮುಖದಲ್ಲಿ ಡಿಜಿಟಲ್ ಲೈಫ್ ಸರ್ಟಿಫಿಕೇಟ್ ನೀಡಲಾಯಿತು.

ಶಿಬಿರ ಉದ್ಘಾಟಿಸಿದ ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್, 80 ವರ್ಷ ಮೇಲ್ಪಟ್ಟ ಪಿಂಚಣಿದಾರರನ್ನು ಸನ್ಮಾನಿಸಿ ಅಭಿನಂದಿಸಿದರು. ಬಳಿಕ ಮಾತನಾಡಿದ ಅವರು, ರೈಲ್ವೆ ಇಲಾಖೆಗೆ ತಮ್ಮ ದೀರ್ಘಕಾಲದ ಸೇವೆ ನೀಡಿ ಸಾರ್ಥಕ ಜೀವನ ನಡೆಸಿರುವ ಹಿರಿಯ ಪಿಂಚಣಿದಾರರನ್ನು ಗೌರವಿಸುವುದು ಇಲಾಖೆ ಕರ್ತವ್ಯವಾಗಿದೆ ಎಂದರು.

ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಅಭಿಯಾನವು ಪಿಂಚಣಿದಾರರಿಗೆ ಸಹಕಾರಿಯಾಗಿದೆ. ಪ್ರತೀ ವರ್ಷ ಪಿಂಚಣಿ ಪಡೆದು ನಿವೃತ್ತಿ ಜೀವನ ನಡೆಸಲು ಅನುಕೂಲಕರವಾಗಿದೆ. ಪಿಂಚಣಿದಾರರ ಕಲ್ಯಾಣಕ್ಕಾಗಿ ಈ ಅಭಿಯಾನ ಸಹಕಾರಿಯಾಗಿದೆ ಎಂದರು.

ನೈರುತ್ಯ ರೈಲ್ವೆ ಮೈಸೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಶಮ್ಮಾಸ್ ಹಮೀದ್, ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ವಿಷ್ಣು ಗೌಡ, ರೈಲ್ವೆ ಪಿಂಚಣಿದಾರರ ಕಲ್ಯಾಣ ಸಂಘದ ಅಧ್ಯಕ್ಷ ಪಾರ್ಥಸಾರಥಿ, ಕಾರ್ಯದರ್ಶಿ ಜಿ.ಸ್ವಾಮಿನಾಥನ್ ಮತ್ತಿತರರು ಉಪಸ್ಥಿತರಿದ್ದರು.

# ರೈಲು ಪ್ರಯಾಣದಲ್ಲಿ ಪತ್ರಕರ್ತರಿಗೆ ಶೇ.50 ರಿಯಾಯಿತಿಗೆ ಎಂಎಲ್‌ಸಿ ಶಿವಕುಮಾರ್ ಆಗ್ರಹ



ಹಿರಿಯ ಕ್ರೀಡಾ ಪತ್ರಕರ್ತ ರಾಜೇಶ್ ತಪ್ಲಿಯಾಲ್ ಅವರನ್ನು ಸನ್ಮಾನಿಸಲಾಯಿತು.

ನವದೆಹಲಿ,ನ.17(ಆರ್‌ಕೆ)–ದೇಶಾದ್ಯಂತ ಸಂಚರಿಸಲು ಪತ್ರಕರ್ತರಿಗೆ ರೈಲು ಪ್ರಯಾಣ ದರದಲ್ಲಿ ಶೇಕಡಾ 50 ರಿಯಾಯಿತಿ ಸೌಲಭ್ಯವನ್ನು ಮುಂದುವರೆಸುವಂತೆ ವಿಧಾನಪರಿಷತ್ ಸದಸ್ಯ ಕೆ.ಶಿವಕುಮಾರ್ ಒತ್ತಾಯಿಸಿದ್ದಾರೆ.

ಪ್ರೆಸ್ ಕ್ಲಬ್ ಆಫ್ ಇಂಡಿಯಾ (ಪಿಸಿಐ) ಹಾಗೂ ಮಾನ್ಯತೆ ಪಡೆದ ಪತ್ರಕರ್ತ ಸಂಘದ ಸಂಯುಕ್ತಾಶ್ರಯದಲ್ಲಿ ಭಾನುವಾರ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಈ ಹಿಂದೆ ರೈಲು ಪ್ರಯಾಣ ದರದಲ್ಲಿ ಪತ್ರಕರ್ತರಿಗೆ ಶೇಕಡಾ 50 ರಿಯಾಯಿತಿಯನ್ನು ನೀಡಲಾಗುತ್ತಿತ್ತು. ಈ ಸೌಲಭ್ಯವನ್ನು ಹಿಂಪಡೆದಿರುವುದು ಬೇಸರ ತಂದಿದೆ ಎಂದರು.

ಕರ್ನಾಟಕ ಸರ್ಕಾರವು ಪತ್ರಕರ್ತರಿಗಾಗಿ ಜಾರಿ ಮಾಡಿರುವ ಆರೋಗ್ಯ ವಿಮೆ, ಜಾಹೀರಾತು ನೀತಿಗಳು ಹಾಗೂ ಆರ್ಥಿಕ ಚೈತನ್ಯ ತುಂಬುವ ಪೂರಕ ಯೋಜನೆಗಳನ್ನು ಕೇಂದ್ರ ಸರ್ಕಾರವೂ ರಾಷ್ಟ್ರೀಯ ಮಟ್ಟದಲ್ಲಿ ಜಾರಿಗೊಳಿಸಬೇಕೆಂದು ಪ್ರತಿಪಾದಿಸಿದ ಅವರು, ಸಾಮಾಜಿಕ ಸುಧಾರಣೆಯಲ್ಲಿ ಹಾಗೂ ಸರ್ಕಾರದ ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸುವ ನಿಟ್ಟಿನಲ್ಲಿ ಪತ್ರಿಕೋದ್ಯಮವು ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು.

ಸಾಮಾಜಿಕ ನ್ಯಾಯ, ಅಸ್ಪೃಶ್ಯತೆ, ಶೋಷಿತರ ಹಕ್ಕುಗಳ ರಕ್ಷಣೆಯಲ್ಲಿ ದಣಿವರಿಯದೇ ತಮ್ಮದೇ ಸಂಪಾದಕತ್ವದ ಬಹಿಷ್ಕೃತ ಭಾರತ, ಜನತಾ ಮತ್ತು ಪ್ರಬುದ್ಧ ಭಾರತ ಎಂಬ ಪತ್ರಿಕೆಗಳ ಮೂಲಕ ಬರೆದ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರು ಅಂತರ್ಜಾತಿ ವಿವಾಹವನ್ನು ಕೂಡ ಬೆಂಬಲಿಸಿದ್ದರು. ಅಂದು ಅವರು ಎದುರಿಸಿದ ಸಮಸ್ಯೆಗಳು, ಸವಾಲುಗಳು ಇಂದಿಗೂ ಜೀವಂತವಾಗಿರುವುದು ಶೋಚನೀಯ ಸಂಗತಿ ಎಂದ ಶಿವಕುಮಾರ್, ಕೆಲ ಮಾಧ್ಯಮಗಳು, ರಾಜಕೀಯ ಪಕ್ಷಗಳು ಹಾಗೂ ಕೆಲ ಸಂಸ್ಥೆಗಳ ಪರವಾಗಿ ಕೆಲಸ ಮಾಡುತ್ತಿರುವುದು ವಿಷಾದನೀಯ ಎಂದರು.

ಇದೇ ಸಂದರ್ಭದಲ್ಲಿ ಹಿರಿಯ ಪತ್ರಕರ್ತರಾದ ವಿ.ಎಸ್. ಚತುರ್ವೇದಿ, ಗೌತಮ್ ಹಾಗೂ ಸುನೀಲ್ ಪರಾಶರ್ ಮತ್ತಿತರರು ಉಪಸ್ಥಿತರಿದ್ದರು. ಇದೇ ವೇಳೆ ಹಿರಿಯ ಕ್ರೀಡಾ ಪತ್ರಕರ್ತ ರಾಜೇಶ್ ತಪ್ಲಿಯಾಲ್ ಅವರನ್ನು ಸನ್ಮಾನಿಸಲಾಯಿತು.


## ಅರ್‌ಕ್ಯಾಂಗಲ್ ಸುಟಾಂಗ್ ರಾಜ್ಯಮಟ್ಟಕ್ಕೆ ಆಯ್ಕೆ



ಮೈಸೂರು,ನ.17–ಮೈಸೂರಿನ ಕೃಷ್ಣಮೂರ್ತಿಪುರಂನ ಶಾರದಾವಿಲಾಸ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿ ಮೇಘಾಲಯ ಮೂಲದ ಅರ್‌ಕ್ಯಾಂಗಲ್ ಸುಟಾಂಗ್ ಜಿಲ್ಲಾ ಹಾಗೂ ವಲಯ ಮಟ್ಟದಲ್ಲಿ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನವನ್ನು ಗಳಿಸುವುದರ ಮೂಲಕ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.


ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ 100 ಮೀ. ಓಟದ ಸ್ಪರ್ಧೆ ಹಾಗೂ ಉದ್ದಜಿಗಿತದ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ. ನವೆಂಬರ್ 20, 21ರಂದು ಹಾಸನದಲ್ಲಿ ನಡೆಯಲಿರುವ ರಾಜ್ಯಮಟ್ಟದ ಸ್ಪರ್ಧೆಗಳಿಗೆ ಆಯ್ಕೆಯಾಗಿದ್ದಾರೆ. ಚಾಮರಾಜನಗರದಲ್ಲಿ ನಡೆದ ಮೈಸೂರು ವಿಭಾಗ ಮಟ್ಟದಲ್ಲಿ ನಡೆದ ವಿವಿಧ ಕ್ರೀಡೆಗಳಾದ 100ಮೀ., 200ಮೀ., 400ಮೀ., 600ಮೀ. ಓಟದ ಸ್ಪರ್ಧೆ ಹಾಗೂ ಗುಂಡು ಎಸೆತ, ಚಕ್ರ ಎಸೆತ, ಉದ್ದ ಜಿಗಿತ ಸ್ಪರ್ಧೆಗಳಲ್ಲೂ ಭಾಗವಹಿಸಿದ್ದಾರೆ. ಮೂಲತಃ ಮೇಘಾಲಯದಿಂದ ಓದಲು ಬಂದಿರುವ ಅರ್‌ಕ್ಯಾಂಗಲ್ ಸುಟಾಂಗ್ ಕ್ರೀಡಾ ಪ್ರತಿಭೆ.

## ಮಾಸ್ಟರ್ಸ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಜಗದೀಶ್‌ಗೆ ಬಹುಮಾನ



ಮೈಸೂರು, ನ.17–ಇತ್ತೀಚೆಗೆ ಬೆಂಗಳೂರಿನ ವಿಜಯನಗರ ಕಾರ್ಪೊರೇಷನ್ ಈಜುಕೊಳದಲ್ಲಿ (ಆರ್‌ಪಿಸಿ ಲೇಔಟ್) ನಡೆದ 26ನೇ ಮಾಸ್ಟರ್ಸ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಈಜು ತರಬೇತುದಾರ ವಿ. ಜಗದೀಶ್ ಭಾಗವಹಿಸಿ 2 ಬೆಳ್ಳಿ ಮತ್ತು 1 ಕಂಚಿನ ಪದಕ ಪಡೆದುಕೊಂಡಿದ್ದಾರೆ. 200 ಮೀಟರ್ಸ್ ಇಂಡಿವ್ಯುಶಯಲ್ ಮೆಡಲ್–ಬೆಳ್ಳಿ ಪದಕ, 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್ –ಬೆಳ್ಳಿ ಪದಕ, 100 ಮೀಟರ್ಸ್ ಬಟರ್ ಫ್ಲೈ–ಕಂಚಿನ ಪದಕವನ್ನು ಪಡೆದುಕೊಂಡಿದ್ದಾರೆ.

## ತೆಂಗು ಕೃಷಿಯಲ್ಲಿ ಸಮಸ್ಯೆಗಳಿಗೆ ವೈಜ್ಞಾನಿಕ ಪರಿಹಾರಗಳು ಕುರಿತು ರೈತರಿಗೆ ತರಬೇತಿ



ಮೈಸೂರು, ನ. 17– ಮೈಸೂರಿನ ಇಲವಾಲದ ಹ'ತ್ತಿ'ರ'ದ' ಯಲಚಹಳ್ಳಿಯಲ್ಲಿರುವ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ನ.25ರಂದು ಬೆಳಗ್ಗೆ 10 ಗಂಟೆಗೆ ತೆಂಗು ಕೃಷಿಯಲ್ಲಿ ಪ್ರಚಲಿತ ಸಮಸ್ಯೆಗಳಿಗೆ ವೈಜ್ಞಾನಿಕ ಪರಿಹಾರಗಳು ಕುರಿತಾದ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ನುರಿತ ವಿಜ್ಞಾನಿಗಳು ಹಾಗೂ ಅನುಭವಿ ಕೃಷಿಕರು, ಗುಣಮಟ್ಟದ ಉತ್ಪಾದನೆ, ಸಂಸ್ಕರಣೆ ಮತ್ತು ಮಾರಾಟದಲ್ಲಿ ಎದುರಿಸುವ ಹಲವಾರು ಸಮಸ್ಯೆ ಮತ್ತು ಅದರ ಪರಿಹಾರದ ಕುರಿತು ರೈತರಿಗೆ ಮಾಹಿತಿ ನೀಡಲಿದ್ದಾರೆ. ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ ಮತ್ತು ಇತರೆ ಜಿಲ್ಲೆಗಳಿಗೆ ಸೇರಿದ ಆಸಕ್ತ ರೈತರು ಕಾರ್ಯಕ್ರಮದಲ್ಲಿ ಭಾಗ ವಹಿಸಲು ಪೂರ್ವ ನೋಂದಣಿ ಮಾಡಿಸಬಹುದಾಗಿದೆ. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ನೋಂದಣಿ ಗಾಗಿ 8147959226 / 9341997297 ಈ ದೂರವಾಣಿಗಳನ್ನು ಸಂಪರ್ಕಿಸಿ.

## ಉಚಿತ ಯೋಗಾಸನ, ಪ್ರಾಣಾಯಾಮ ತರಬೇತಿ ಶಿಬಿರ

ಮೈಸೂರು,ನ.17–ಕನ್ನಡ ರಾಜ್ಯೋತ್ಸವದ ಪ್ರಯುಕ್ತ ದೈಹಿಕ ಹಾಗೂ ಮಾನಸಿಕ ವ್ಯಾದಿಗಳ ನಿರ್ಮೂಲನೆಗಾಗಿ ಉಚಿತ ಯೋಗಾಸನ, ಪ್ರಾಣಾಯಾಮ, ಧ್ಯಾನ, ಮುದ್ರೆ, ಯೋಗ ಥೆರಪಿ, ವೇಯ್ಟ್ ಲಾಸ್ ಯೋಗ ಹಾಗೂ ಚಿಂತನ ಮಂಥನ ಯೋಗ ಶಿಬಿರವನ್ನು ಯೋಗ ತಜ್ಞೆ ವಿ.ಸುಮನಾ ಅವರಿಂದ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 7 ಹಾಗೂ ಸಂಜೆ 5ರಿಂದ 6ರವರೆಗೆ ನ.21ರಿಂದ 30ರವರೆಗೆ ಪರಮಹಂಸ ಯೋಗ ಮಹಾವಿದ್ಯಾಲಯ, ಇ ಅಂಡ್ ಎಫ್ ಬ್ಲಾಕ್, ರಾಮಕೃಷ್ಣನಗರ ಇಲ್ಲಿ ಏರ್ಪಡಿಸಲಾಗಿದೆ. ಆಸಕ್ತಿಯುಳ್ಳವರು ನ.20ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 70901 57993 ಅಥವಾ 9008727172 ಸಂಪರ್ಕಿಸಬಹುದು.

## ಕೃಷಿ ರಸಪ್ರಶ್ನೆ ಕಾರ್ಯಕ್ರಮ

ಮೈಸೂರು, ನ. 17– ಜನವರಿ 15ರಿಂದ 20ರವರೆಗೆ ನಡೆಯಲಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ಮಹಿಳೆಯರಿಗೆ ಕೃಷಿ ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗಿದೆ. ಇದಕ್ಕೆ ಪೂರ್ವಭಾವಿ ಲಿಖಿತ ಕೃಷಿ ರಸಪ್ರಶ್ನೆ ಪರೀಕ್ಷೆಯನ್ನು ಜನವರಿ 6ರಂದು ಬೆಳಗ್ಗೆ 11 ಗಂಟೆಗೆ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ 10 ಅಭ್ಯರ್ಥಿಗಳನ್ನು ಅಂತಿಮವಾಗಿ ಜಾತ್ರಾ ಸಮಯದಲ್ಲಿ ನಡೆಯುವ ಕೃಷಿ ರಸಪ್ರಶ್ನೆ ಕಾರ್ಯಕ್ರಮಕ್ಕೆ ಆಯ್ಕೆ ಮಾಡಿ ವಿಜೇತರಿಗೆ ಬಹುಮಾನ ನೀಡಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಸಹ ಸಂಚಾಲಕರಾದ ಶ್ರೀಮತಿ ಹೆಚ್. ದಿವ್ಯಾ, ಮೊ. 8762840430 ಸಂಪರ್ಕಿಸಿ ಜ. 2 ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ.

# ರಾಜ್ಯದ ಐದು ಕಡೆಗಳಲ್ಲಿ ವಿಶ್ವ ದರ್ಜೆಯ ಏರೋಸ್ಪೇಸ್, ಡಿಫೆನ್ಸ್ ಪಾರ್ಕ್ ಸ್ಥಾಪನೆ



**ಬೆಂಗಳೂರು:** ರಾಜ್ಯದ ಐದು ಕಡೆಗಳಲ್ಲಿ ವಿಶ್ವ ದರ್ಜೆ ಗುಣಮಟ್ಟದ ಏರೋಸ್ಪೇಸ್ ಹಾಗೂ ರಕ್ಷಣಾ ಪಾರ್ಕ್‌ಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಮುಂದಾಗಿದೆ.

ಈ ಮೂಲಕ ಅತ್ಯಾಧುನಿಕ ತಂತ್ರಜ್ಞಾನ ಸಾಮರ್ಥ್ಯವನ್ನು ಬಲಪಡಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಕೌಶಲಯುಕ್ತ ಪ್ರತಿಭಾವಂತರಿಗೆ ಹೊಸ ಅವಕಾಶ ಸೃಷ್ಟಿಸುವ ಮೂಲಕ ಏರೋಸ್ಪೇಸ್ ಹಾಗೂ ರಕ್ಷಣಾ ಸರಕುಗಳ ಉತ್ಪಾದನೆಯಲ್ಲಿ ರಾಜ್ಯದ ಮುಂಚೂಣಿಯನ್ನು ಬಲಪಡಿಸುವ ಗುರಿ ಹೊಂದಲಾಗಿದೆ ಎಂದಿದ್ದಾರೆ. ಬೆಂಗಳೂರು, ಮೈಸೂರು, ಬೆಳಗಾವಿ, ತುಮಕೂರು, ಚಾಮರಾಜನಗರದಲ್ಲಿ ಇವುಗಳನ್ನು ಅಭಿವೃದ್ಧಿಪಡಿಸುತ್ತಿದ್ದು, 60,000 ಕೌಶಲ್ಯಯುಕ್ತ ಉದ್ಯೋಗದ ಸೃಷ್ಟಿ ಹಾಗೂ ರೂ.45,000 ಕೋಟಿ ಹೂಡಿಕೆಯನ್ನು ಆಕರ್ಷಿಸುವ ಉದ್ದೇಶ ಹೊಂದಿರುವುದಾಗಿ ತಿಳಿಸಿದ್ದಾರೆ.



2025–26ನೇ ಸಾಲಿನ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ನಡೆದ ಮೈಸೂರು ಜಿಲ್ಲಾ ಮಟ್ಟದ ಬಾಲಕರ ವಿಭಾಗದ ಅಥ್ಲೆಟಿಕ್ಸ್‌ನಲ್ಲಿ ವಿಜಯನಗರದ ಸದ್ವಿದ್ಯಾ ಶಾಲೆಯ ಕ್ರೀಡಾಪಟು ಸುಖಾಂತ್ ಗೌಡ 100 ಮೀಟರ್‌ನಲ್ಲಿ ಪ್ರಥಮ ಬಹುಮಾನ ಗಳಿಸಿ, ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ಈತನನ್ನು ಶಾಲೆಯ ಆಡಳಿತ ಮಂಡಳಿ, ಶಾಲೆಯ ಶಿಕ್ಷಕ ವೃಂದ ಅಭಿನಂದಿಸಿದೆ.

## ತೊಣಚಿಕೊಪ್ಪಲಲ್ಲಿ ಅನ್ನಸಂತರ್ಪಣೆ...



ತೊಣಚಿಕೊಪ್ಪಲು–ಜನತಾನಗರದ ಶ್ರೀ ನಾಗಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಡೇ ಕಾರ್ತಿಕ ಸೋಮವಾರದ ನಿಮಿತ್ತ ವಿಶೇಷ ಪೂಜೆ ಮತ್ತು ಅನ್ನಸಂತರ್ಪಣೆ ನಡೆಯಿತು. ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅನ್ನದಾನಕ್ಕೆ ಚಾಲನೆ ನೀಡಿದರು. ಈ ವೇಳೆ ನಿಕಟಪೂರ್ವ ಪಾಲಿಕೆ ಸದಸ್ಯರಾದ ಜೆ.ಗೋಪಿ, ಮಹೇಶ್, ಕೆಂಚಪ್ಪ, ಹರೀಶ್ ಮೊಗಣ್ಣಾ, ಮನೋಹರ್ ಮತ್ತಿತರರು ಉಪಸ್ಥಿತರಿದ್ದರು.

# ಸಮಯೋಚಿತ ಪರೀಕ್ಷೆ, ಜೀವನಶೈಲಿ ಬದಲಾವಣೆ ಜೊತೆಗೆ ಜಾಗೃತಿಯಿಂದ ಮಧುಮೇಹ ಯಶಸ್ವಿ ನಿರ್ವಹಣೆ



ಮಣಿಪಾಲ್ ಆಸ್ಪತ್ರೆಯಲ್ಲಿ ಮಧುಮೇಹದ ಸಮಗ್ರ ನಿರ್ವಹಣೆ ಕುರಿತು ಆರೋಗ್ಯ ಸಭೆ ಆಯೋಜಿಸಲಾಗಿತ್ತು.

ಮೈಸೂರು,ನ.17–ಇತ್ತೀಚಿನ ವರ್ಷಗಳಲ್ಲಿ ಭಾರತೀಯರಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿರುವ ಆರೋಗ್ಯ ಸಮಸ್ಯೆ ಮಧುಮೇಹ (ಸಕ್ಕರೆ ಖಾಯಿಲೆ). ಬರೋಬ್ಬರಿ 101 ಮಿಲಿಯನ್ ಭಾರತೀಯರು ಮಧುಮೇಹದಿಂದ ಬಳಲುತ್ತಿದ್ದಾರೆ. ಇದಕ್ಕೆ ಕಾರಣ ಬದಲಾಗುತ್ತಿರುವ ಜೀವನಶೈಲಿ, ಆಹಾರದಲ್ಲಿ ಗುಣ ಮಟ್ಟದ ಕೊರತೆ ಹಾಗೂ ಹೆಚ್ಚುತ್ತಿರುವ ಮಾನಸಿಕ ಒತ್ತಡ. ಈ ಕಾರಣದಿಂದಾಗಿ ಮಧುಮೇಹಕ್ಕೆ ಪೂರಕವಾದ ಕಿಡ್ನಿ ವೈಫಲ್ಯ, ನರರೋಗ ಹಾಗೂ ಹೃದ್ರೋಗ ಕೂಡ ಹೆಚ್ಚಾಗುತ್ತಿದೆ. ಈ ಕಾರಣದಿಂದಾಗಿ ಮಧುಮೇಹದ ಬಗ್ಗೆ ಜನರಲ್ಲಿ ಕೂಡಲೇ ಅರಿವು ಮೂಡಿಸುವ ಅವಶ್ಯಕತೆ ಇದೆ.

ಈ ನಿಟ್ಟಿನಲ್ಲಿ ನಗರದ ಮಣಿಪಾಲ್ ಆಸ್ಪತ್ರೆಯಲ್ಲಿ ಮಧುಮೇಹದ ಸಮಗ್ರ ನಿರ್ವಹಣೆ ಕುರಿತು ಮಣಿಪಾಲ್ ಆರೋಗ್ಯ ಸಭೆ ಆಯೋಜಿಸಲಾಗಿತ್ತು.

ಇಂಟರ್ನಲ್ ಮೆಡಿಸಿನ್‌ನ ಹಿರಿಯ ಕನ್ಸಲ್ಟೆಂಟ್ ಡಾ. ಸತೀಶ್‌ಕುಮಾರ್ ಎಂ.ಜಿ., ಇಂಟರ್‌ವೆನ್ಷನಲ್ ಕಾರ್ಡಿಯಾಲಜಿಯ ಹಿರಿಯ ಕನ್ಸಲ್ಟೆಂಟ್ ಡಾ.ಕೇಶವ ಮೂರ್ತಿ ಸಿ.ಬಿ., ಫಿಸಿಯೋಥೆರಪಿಸ್ಟ್ ಇಸ್ಮಾಯಿಲ್, ಆಹಾರ ಮತ್ತು ಪೌಷ್ಟಿಕಾಂಶ ತಜ್ಞೆ ಆಯೆಶಾ ಶರೀಫ್ ಈ ಆರೋಗ್ಯ ಸಭೆಯಲ್ಲಿ ಭಾಗಿಯಾಗಿ ಮಧುಮೇಹ ಕಂಡುಹಿಡಿಯುವಿಕೆ, ಒತ್ತಡ ನಿರ್ವಹಣೆ ಹಾಗೂ ಜೀವನಶೈಲಿ ಬದಲಾವಣೆಯ ಬಗ್ಗೆ ಚರ್ಚಿಸಿದರು. ಕಾರ್ಯಕ್ರಮದಲ್ಲಿ ಮಧುಮೇಹ ನಿರ್ವಹಣೆಗೆ ಪೂರಕವಾದ ವಿವಿಧ ಆಹಾರ ಪದಾರ್ಥಗಳನ್ನು ತೋರಿಸಿ ಅದರ ಬಗ್ಗೆ ವಿವರಿಸಲಾಯಿತು. ಸುಮಾರು 102 ಜನರು ಕಾರ್ಯಕ್ರಮದಲ್ಲಿ ಭಾಗಿಯಾಗಿ ಸಕ್ಕರೆ ಖಾಯಿಲೆ ತಡೆಗಟ್ಟುವಿಕೆ ಹಾಗೂ ನಿರ್ವಹಣೆಯ ಬಗ್ಗೆ ಚರ್ಚಿಸಿದರು.

ಮಣಿಪಾಲ್ ಆಸ್ಪತ್ರೆಯ ಇಂಟರ್ನಲ್ ಮೆಡಿಸಿನ್‌ನ ಹಿರಿಯ ಕನ್ಸಲ್ಟೆಂಟ್ ಡಾ.ಸತೀಶ್‌ಕುಮಾರ್ ಎಂ.ಜಿ., ಮಧುಮೇಹ ಎಂದರೆ ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚಾಗುವುದು ಮಾತ್ರವಲ್ಲ. ಇದು ದೇಹದ ಮೆಟಾಬಾಲಿಕ್ ಸಮಸ್ಯೆ, ರೋಗನಿರೋಧಕ ಶಕ್ತಿಯ ಕೊರತೆ. ಇದನ್ನು ನಿಯಂತ್ರಿಸಲು ಜೀವನಶೈಲಿಯ ಬದಲಾವಣೆ, ಸೂಕ್ತ ಚಿಕಿತ್ಸೆ ಹಾಗೂ ಉತ್ತಮ ಅಭ್ಯಾಸಗಳ ಸತತ ನಿರ್ವಹಣೆ ಅಗತ್ಯ. ಮಧುಮೇಹವನ್ನು ಆದಷ್ಟು ಬೇಗ ಪತ್ತೆಹಚ್ಚಿದಷ್ಟೂ ರೋಗ ನಿರ್ವಹಣೆ ಸುಲಭವಾಗುತ್ತದೆ ಎಂದರು.

ಮಣಿಪಾಲ್ ಆಸ್ಪತ್ರೆಯ ಇಂಟರ್‌ವೆನ್ಷನಲ್ ಕಾರ್ಡಿಯಾಲಜಿ ಹಿರಿಯ ಕನ್ಸಲ್ಟೆಂಟ್ ಡಾ.ಕೇಶವಮೂರ್ತಿ ಸಿ.ಬಿ., ದೀರ್ಘಕಾಲದ ಮಧುಮೇಹದಿಂದ ರಕ್ತನಾಳಗಳಿಗೆ ಹಾನಿಯುಂಟಾಗಬಹುದು. ನಿಯಮಿತ ಹೃದಯ ರಕ್ತನಾಳ ತಪಾಸಣೆ ಮಾಡಿಸಿಕೊಳ್ಳುವ ಉಪಯೋಗಗಳ ಬಗ್ಗೆ ಮಾತನಾಡಿದ ಅವರು, ಮಧುಮೇಹದ ಜೊತೆ ಜೀವನ ಮಾಡುತ್ತಿದ್ದೇವೆ ಎಂದರೆ ಹೃದ್ರೋಗ ತಗುಲುವ ಅಪಾಯದೊಂದಿಗೆ ಜೀವನ ಮಾಡುತ್ತಿದ್ದೇವೆ ಎಂದರ್ಥ. ಆದ್ದರಿಂದ ಆಗಿಂದಾಗ್ಗೆ ರಕ್ತದೊತ್ತಡ, ಕೊಲೆಸ್ಟ್ರಾಲ್, ಹೃದಯದ ಸಮಗ್ರ ಆರೋಗ್ಯವನ್ನು ಪರೀಕ್ಷಿಸಿಕೊಳ್ಳುತ್ತಿರಬೇಕು. ಮಧುಮೇಹದ ಕಾರಣದಿಂದ ಬರುವ ಎಷ್ಟೋ ಹೃದ್ರೋಗಗಳು ತೀವ್ರತೆ ಹೆಚ್ಚಾದ ನಂತರವೇ ಅರಿವಿಗೆ ಬರುತ್ತದೆ. ಆದ್ದರಿಂದ ಸಮಯಕ್ಕೆ ಸರಿಯಾಗಿ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸಿಕೊಂಡು ಉತ್ತಮ ಜೀವನಶೈಲಿ ರೂಢಿಸಿಕೊಳ್ಳುವುದು ಮುಖ್ಯ ಎಂದರು.

ದೈಹಿಕ ಚಟುವಟಿಕೆಯ ಪ್ರಾಮುಖ್ಯತೆ ಬಗ್ಗೆ ಮಾತನಾಡಿದ ಮಣಿಪಾಲ್ ಆಸ್ಪತ್ರೆಫಿಸಿಯೋಥೆರಪಿ ವಿಭಾಗದ ಫಿಸಿಯೋಥೆರಪಿಸ್ಟ್ ಇಸ್ಮಾಯಿಲ್, ಮಧು ಮೇಹಕ್ಕೆ ಪಿಸಿಯೋಥೆರಪಿಯ ಪಾತ್ರ ಏನೆಂಬುದನ್ನು ತಿಳಿಸಿದರಲ್ಲದೆ, ಪಿಸಿಯೋಥೆರಪಿಯಿಂದ ಇನ್ಸುಲಿನ್ ಸೆನ್ಸಿಟಿವಿಟಿ ಹಾಗೂ ಮೆಟಬಾಲಿಸಂ ಹೆಚ್ಚಾಗುತ್ತದೆ ಎಂದು ಹೇಳಿದರು.

## ಬಸವಾದಿ ಶರಣರು, ಅನುಭವ ಮಂಟಪದ ಚಿಂತನೆ ಇಂಗ್ಲಿಷ್‌ನಲ್ಲಿ ರೂಪಿಸಲು 5 ಕೋಟಿ ದೇಣಿಗೆ

### ಭಾರೀ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಘೋಷಣೆ



ರಮಣಶ್ರೀ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮ.

ಬೆಂಗಳೂರು, ನ.17(ಕೆಎಂಶಿ)– ಬಸವಾದಿ ಶರಣರ ಹಾಗೂ ಅನುಭವ ಮಂಟಪದ ಚಿಂತನೆಗಳ ಕುರಿತು ಜಾಗತಿಕ ಮಟ್ಟದಲ್ಲಿ ಇಂಗ್ಲೀಷ್‌ನಲ್ಲಿ ಪುಸ್ತಕಗಳು ಹೊರತರಲು 5 ಕೋಟಿ ರೂ. ದೇಣಿಗೆ ನೀಡುವುದಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ರಮಣಶ್ರೀ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉತ್ತರ ಕರ್ನಾಟಕದ ಸಾಧಕರಾದ ಫ.ಗು.ಹಳಕಟ್ಟಿ, ಸರ್ ಸಿದ್ದಪ್ಪ ಕಂಬಳಿ, ಲಿಂಗರಾಜ ದೇಸಾಯಿ, ಬಂತನಾಳದ ಪೂಜ್ಯರು, ಸಿದ್ದೇಶ್ವರ ಸ್ವಾಮೀಜಿ ಮುಂತಾದವರ ಬಗ್ಗೆ ಪುಸ್ತಕಗಳು ಪ್ರಕಟವಾಗಬೇಕು ಎಂದರು.

ಬೆಂಗಳೂರು ಭಾಗದ ಸರ್ ಪುಟ್ಟಣ್ಣ ಚೆಟ್ಟಿ ಬಗ್ಗೆಯೂ ತಿಳಿಯಬೇಕು, ಈ ಮೂಲಕ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂಬ ಭೇದ ಅಳಿಯಬೇಕು. ಫ.ಗು.ಹಳಕಟ್ಟಿ ಇಲ್ಲದಿದ್ದರೆ ಬಸವ ಧರ್ಮವಾಗಲಿ, ವಚನ ಸಾಹಿತ್ಯವಾಗಲಿ, ನೂರಾರು ವಚನಕಾರರಾಗಲೀ ಬೆಳಕಿಗೆ ಬರುತ್ತಿರಲಿಲ್ಲ, ಬಂತನಾಳ ಪೂಜ್ಯರ ಜೊತೆ ವಚನ ಯುಗದ ಕುರಿತು ಬೆಳಕು ಚೆಲ್ಲುವ ಮಹಾನ್ ಕೆಲಸ ಮಾಡಿದ್ದಾರೆ, ಹಳಕಟ್ಟಿ ಆರಂಭಿಸಿದ್ದ 'ಶಿವಾನುಭವ' ಪತ್ರಿಕೆ ಸದ್ಯದಲ್ಲೇ ಪುನಾರಂಭ ಆಗಲಿದೆ. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಹಳಕಟ್ಟಿ ಸಂಶೋಧನಾ ಕೇಂದ್ರವು ವಚನ ಸಾಹಿತ್ಯ, ದಾಸ ಸಾಹಿತ್ಯ, ಆದಿಲ್ ಶಾಹಿ ಸಾಹಿತ್ಯ ಮತ್ತು ಎಂ.ಎಂ.ಕಲ್ಬುರ್ಗಿ ಸಾಹಿತ್ಯ ಸಂಪುಟ ಹೊರತಂದಿದ್ದು, ನಮ್ಮ ಯುವಜನತೆ ಓದಬೇಕು ಎಂದರು. ಲೇಖಕ ಎಸ್.ಷಡಕ್ಷರಿ ಅವರ ಕ್ಷಣ ಹೊತ್ತು ಆಣಿಮುತ್ತು–ಭಾಗ 15 ಪುಸಕ್ತ ಬಿಡುಗಡೆ ಮಾಡಲಾಯಿತು.

# ದೇಶ - ವಿದೇಶ

## 3.37 ಕೋಟಿ ವಂಚಿಸಿದ ಸೈಬರ್ ವಂಚಕರ ಜಾಲ ಪತ್ತೆ



**ನೈನಿತಾಲ್:** ಸಾರ್ವಜನಿಕರ ಮೊಬೈಲ್ ಫೋನ್ ಹ್ಯಾಕ್ ಮಾಡಿ ಬ್ಯಾಂಕ್ ಖಾತೆಗಳಿಂದ ಹಣ ವರ್ಗಾಯಿಸಿಕೊಂಡು ವಂಚಿಸುತ್ತಿದ್ದ ಜಾಲವನ್ನು ಭೇದಿಸಿರುವ ಉತ್ತರಾಖಂಡ ಪೊಲೀಸರು ನಾಲ್ವರು ಅಂತರ ರಾಜ್ಯ ಸೈಬರ್ ವಂಚಕರನ್ನು ಬಂಧಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳ ಮೂಲಕ ಲಿಂಕ್ ಕಳುಹಿಸಿ ಫೋನ್ ಹ್ಯಾಕ್ ಮಾಡುತ್ತಿದ್ದರು. ವಂಚಕರು ತಮ್ಮ ಗುರುತು ಮರೆಮಾಡಲು ಮ್ಯೂಲ್ ಖಾತೆಗಳ ಮೂಲಕ ವಹಿವಾಟು ನಡೆಸುತ್ತಿದ್ದರು. ಪ್ರಾಥಮಿಕ ತನಿಖೆಯಲ್ಲಿ 3.37 ಕೋಟಿ ಹಣ ಅನುಮಾನಾಸ್ಪದವಾಗಿ ವರ್ಗಾವಣೆಯಾಗಿರುವುದು ಪತ್ತೆಯಾಗಿದೆ. ಶನಿವಾರ ಪೊಲೀಸರು ತಪಾಸಣೆ ನಡೆಸುತ್ತಿದ್ದ ವೇಳೆ ಕಾರೊಂದನ್ನು ವಶಪಡಿಸಿಕೊಂಡಿದ್ದರು. ಕಾರಿನಲ್ಲಿ ನಾಲ್ವರು ಅನುಮಾನಾಸ್ಪದ ವ್ಯಕ್ತಿಗಳು ಪತ್ತೆಯಾಗಿದ್ದು, ಸಂಪೂರ್ಣ ಶೋಧ ನಡೆಸಿದಾಗ 11 ಫೋನ್‌ಗಳು, 9 ಸಿಮ್ ಕಾರ್ಡ್‌ಗಳು, ಹಲವಾರು ಆಧಾರ್, ಪ್ಯಾನ್ ಕಾರ್ಡ್‌ಗಳು, ಚೆಕ್ ಬುಕ್‌ಗಳು, ಕ್ಯೂಆರ್ ಕೋಡ್‌ಗಳು, ಹಲವಾರು ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.


## ಕಾಂಗೋದಲ್ಲಿ ಭೀಕರ ಗಣಿ ಅವಘಡ, ಭೂ ಕುಸಿತದಲ್ಲಿ ಕನಿಷ್ಠ 80 ಮಂದಿ ಸಾವು!



**ಕಿನ್ಶಾಸಾ:** ರಿಪಬ್ಲಿಕ್ ಆಫ್ ಕಾಂಗೋದಲ್ಲಿ ಭೀಕರ ಗಣಿ ದುರಂತ ಸಂಭವಿಸಿದ್ದು, ಭೂಕುಸಿತ ಸಂಭವಿಸಿ ಕನಿಷ್ಠ 80 ಮಂದಿ ಸಾವಿಗೀಡಾಗಿದ್ದಾರೆ ಎಂದು ಹೇಳಲಾಗಿದೆ.


ನವೆಂಬರ್ 15ರ ಶನಿವಾರ ಕಾಂಗೋಲುವಾಲಾಬಾ ಪ್ರಾಂತ್ಯದ ತಾಮ್ರ ಮತ್ತು ಕೋಬಾಲ್ಟ್ ಗಣಿಯಲ್ಲಿ ಸೇತುವೆ ಕುಸಿದು ಕನಿಷ್ಠ 80 ಜನರು ಸಾವನ್ನಪ್ಪಿದ್ದಾರೆ. ಸ್ಥಳೀಯ ವರದಿಗಳ ಪ್ರಕಾರ, ಆಗ್ನೇಯ ಕಾಂಗೋದಲ್ಲಿರುವ ತಾಮ್ರ ಮತ್ತು ಕೋಬಾಲ್ಟ್ ಗಣಿಯಲ್ಲಿನ ಸೇತುವೆ ಜನದಟ್ಟಣೆಯಿಂದಾಗಿ ಕುಸಿದು ಬಿದ್ದಿದೆ. ಘಟನೆಯಲ್ಲಿ ಹಲವಾರು ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ದುರಂತದ ವಿಡಿಯೋವನ್ನು ಸ್ಥಳೀಯರು ತಮ್ಮ ಮೊಬೈಲ್ ನಲ್ಲಿ ಸೆರೆಹಿಡಿದಿದ್ದು, ಈ ವಿಡಿಯೋ ವ್ಯಾಪಕ ವೈರಲ್ ಆಗುತ್ತಿದೆ.

## ಸ್ಟಾಲಿನ್ ಸೇರಿ ಸ್ಟಾರ್ ನಟ, ನಟಿಯರಿಗೆ ಬಾಂಬ್ ಬೆದರಿಕೆ




**ಚೆನ್ನೈ:** ತಮಿಳುನಾಡು ಸಿಎಂ ಎಂ.ಕೆ.ಸ್ಟಾಲಿನ್ ಸೇರಿದಂತೆ ಸ್ಟಾರ್ ನಟ, ನಟಿಯರ ನಿವಾಸವನ್ನು ಸ್ಫೋಟಿಸುವುದಾಗಿ ಬಾಂಬ್ ಬೆದರಿಕೆ ಬಂದಿದೆ. ಭಾನುವಾರ ರಾತ್ರಿ ಪೊಲೀಸ್ ಮಹಾನಿರ್ದೇಶಕರ ಕಚೇರಿಗೆ ಇಮೇಲ್ ಬಂದಿದ್ದು, ತಮಿಳುನಾಡು ಸಿಎಂ ಎಂ.ಕೆ.ಸ್ಟಾಲಿನ್ ಅವರ ಕಚೇರಿ ಹಾಗೂ ನಟರಾದ ಅಜಿತ್‌ಕುಮಾರ್, ಅರವಿಂದ್ ಸ್ವಾಮಿ, ನಟಿ ಖುಷ್ಬು ಅವರ ನಿವಾಸದಲ್ಲಿ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಬಂದಿದೆ. ಕೂಡಲೇ ನಾಲ್ಕು ಸ್ಥಳದಲ್ಲಿ ಪರಿಶೀಲನೆ ನಡೆಸಲಾಗಿದೆ. ಇದಕ್ಕೂ ಮುನ್ನ ಚೆನ್ನೈನ ಇಂಜಂಬಕ್ಕಂನಲ್ಲಿರುವ ಅಜಿತ್‌ಕುಮಾರ್ ಅವರ ನಿವಾಸಕ್ಕೆ ಅಪರಿಚಿತ ವ್ಯಕ್ತಿಯಿಂದ ಬಾಂಬ್ ಬೆದರಿಕೆ ಬಂದಿತ್ತು. ಈ ವೇಳೆ ಅಧಿಕಾರಿಗಳು ಸುತ್ತಮುತ್ತಲಿನ ಪ್ರದೇಶದಲ್ಲಿ ತಪಾಸಣೆ ನಡೆಸಿದರು. ಆದರೆ ಯಾವುದೇ ಸ್ಫೋಟಕಗಳು ಕಂಡುಬಂದಿಲ್ಲ. ನಟ ಅರುಣ್ ವಿಜಯ್ ಅವರ ಎಕ್ಕಾಟ್ಟುತಂಗಲ್ ನಿವಾಸದಲ್ಲಿ ಬಾಂಬ್ ಇರಿಸಲಾಗಿದೆ ಎಂದು ಮೇಲ್ ಬಂದಿತ್ತು. ಬಳಿಕ ಪೊಲೀಸರು ಬಾಂಬ್ ನಿಷ್ಕ್ರಿಯ ದಳದಿಂದ ಶೋಧ ಕಾರ್ಯ ನಡೆಸಿದಾಗ ಯಾವುದೇ ಸ್ಫೋಟಕ ವಸ್ತು ಪತ್ತೆಯಾಗಿಲ್ಲ.

## ರಷ್ಯಾ ಜತೆ ವ್ಯವಹರಿಸುವ ದೇಶಕ್ಕೆ ಕಠಿಣ ನಿರ್ಬಂಧ



**ವಾಷಿಂಗ್ಟನ್:** ರಷ್ಯಾದೊಂದಿಗೆ ವ್ಯವಹರಿಸುವ ಯಾವುದೇ ರಾಷ್ಟ್ರಕ್ಕೆ ಕಠಿಣ ನಿರ್ಬಂಧ ವಿಧಿಸಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಟ್ರಂಪ್ ಆಡಳಿತ ಮತ್ತು ರಿಪಬ್ಲಿಕನ್ ಸದಸ್ಯರು ರಷ್ಯಾವನ್ನು ಗುರಿಯಾಗಿಸಿಕೊಂಡು ಕಠಿಣ ಕಾನೂನನ್ನು ಜಾರಿಗೆ ತರಲು ಮುಂದಾಗಿದ್ದಾರೆ.

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಮೇಲೆ ಒತ್ತಡ ಹೇರುವ ಗುರಿ ಹೊಂದಿರುವ ಕ್ರಮಗಳನ್ನು ಕಾಂಗ್ರೆಸ್ ಅಂಗೀಕರಿಸುವ ಸಮಯ ಬಂದಿದೆಯೇ? ಎಂಬ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಟ್ರಂಪ್, ಅವರು ಹಾಗೆ ಮಾಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಅದು ನನಗೂ ಸರಿ ಎನಿಸಿದೆ. ಅವರು ಕಾನೂನನ್ನು ಅಂಗೀಕರಿಸಲಿದ್ದು, ರಿಪಬ್ಲಿಕನ್ನರು ಅದನ್ನು ಜಾರಿಗೆ ತರಲಿದ್ದಾರೆ. ರಷ್ಯಾದೊಂದಿಗೆ ವ್ಯವಹಾರ ಮಾಡುವ ಯಾವುದೇ ದೇಶದ ಮೇಲೆ ಕಠಿಣ ನಿರ್ಬಂಧಗಳನ್ನು ವಿಧಿಸಲಿದ್ದಾರೆ. ಆ ಪಟ್ಟಿಗೆ ಇರಾನ್ ಅನ್ನೂ ಸೇರಿಸುವಂತೆ ಸೂಚಿಸಿದ್ದೇನೆ ಎಂದರು. ಟ್ರಂಪ್ ಆಡಳಿತವು ಭಾರತದ ಮೇಲೆ ಶೇ.50ರಷ್ಟು ಸುಂಕ ವಿಧಿಸಿದೆ. ಇದು ವಿಶ್ವದಲ್ಲೇ ಅತಿ ಹೆಚ್ಚು. ಇದರಲ್ಲಿ ರಷ್ಯಾದಿಂದ ಇಂಧನ ಖರೀದಿಸುತ್ತಿರುವುದಕ್ಕೆ ವಿಧಿಸಿರುವ ಶೇ.25ರಷ್ಟು ಸುಂಕವೂ ಸೇರಿದೆ.

## ಪಾಕಿಸ್ತಾನಕ್ಕೆ ನುಸುಳಲು ಯತ್ನಿಸುತ್ತಿದ್ದ ಯುವಕನ ಬಂಧಿಸಿದ ಬಿಎಸ್‌ಎಫ್



**ಜೈಪುರ:** ರಾಜಸ್ಥಾನದ ಜೈಸಲ್ಮೇರ್ ಜಿಲ್ಲೆಯಲ್ಲಿರುವ ಅಂತರರಾಷ್ಟ್ರೀಯ ಗಡಿ ದಾಟಿ ಪಾಕಿಸ್ತಾನಕ್ಕೆ ನುಸಳಲು ಯತ್ನಿಸಿದ ಆರೋಪದ ಮೇಲೆ 21 ವರ್ಷದ ಯುವಕನನ್ನು ಬಿಎಸ್‌ಎಫ್ ಬಂಧಿಸಿದೆ. ಬಂಧಿತನನ್ನು ಪಂಕಜ್ ಕಶ್ಯಪ್ ಎಂದು ಗುರುತಿಸಲಾಗಿದೆ. ಈತ ಉತ್ತರ ಪ್ರದೇಶದ ಶಹಜಹಾನ್‌ಪುರದ ನಿವಾಸಿ. ಭಾನುವಾರ ಗಡಿಯ ಸಮೀಪ ಅನುಮಾನಾಸ್ಪದವಾಗಿ ಚಲಿಸುತ್ತಿರುವುದು ಕಂಡುಬಂದ ಹಿನ್ನೆಲೆ ಆತನನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಪ್ರಾಥಮಿಕ ವಿಚಾರಣೆಯ ಸಮಯದಲ್ಲಿ, ಕಶ್ಯಪ್ ಪಾಕಿಸ್ತಾನಕ್ಕೆ ಹೋಗಲು ಬಯಸುತ್ತಿರುವುದಾಗಿ ಬಹಿರಂಗಪಡಿಸಿದ್ದಾನೆ. ನಂತರ ಬಿಎಸ್‌ಎಫ್ ಆತನನ್ನು ಮುಂದಿನ ಕಾನೂನು ಕ್ರಮಕ್ಕಾಗಿ ಪೊಲೀಸರಿಗೆ ಹಸ್ತಾಂತರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಶ್ಯಪ್ ಯಾವ ಕಾರಣಕ್ಕೆ ಪಾಕಿಸ್ತಾನಕ್ಕೆ ತೆರಳಲು ಬಯಸಿದ್ದ ಮತ್ತು ಆತನ ಹಿನ್ನೆಲೆ ಏನು ಎಂದು ತಿಳಿಯಲು ಜಂಟಿ ವಿಚಾರಣಾ ಕೇಂದ್ರದಲ್ಲಿ ಭದ್ರತಾ ಸಂಸ್ಥೆಗಳು ವಿಚಾರಣೆಗೆ ಒಳಪಡಿಸಲಿವೆ ಎಂದು ತಿಳಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 18 ನವೆಂಬರ್ 2025

## ಕಾಂಗ್ರೆಸ್ ಸರ್ಕಾರದ ವೈಫಲ್ಯ ಖಂಡಿಸಿ

# ಸೋಮವಾರಪೇಟೆಯಲ್ಲಿ ಬಿಜೆಪಿ ಪ್ರತಿಭಟನೆ

ಮಡಿಕೇರಿ, ನ.17–ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ ಖಂಡಿಸಿ ಸೋಮವಾರ ಪೇಟೆ ಮಂಡಲ ಬಿಜೆಪಿ ಪಟ್ಟಣದಲ್ಲಿ ಸೋಮವಾರ ಪ್ರತಿಭಟನೆ ನಡೆಸಿತು.

ಪಟ್ಟಣದ ವಿವೇಕಾನಂದ ಸರ್ಕಲ್‌ನಿಂದ ಹೊರಟ ಪ್ರತಿಭಟನಾ ಮೆರವಣಿಗೆಯಲ್ಲಿ ಸರಕಾರದ ವಿರುದ್ದ ಘೋಷಣೆಗಳನ್ನು ಮೊಳಗಿಸಿ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಜೇಸಿ ವೇದಿಕೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾಜಿ ಉಪ ಮುಖ್ಯಮಂತ್ರಿ ಡಾ. ಅಶ್ವಥ್ ನಾರಾಯಣ ಮಾತನಾಡಿ, ಸತ್ಯವನ್ನೇ ಮರೆ ಮಾಚುವ ಅಪಪ್ರಚಾರ ಮತ್ತು ಜನರಿಗೆ ನೀಡಿದ ಸುಳ್ಳು ಭರವಸೆಗಳ ಆಧಾರದ ಮೇಲೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿದಿದೆ. ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಸಾಮಾನ್ಯ ಜನರ ಮೇಲೆಯೇ ಹೆಚ್ಚಿನ ತೆರಿಗೆ ಹಾಕಲಾಗಿದೆ. ಸರ್ಕಾರದ ಅನೇಕ ನಾಯಕರು ಭ್ರಷ್ಟಾಚಾರದಲ್ಲಿ ತೊಡಗಿರುವುದು ರಾಜ್ಯಕ್ಕೆ ದುಷ್ಪರಿಣಾಮ ತಂದಿದೆ ಎಂದು ವಾಗ್ದಾಳಿ ನಡೆಸಿದರು.



ಸಾರ್ವಜನಿಕ ಸಭೆಯಲ್ಲಿ ಡಾ. ಅಶ್ವಥ್ ನಾರಾಯಣ ಮಾತನಾಡಿದರು.

ಮಾಜಿ ಸಚಿವ ಅಪ್ಪಚ್ಚು ರಂಜನ್ ಮಾತನಾಡಿ ರೈತರು, ಕಾಫಿ ಬೆಳೆಗಾರರು, ಹಾಗೂ ಕೊಡಗಿನ ರಸ್ತೆಗಳ ದುಸ್ಥಿತಿ ಉಲ್ಲೇಖಿಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ರಸ್ತೆಗಳ ಗುಂಡಿ ಮುಚ್ಚಲು ಸಾಧ್ಯವಾಗದವರು ಅಭಿವೃದ್ಧಿಯ ಹೆಸರು ಹೇಳುತ್ತಿರುವುದು ಜನರ ಕಣ್ಣಿಗೆ ಮಣ್ಣೆರೆಚುವ ಕೆಲಸವಾಗಿದೆ ಎಂದು ಟೀಕಿಸಿದರು.

ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಮಾತನಾಡಿ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೊಳಿಸಿದ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ವಿಶ್ವವಿದ್ಯಾನಿಲಯಗಳನ್ನು ಕಾಂಗ್ರೆಸ್ ತಮ್ಮ ಅವಧಿಯಲ್ಲಿ ಮಾಡಿದ್ದು ಎಂದು ಹೇಳಿಕೊಳ್ಳುತ್ತಿದೆ ಎಂದು ವ್ಯಂಗ್ಯವಾಡಿದರು. ಭಾರತೀಶ್, ಮಂಡಲ ಬಿಜೆಪಿ ಅಧ್ಯಕ್ಷ ಗೌತಮ್ ಗೌಡ, ಯುವಮೋರ್ಚಾ ಜಿಲ್ಲಾಧ್ಯಕ್ಷ ಮಹೇಶ್ ತಿಮ್ಮಯ್ಯ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

**ಬಿಜೆಪಿಗೆ ಸೇರ್ಪಡೆ:** ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಹರಪಳ್ಳಿ ರವೀಂದ್ರ ತಮ್ಮ ಬೆಂಬಲಿಗರ ಜೊತೆ ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿ ಸೇರ್ಪಡೆಯಾದರು. ಯಾವುದೇ ಷರತ್ತಿಲ್ಲದೆ ಬಿಜೆಪಿ ಪಕ್ಷ ಸೇರಿದ್ದೇನೆ ಕಾಂಗ್ರೆಸ್‌ನಲ್ಲಿ ಸಮಾಜ ಸೇವೆಗೂ, ಶ್ರಮಕ್ಕೂ ಗೌರವ ಇಲ್ಲ ಎಂದು ಆರೋಪಿಸಿದ ರವೀಂದ್ರ ಮುಂದಿನ ದಿನಗಳಲ್ಲಿ ಸಾವಿರಾರು ಅಭಿಮಾನಿಗಳನ್ನು ಬಿಜೆಪಿ ಕಡೆಗೆ ಕರೆತರುವುದಾಗಿ ಘೋಷಿಸಿದರು.

ವೇದಿಕೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ಜಿ. ಮೇದಪ್ಪ, ಬಿಜೆಪಿ ಮಾಜಿ ಅಧ್ಯಕ್ಷ ಬಿ.ಬಿ. ಭಾರತೀಶ್, ಮಂಡಲ ಬಿಜೆಪಿ ಅಧ್ಯಕ್ಷ ಗೌತಮ್ ಗೌಡ, ಯುವಮೋರ್ಚಾ ಜಿಲ್ಲಾಧ್ಯಕ್ಷ ಮಹೇಶ್ ತಿಮ್ಮಯ್ಯ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ದ್ವಿಚಕ್ರ ವಾಹನ ತರಬೇತಿ ಕಾರ್ಯಗಾರಕ್ಕೆ ಚಾಲನೆ



ದ್ವಿಚಕ್ರ ವಾಹನ ತರಬೇತಿ ಕಾರ್ಯಗಾರಕ್ಕೆ ಕೃಷಿಕರಾದ ಸ್ಮಿತಾ ಸಂತೋಷ್ ಹಸಿರು ಭಾವುಟ ತೋರಿಸಿ ಚಾಲನೆ ನೀಡಿದರು.

ವಿರಾಜಪೇಟೆ, ನ.17–ಕೊಡಗು ಹಿಂದು ಮಲಯಾಳಿ ಮಹಿಳಾ ಅಸೋಸಿಯೇಷನ್ ಇಲ್ಲಿನ ಗೌರಿಕೆರೆ ಬಳಿಯಲ್ಲಿ ಸಂಘದ ಮಹಿಳಾ ಸದಸ್ಯರಿಗೆ ದ್ವಿಚಕ್ರ ವಾಹನ ತರಬೇತಿ ಕಾರ್ಯಗಾರಕ್ಕೆ ಸಂಘದ ಹಿರಿಯ ಸದಸ್ಯೆ ಕೃಷಿಕರಾದ ಸ್ಮಿತಾ ಸಂತೋಷ್ ಹಸಿರು ಭಾವುಟ ತೋರಿಸಿ ಚಾಲನೆ ನೀಡಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಅಸೋಸಿಯೇಷನ್ ಅಧ್ಯಕ್ಷೆ ಶೀಬಾ ಪೃಥ್ವಿನಾತ್ ಮಾತನಾಡಿ, ಮಹಿಳೆಯರಿಗೆ ವ್ಯವಹಾರ ನಡೆಸಲು ಅನುಕೂಲವಾಗಲೆಂದು ದ್ವಿಚಕ್ರ ವಾಹನ ತರಬೇತಿ ನೀಡಲಾಗುತ್ತಿದೆ ಸಂಘದ ಎಲ್ಲಾ ಮಹಿಳಾ ಸದಸ್ಯರು ಇದರ ಸದುಪಯೋಗ ಪಡಿಸಿಕೊಳ್ಳುವಂತಾಗಬೇಕು ಎಂದು ಹೇಳಿದರು.

ಸಂಘದ ಸದಸ್ಯರ ಏಳಿಗೆಗಾಗಿ ಮಹಿಳೆಯರು ಸ್ವ ಉದ್ಯೋಗ ನಡೆಸಿ ಅಭಿವೃದ್ಧಿ ಹೊಂದಲು ಸಹಾಯ, ಅನಾರೋಗ್ಯದಲ್ಲಿದ್ದವರಿಗೆ ಧನಸಹಾಯ, ಮನೆಯಲ್ಲಿ ಕುಳಿತು ಸಮಯ ವ್ಯರ್ಥ ಮಾಡದಂತೆ ಉಚಿತ ಯೋಗಾಭ್ಯಾಸ ಮತ್ತಿತರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ದ್ವಿಚಕ್ರ ವಾಹನ ತರಬೇತಿ ಕಾರ್ಯಗಾರದಲ್ಲಿ ಮಲಯಾಳಿ ಅಸೋಸಿಯೇಷನ್ ಗೌ. ಅಧ್ಯಕ್ಷೆ ರೀತಾ ರಾಜನ್, ಉಪಾಧ್ಯಕ್ಷೆ ಚೈತ್ರ ಮೋಹನ್, ಕಾರ್ಯದರ್ಶಿ ಪುಷ್ಪಲತಾ, ಸಹಕಾರ್ಯದರ್ಶಿ ಪದ್ಮ, ಸದಸ್ಯರಾದ ಪೂಜಾ ಸಜೇಶನ್, ರಾಖಿ ಸಜೀವನ್, ಶ್ರೀದೇವಿ, ಸಂತೋಷ್, ಶೀಲಾ ಸುನೀಲ್, ಶಾಂತ ಚಂದ್ರನ್, ಗ್ರಾ.ಪಂ. ಸದಸ್ಯೆ ಸಿ.ಹೆಚ್.ಸುನೀತ ಹರಿದಾಸ, ಪುರಸಭೆ ಮಾಜಿ ಸದಸ್ಯ ಸಿ.ಕೆ.ಪೃಥ್ವಿನಾಥ್, ಹಾಗೂ ಸದಸ್ಯರು ಉಪಸ್ಥಿತರಿದ್ದರು.

## ಆಕ್ಸ್‌ಫರ್ಡ್ ಶಾಲೆಯಲ್ಲಿ ಪ್ರತಿಭಾ ಕಾರಂಜಿ



ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಪ್ರತಿಭಾ ಕಾರಂಜಿ ಕಲೋತ್ಸವವನ್ನು ಮಕ್ಕಳು ಶಿಕ್ಷಕರು ಉದ್ಘಾಟಿಸಿದರು

**ನಾಪೋಕ್ಲು:** ಇಲ್ಲಿಗೆ ಸಮೀಪದ ಕುಂಜಿಲ ಗ್ರಾಮದ ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಕ್ಕಬೆ ಕ್ಲಸ್ಟರ್‌ನ ಪ್ರತಿಭಾ ಕಾರಂಜಿ ಕಲೋತ್ಸವ ಕಾರ್ಯಕ್ರಮ ಜರುಗಿತು.

ಅಧ್ಯಕ್ಷತೆ ವಹಿಸಿದ್ದ ಶಾಲಾ ವ್ಯವಸ್ಥಾಪಕ ಶಾಹಿದ್ ಅಲಿ ಮಾತನಾಡಿ ಪ್ರತಿಭಾ ಕಾರಂಜಿ ಕೇವಲ ಸ್ಪರ್ಧೆಯಲ್ಲ, ಅದು ಮಕ್ಕಳ ಆತ್ಮ ವಿಶ್ವಾಸವನ್ನು ಹೆಚ್ಚಿಸುವ, ಅವರಲ್ಲಿ ಅಡಗಿರುವ ಕಲೆಯನ್ನು ಹೊರತರುವ, ಸಾಂಸ್ಕೃತಿಕ ಬೇರುಗಳನ್ನು ಗಟ್ಟಿಗೊಳಿಸುವ ಮಹಾಯಜ್ಞ ಎಂದರು.

ಜಿಲ್ಲಾ ಯೋಜನ ಸಮನ್ವಯಾಧಿಕಾರಿ ಸೌಮ್ಯ ಪೊನ್ನಪ್ಪ, ಮಕ್ಕಳಿಗೆ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಲು ತಿಳಿಸಿ, ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಲು ಶುಭ ಹಾರೈಸಿದರು. ವಿಷಯ ಪರಿವೀಕ್ಷಕಿ ಬಿಂದು ಮಾತನಾಡಿ ಎಲ್ಲರೂ ವೇದಿಕೆಗೆ ಬಂದು ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಧೈರ್ಯವೇ ದೊಡ್ಡ ಗೆಲುವು ಎಂಬುದನ್ನು ಅರಿತು, ವಿದ್ಯಾರ್ಥಿಗಳು ಕಲೋತ್ಸವದಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿದ್ದು ಉಳಿದ ವಿದ್ಯಾರ್ಥಿಗಳಿಗೆ ಇದು ಮಾರ್ಗದರ್ಶಕವಾಗಿದೆ ಎಂದರು.

ಕಾರ್ಯಕ್ರಮದ ಸಹ ಸಂಯೋಜಕಿ ಎಸ್‌ಬಿ ಶರ್ಮಿಳಾ ಆರ್.ಪಿ ಮಂಜುಳಾ ಚಿತ್ತಾಪುರ, ಸಂಪನ್ಮೂಲ ವ್ಯಕ್ತಿ ಕಲ್ಪನಾ, ಕ್ಲಸ್ಟರ್‌ನ ಎಲ್ಲಾ ಶಾಲಾ ಶಿಕ್ಷಕರೂ, ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಶಾಲೆಯ ಮುಖ್ಯೋಪಾಧ್ಯಾಯಿನಿ ಶಬ್ರೀನ್ ಫಾತಿಮಾ ಎಲ್ಲರನ್ನೂ ಸ್ವಾಗತಿಸಿ ಗಗನ್ ನಿರೂಪಿಸಿ, ಶಹೀರ್ ಉಸ್ತಾದರು ವಂದಿಸಿದರು.

## ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಅಂಜಿಗೇರಿ ನಾಡ್ ತಂಡ ಚಾಂಪಿಯನ್

ಮಡಿಕೇರಿ, ನ.17– ಕೊಡವ ಸ್ಪೋರ್ಟ್ಸ್ ಅಸೋಸಿಯೇಷನ್ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 4ನೇ ವರ್ಷದ ಐಪಿಎಲ್ ಮಾದರಿಯ ಕೊಡವ ಪ್ರೀಮಿಯರ್ ಲೀಗ್ ಸೀಸನ್–4 ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಅಂಜಿಗೇರಿ ನಾಡ್ ತಂಡ ಚಾಂಪಿಯನ್ ಆಗಿ ಹೊರ ಹೊಮ್ಮಿದೆ. ಕೊಡವ ನೈಟ್ಸ್ ತಂಡ ದ್ವಿತೀಯ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡರೆ, ಎಂಟಿಬಿ ರಾಯಲ್ಸ್ ತೃತೀಯ ಮತ್ತು ಕೊಡವ ಬಂಬಂಗ ತಂಡ 4ನೇ ಸ್ಥಾನ ಪಡೆದವು.

ಚಾಂಪಿಯನ್ ತಂಡಕ್ಕೆ ರೂ.2 ಲಕ್ಷ, ದ್ವಿತೀಯ ಸ್ಥಾನ ಪಡೆದ ತಂಡಕ್ಕೆ ರೂ.1 ಲಕ್ಷ, ತೃತೀಯ ರೂ.50 ಸಾವಿರ, 4ನೇ ಸ್ಥಾನ ಪಡೆದ ತಂಡಕ್ಕೆ 25 ಸಾವಿರ ನಗದು ಬಹುಮಾನ ಮತ್ತು ಆಕರ್ಷಕ ಟ್ರೋಫಿ ಸೇರಿದಂತೆ ವೈಯಕ್ತಿಕ ಬಹುಮಾನ ನೀಡಲಾಯಿತು.

ಬಹುಮಾನ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಶಾಸಕ ಡಾ.ಮಂತರ್ ಗೌಡ, ಕ್ರೀಡಾ ಜಿಲ್ಲೆ ಕೊಡಗಿನಲ್ಲಿ ಈ ರೀತಿಯ ಕ್ರೀಡಾಕೂಟಗಳು ಹೆಚ್ಚು ಹೆಚ್ಚಾಗಿ ನಡೆಯುತ್ತಿರುವುದು ಶ್ಲಾಘನೀಯ. ಜಿಲ್ಲೆಯ ಕ್ರೀಡಾ ಕ್ಷೇತ್ರದ ಬೆಳವಣಿಗೆಗೆ ರಾಜ್ಯ ಸರಕಾರ ಅಗತ್ಯ ಸಹಕಾರ ಮತ್ತು ಪ್ರೋತ್ಸಾಹ ನೀಡುತ್ತಿದೆ ಎಂದರು.



ಚಾಂಪಿಯನ್ ಆಗಿ ಹೊರ ಹೊಮ್ಮಿದ ಅಂಜಿಗೇರಿ ನಾಡ್ ತಂಡ

ಕೊಡವ ಸ್ಪೋರ್ಟ್ಸ್ ಅಸೋಸಿಯೇಷನ್‌ನ ಅಧ್ಯಕ್ಷ ಕುಟ್ಟಂಡ ಕುಟ್ಟಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಸಿಗ್ಮ ನೆಟ್‌ವರ್ಕ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಅವರೆ ಮಾದುಂಡ ಶರಣ್ ಪೂಣಚ್ಚ ಕೊಡವ ನಟಿ ಕಾಣತಂಡ ಬಿನ್ ಜಗದೀಶ್, ಪಶ್ಚಿಮಘಟ್ಟ ಕಾರ್ಯಪಡೆಯ ಮಾಜಿ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ, ಬೆಳೆಗಾರ ಅಜ್ಜಿಕುಟ್ಟೀರ ಸಜನ್ ಚಂಗಪ್ಪ, ಕ್ರೀಡಾಪಟು ಮುಕೊಂಡ ಈಶ್ವರ, ಕೊಡವ ಸ್ಪೋರ್ಟ್ಸ್ ಅಸೋಸಿಯೇಷನ್‌ನ ಉಪಾಧ್ಯಕ್ಷ ಚಕ್ಕೇರ ಕಾರ್ಯಪ್ಪ, ಕಾರ್ಯದರ್ಶಿ ಮುಕ್ಕಾಟಿರ ದೀಪಕ್, ನಿರ್ದೇಶಕರಾದ ರಂಜನ್ ಕಾರ್ಯಪ್ಪ, ಸಂಗಮ್ ಅಯ್ಯಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಅಕ್ರಮ ಗೋಮಾಂಸ ಮಾರಾಟಕ್ಕೆ ಯತ್ನ: ಇಬ್ಬರ ಬಂಧನ

ವಿರಾಜಪೇಟೆ, ನ.17– ರಾಜಾರೋಷವಾಗಿ ನಗರದಲ್ಲಿ ಗೋಮಾಂಸವನ್ನು ಮಾರಾಟಕ್ಕೆ ಯತ್ನಿಸುತ್ತಿದ್ದ ಇಬ್ಬರಿಗೆ ಪೊಲೀಸರು ಹೆಡೆಮುರಿ ಕಟ್ಟಿದ ಘಟನೆ ನಗರದ ಸುಣ್ಣದಬೀದಿಯಲ್ಲಿ ನಡೆದಿದೆ.

ಇಲ್ಲಿನ ವಿಜಯ ನಗರದ ನಿವಾಸಿ ಎಂ.ಎಂ ಮುಸ್ತಾಫ(42), ಎಂ.ಎಸ್. ತನ್ವೀರ್ (41) ಗೋಮಾಂಸ ಮಾರಾಟಕ್ಕೆ ಯತ್ನಿಸಿ ಬಂಧನಕ್ಕೊಳಗಾದವರಾಗಿದ್ದಾರೆ. ಅಕ್ರಮವಾಗಿ ಗೋಮಾಂಸ ಮಾರಾಟಕ್ಕೆ ಯತ್ನಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಪಡೆದ ಪೊಲೀಸರು ನಗರದ ಸುಣ್ಣದ ಬೀದಿ ತಿರುವಿನಲ್ಲಿ ಪೊಲೀಸರು ದಾಳಿ ನಡೆಸಿ 94 ಕೆ.ಜಿ. ಗೋಮಾಂಸ, ಸಾಗಾಟಕ್ಕೆ ಬಳಸಿದ್ದ ಬಿಳಿ ಮಾರುತಿ ವ್ಯಾನ್(ಕೆಎ–12, ಎಂ–9770) ಪೊಲೀಸರು ವಶಪಡಿಸಿಕೊಂಡರು.

ವಿರಾಜಪೇಟೆ ಉಪ ವಿಭಾಗದ ಪ್ರಭಾರ ಪೊಲೀಸ್ ಉಪ ಅಧೀಕ್ಷಕ ಪಿ.ಚಂದ್ರಶೇಖರ್ ನಿರ್ದೇಶನದ ಮೇರೆಗೆ ವಿರಾಜಪೇಟೆ ವೃತ್ತ ನೀರಿಕ್ಷಕ ಪಿ.ಅನೂಪ್ ಮಾದಪ್ಪರ ಮಾರ್ಗದರ್ಶನದಲ್ಲಿ ನಗರ ಠಾಣೆಯ ಪಿ.ಎಸ್.ಐ. ಹೆಚ್.ಎಸ್. ಪ್ರಮೋದ್, ಮತ್ತು ಅಪರಾಧ ವಿಭಾಗದ ಪಿ.ಎಸ್.ಐ.ಟಿ.ಎಂ. ಕಾವೇರಪ್ಪ ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.



## ಅಪ್ಪಣ್ಣ ನಿಧನ

ನಾಪೋಕ್ಲು, ನ.17– ಇಲ್ಲಿಗೆ ಸಮೀಪದ ಕುಂಜಿಲ ಕಕಬ್ಬೆ ಗ್ರಾಮದ ನಿವಾಸಿ ಕಲಿಯಂಡ ಅಪ್ಪಣ್ಣ (87) ನಿನ್ನೆ ನಿಧನರಾದರು. ಮೃತರ ಅಂತ್ಯಕ್ರಿಯೆಯು ಸೋಮವಾರ ಕಲಿಯಂಡ ಕುಟುಂಬದ ರುದ್ರಭೂಮಿಯಲ್ಲಿ ನೆರವೇರಿತು.



ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಬಂಧು ಮಿತ್ರರನ್ನು ಅಗಲಿದ್ದಾರೆ.

## ನ.21 ರಂದು ಜಿಲ್ಲಾ ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆ

**ಮಡಿಕೇರಿ:** 2025–26ನೇ ಸಾಲಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ(20 ಅಂಶಗಳ ಕಾರ್ಯಕ್ರಮ ಸೇರಿದಂತೆ) ಜಿಲ್ಲಾ ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯು ನ.21 ರಂದು ಬೆಳಗ್ಗೆ 10.30 ಗಂಟೆಗೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಭೋಸರಾಜು ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿ.ಪಂ ಸಿಇಓ ಆನಂದ್ ಪ್ರಕಾಶ್ ಮೀನಾ ಅವರು ತಿಳಿಸಿದ್ದಾರೆ.

## ಆದಿವಾಸಿ ಬೇಡಿಕೆಗಳ ಈಡೇರಿಕೆಗೆ ಮನವಿ



ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ಜಿಲ್ಲಾ ಘಟಕ ವಿಪಕ್ಷನಾಯಕ ಆರ್.ಅಶೋಕ್, ಕೇಂದ್ರ ಮಾಜಿ ಸಚಿವೆ ಭಾರತಿಪ್ರವೀಣ್ ಪವಾರ್ ಅವರಿಗೆ ಮನವಿ ಸಲ್ಲಿಸಿತು

ಚಾಮರಾಜನಗರ, ನ.17– ಆದಿವಾಸಿಗಳ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ಜಿಲ್ಲಾ ಘಟಕ ವಿಪಕ್ಷನಾಯಕ ಆರ್.ಅಶೋಕ್, ಕೇಂದ್ರ ಮಾಜಿ ಸಚಿವೆ ಭಾರತಿಪ್ರವೀಣ್ ಪವಾರ್ ಅವರಿಗೆ ಮನವಿ ಸಲ್ಲಿಸಿದರು.

ಬಿಜೆಪಿ ವತಿಯಿಂದ ನಡೆದ ಜನಜಾತೀಯ ಗೌರವ ದಿವಸ ಭಗವಾನ್ ಬಿರ್ಸಾಮುಂಡಾ ಅವರ 150ನೇ ಜಯಂತಿ ಕಾರ್ಯಕ್ರಮಕ್ಕೆ ಆಗಮಿಸಿದ ವಿಪಕ್ಷನಾಯಕ ಆರ್.ಅಶೋಕ್, ಕೇಂದ್ರ ಮಾಜಿ ಸಚಿವೆ ಭಾರತಿಪ್ರವೀಣ್ ಪವಾರ್ ಅವರಿಗೆ ಪರಿಷತ್ ಜಿಲ್ಲಾಧ್ಯಕ್ಷ ಸುರೇಶ್, ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಮನವಿ ಸಲ್ಲಿಸಿದರು.

ಆದಿವಾಸಿಗಳ ಅಭಿವೃದ್ಧಿಗೋಸ್ಕರ ತಾವು ಎಚ್‌ಡಿ ಕೋಟೆಯ ಕೆರೆ ಅಡಿಯಲ್ಲಿ ಆದಿವಾಸಿ ಅಭಿವೃದ್ಧಿ ನಿಗಮ ಸ್ಥಾಪಿಸುವಂತೆ ಆಶ್ವಾಸನೆ ನೀಡಿದ್ದು ಇದುವರೆಗೂ ಅನುಷ್ಠಾನಗೊಳಿಸಿಲ್ಲ ತಾವು 49 ಬುಡಕಟ್ಟು ಅಭಿವೃದ್ಧಿಗೋಸ್ಕರ ಅಲೆಮಾರಿ ನಿಗಮದಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ಆದಿವಾಸಿ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಮಳೆ ಗಾಳಿಗಳಿಂದ ಅನೇಕ ಮನೆಗಳು ಕುಸಿದು ಬಿದ್ದಿವೆ.ಗುಡಿಸಲುಗಳಲ್ಲಿ ವಾಸ ಮಾಡುತ್ತಿದ್ದಾರೆ ಕಾಡು ಪ್ರಾಣಿಗಳಿಂದ ಕುಟುಂಬಗಳ ರಕ್ಷಣೆ ಮಾಡಲು ಕಷ್ಟವಾಗಿದೆ ಆದ್ದರಿಂದ ಅರಣ್ಯ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಬುಡಕಟ್ಟು ಸಮುದಾಯಗಳಿಗೆ 5 ಲಕ್ಷ ರೂ.ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಿಕೊಡಬೇಕು.

ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಮತ್ತು ಪ್ರತಿಷ್ಠಿತ ಶಾಲೆಗಳಲ್ಲಿ ಮೂಲ ಆದಿವಾಸಿಗಳಿಗೆ ಸರ್ಕಾರದ ಆದೇಶದಂತೆ ಕೊರಗ ಮತ್ತು ಜೇನು ಕುರುಬ ಅಂತಿದ್ದು ಅದಿವಾಸಿಗಳಿಗೆ ಪ್ರವೇಶ ಪರೀಕ್ಷೆರಹಿತವಾಗಿ ಮುಕ್ತವಾಗಿ ಪ್ರವೇಶ ನೀಡುತ್ತಿರುವಂತೆ ಉಳಿದ ಬುಡಕಟ್ಟುಗಳಿಗೂ ಈ ಸೌಲಭ್ಯಗಳನ್ನು ವಿಸ್ತರಿಸಬೇಕು. ಹರಿಣಿ, ಶಿಕಾರಿ, ಪಾರಿ ಆದಿವಾಸಿ ಮಕ್ಕಳ ಶಿಕ್ಷಣದ ಹಿತದೃಷ್ಟಿಯಿಂದ ವಿಜಯಪುರ, ಬಾಗಲಕೋಟೆ ಜಿಲ್ಲೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಎರಡು ಜಿಲ್ಲೆಗಳಿಗೆ ಎರಡು ಆಶ್ರಮ ಶಾಲೆಗಳನ್ನು ಕೂಡಲೇ ಮಂಜೂರು ಮಾಡಬೇಕು ಎಂದು ಪರಿಷತ್ ಜಿಲ್ಲಾಧ್ಯಕ್ಷ ಸುರೇಶ್, ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಮನವಿಯಲ್ಲಿ ಒತ್ತಾಯಿಸಿದ್ದಾರೆ.

# ನ.20, ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ

ಚಾಮರಾಜನಗರ, ನ.17–ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭ ನ.20ರಂದು ನಗರದ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸುತ್ತಿರುವುದರಿಂದ ಸಕಲ ಸಿದ್ಧತೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಅಖಿಲ ಭಾರತ ಸಹಕಾರ ಸಪ್ತಾಹ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರಿ ಧುರೀಣರು, ಸದಸ್ಯರು, ಭಾಗವಹಿಸಲಿರುವ ಹಿನ್ನೆಲೆಯಲ್ಲಿ ಯಾವುದೇ ಲೋಪ, ಕೊರತೆಗೆ ಅವಕಾಶವಾಗದಂತೆ ಅಚ್ಚುಕಟ್ಟಾಗಿ ಕಾರ್ಯಕ್ರಮ ಆಯೋಜನೆ ಮಾಡಬೇಕು ಎಂದು ಅಧಿಕಾರಿಗಳಿಗೆ ಆದೇಶಿಸಿದರು.



ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಸೋಮವಾರ ಅಧಿಕಾರಿಗಳ ಸಭೆ ನಡೆಸಿದರು

ಗಣ್ಯರು, ಸಾರ್ವಜನಿಕರು ಸೇರಿದಂತೆ ಎಲ್ಲರಿಗೂ ಸೂಕ್ತ ಆಸನಗಳ ವ್ಯವಸ್ಥೆಯಾಗಬೇಕು. ಆಕರ್ಷಕ ವೇದಿಕೆ, ಅಲಂಕಾರ, ಭದ್ರತೆ, ವಾಹನಗಳ ನಿಲುಗಡೆ, ಸ್ವಚ್ಛತೆ, ಮುಖ್ಯಮಂತ್ರಿ, ಗಣ್ಯರನ್ನು ಸ್ವಾಗತಿಸಲು ಕಲಾತಂಡಗಳ ನಿಯೋಜನೆ ಸೇರಿದಂತೆ ಪ್ರತಿಯೊಂದು ಕಾರ್ಯವನ್ನು ಜವಾಬ್ದಾರಿಯುತವಾಗಿ ಅಧಿಕಾರಿಗಳು ನಿರ್ವಹಿಸಬೇಕು ಎಂದರು.

ಸಭೆಯ ಬಳಿಕ ಸಮಾರಂಭ ನಡೆಯಲಿರುವ ಅಂಬೇಡ್ಕರ್ ಕ್ರೀಡಾಂಗಣಕ್ಕೆ ಭೇಟಿ ನೀಡಿ ಸಿದ್ದತೆಗಳನ್ನು ಪರಿಶೀಲಿಸಿದರು. ವೇದಿಕೆ, ಸಭಿಕರ ಆಸನಗಳು, ಗಣ್ಯರ ಆಗಮನದ ಮಾರ್ಗ ಇನ್ನಿತರ ವ್ಯವಸ್ಥೆಗಳನ್ನು ವ್ಯಾಪಕವಾಗಿ ವೀಕ್ಷಿಸಿ, ಅಗತ್ಯ ಸೂಚನೆಗಳನ್ನು ನೀಡಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ, ಹೆಚ್.ಎಂ. ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್. ವಿ. ಚಂದ್ರಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ರಾಜ್ಯ ಸಹಕಾರ ಸಂಘಗಳ ನಿಬಂಧಕರಾದ ಟಿ.ಹೆಚ್.ಎಂ. ಕುಮಾರ್, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಎಸ್‌ಪಿ ಡಾ. ಬಿ.ಟಿ. ಕವಿತಾ, ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ. ನಂಜುಂಡಸ್ವಾಮಿ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ಎಸ್. ನಂಜುಂಡ ಪ್ರಸಾದ್, ಚಾಮುಲ್ ನಿರ್ದೇಶಕ ಉದ್ದನೂರು ಪ್ರಸಾದ್, ಸದಾಶಿವಮೂರ್ತಿ, ಸಾಹುಲ್ ಅಹಮದ್, ನಾಗೇಂದ್ರ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ಉಪ ವಿಭಾಗಾಧಿಕಾರಿ ದಿನೇಶ್‌ಕುಮಾರ್, ಮೀನಾ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಆಡಳಿತಾಧಿಕಾರಿ ಕೆ.ಎಂ.ಆಶಾ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಆರ್.ಜೆ. ಕಾಂತರಾಜು, ಕಾರ್ಯಕ್ರಮದ ನೋಡಲ್ ಅಧಿಕಾರಿ ಹೆಚ್.ಬಾಲಶೇಖರ್, ಮೈಸೂರು ಪ್ರಾಂತ್ಯದ ಸಹಕಾರ ಸಂಘಗಳ ಜಂಟಿ ನಿರ್ದೇಶಕ ಸಿ.ಪ್ರಸಾದ್ ರೆಡ್ಡಿ, ಸಹಕಾರ ಸಂಘಗಳ ಜಿಲ್ಲಾ ಉಪನಿಬಂಧಕ ಜಿ.ಸಿ. ಜ್ಯೋತಿ ಅರಸ್, ಚಾಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ರಾಜ್‌ಕುಮಾರ್, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಸುರೇಶ್ ಇದ್ದರು.

## ಇಂದು ಗುಂಡ್ಲುಪೇಟೆ ಉಪವಿಭಾಗ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ನ.17– ಗುಂಡ್ಲುಪೇಟೆ ಉಪವಿಭಾಗ ವ್ಯಾಪ್ತಿಯಲ್ಲಿ 3ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಬೊಮ್ಮನಹಳ್ಳಿ, ಕುಂದಗೆರೆ, ಕಟ್ನವಾಡಿ, ದೇಪಾಪುರ, ಕಗ್ಗಳ, ಕೆಲಸಿಪುರ, ಲಕ್ಕೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ.1912ಗೆ ಕರೆ ಮಾಡುವಂತೆ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## ಹಿಂದೂ ಜಾಗೃತಿ ಸಮಾವೇಶಕ್ಕೆ ತಾಲೂಕಿನಿಂದ ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಭಾಗಿ

ಗುಂಡ್ಲುಪೇಟೆ, ನ.17 (ಸೋಮ್‌ಜಿ)– ಮೈಸೂರಿನಲ್ಲಿ ನ.19 ರಂದು ನಡೆಯಲಿರುವ ಹಿಂದೂ ಜಾಗೃತಿ ಸಮಾವೇಶದಲ್ಲಿ ತಾಲೂಕಿನಿಂದ 1000 ಸಂಖ್ಯೆಗೂ ಹೆಚ್ಚಿನ ಅಭಿಮಾನಿಗಳು ಭಾಗವಹಿಸಲಿದ್ದಾರೆ ಹಿಂದೂ ಜಾಗೃತಿ ಸಮಾವೇಶದ ಸಂಚಾಲಕ ಮನು ಶ್ಯಾನುಭೋಗ್ ತಿಳಿಸಿದ್ದಾರೆ.

ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಈ ಸಮಾವೇಶದಲ್ಲಿ ಭಾಗವಹಿಸುವರೆಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ.

## ಮ.ಬೆಟ್ಟದಲ್ಲಿ ಬೆಳಗಿದ ಮಹಾಜ್ಯೋತಿ



ಶ್ರೀ ಮಲೆ ಮಹದೇಶ್ವರಬೆಟ್ಟದಲ್ಲಿ ಕಡೆ ಕಾರ್ತಿಕ ಮಾಸದ ಪ್ರಯುಕ್ತ ಸೋಮವಾರ ಉತ್ಸವ ಮೂರ್ತಿಯ ಮೆರವಣಿಗೆ ನಡೆಸಲಾಯಿತು.

ಚಾಮರಾಜನಗರ/ಹನೂರು, ನ.17– ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳವಾದ ಶ್ರೀ ಮಲೆ ಮಹದೇಶ್ವರಬೆಟ್ಟದಲ್ಲಿ ಕಡೆ ಕಾರ್ತಿಕ ಮಾಸದ ಪ್ರಯುಕ್ತ ಸೋಮವಾರ ರಾತ್ರಿ ದೀಪದ ಗಿರಿ ಒಡ್ಡುವಿನಲ್ಲಿ ಮಹಾಜ್ಯೋತಿ ಬೆಳಗಿಸಲಾಯಿತು. ನಂತರ ಮಹದೇಶ್ವರ ಸ್ವಾಮಿಯ ತೆಪ್ಪೋತ್ಸವದೊಂದಿಗೆ ಜಾತ್ರೆಗೆ ತೆರೆ ಎಳೆಯಲಾಯಿತು.

ಕಾರ್ತಿಕ ಜಾತ್ರೆಯ ಅಂಗವಾಗಿ ಶನಿವಾರದಿಂದಲೇ ಬೆಟ್ಟದಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ಆರಂಭವಾಗಿದ್ದವು. ಸೋಮವಾರ ಬೆಳಗ್ಗೆ ಮಲೆಮಹದೇಶ್ವರ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ ಸ್ವಾಮಿಗೆ ವಿಶೇಷ ಪೂಜೆ ಅಭಿಷೇಕ, ಮಹಾ ಮಂಗಳಾರತಿ, ಪೂಜಾ ಕಾರ್ಯಗಳಿಗೆ ವಿಧಿ–ವಿಧಾನಗಳೊಂದಿಗೆ ಚಾಲನೆ ನೀಡಲಾಯಿತು.

**ಮಹಾಜ್ಯೋತಿ ದರ್ಶನ:** ಸೋಮವಾರ ಸಂಜೆ ದೇಗುಲದಲ್ಲಿ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಮೂರ್ತಿಯನ್ನು ವಿವಿಧ ಪುಷ್ಪಗಳಿಂದ ಸಿಂಗರಿಸಿರುವ ಬಸವ ವಾಹನದಲ್ಲಿ ಪ್ರತಿಷ್ಠಾಪಿಸಿ ಸತ್ತಿಗೆ, ಸೂರಿಪಾನಿ, ಜಾಗಟೆ ಹಾಗೂ ವಾದ್ಯಗಳದೊಂದಿಗೆ ದೇಗುಲದ ಸುತ್ತ ಪ್ರದಕ್ಷಿಣೆ ಹಾಕಿ ನೈವೇದ್ಯ ಹಾಗೂ ಮಂಗಳಾರತಿ ನಂತರ ಉತ್ಸವ ಮೂರ್ತಿಯನ್ನು ಮೆರವಣಿಗೆ ಮೂಲಕ ದೀಪದಗಿರಿ ಒಡ್ಡುಗೆ ತೆರಳಿ ಸ್ವಾಮಿಗೆ ಬಿಲ್ವಾರ್ಚನೆ, ದೀವಟಿಗೆ ಸೇವೆ ಹಾಗೂ ಧೂಪ ದೀಪದಾರತಿ ಸೇವೆ ನೆರವೇರಿಸಿ ಮಹಾಜ್ಯೋತಿ ಬೆಳಗಿಸಲಾಯಿತು.

ಲಕ್ಷಾಂತರ ಭಕ್ತರ ಮಹಾಜ್ಯೋತಿಯ ದರ್ಶನ ಪಡೆದು, ಉಘೇ... ಮಾದಪ್ಪ, ಉಘೇ... ಮಾದಪ್ಪ ಎಂಬ ಜಯ ಘೋಷ ಮೊಳಗಿಸಿದರು. ಇದೇ ಸಂದರ್ಭದಲ್ಲಿ ಮಹದೇಶ್ವರ ಸ್ವಾಮಿಯ ಭಕ್ತಿ ಗೀತೆ ಹಾಗೂ ಭಾವ ಗೀತೆಗಳನ್ನು ಹಾಡಿ ದೇವರ ಕೃಪೆಗೆ ಪಾತ್ರರಾದರು. ಮಹಾಜ್ಯೋತಿ ಉತ್ಸವದಲ್ಲಿ ಪಾಲ್ಗೊಂಡ ಭಕ್ತರು ತಮ್ಮ ಕೈಲಾದಷ್ಟು ಎಣ್ಣೆ ಎರೆದು ತಮ್ಮ ಹರಕೆ ತೀರಿಸಿದರು.

ಹರಕೆ ಹೊತ್ತ ಭಕ್ತರಿಂದ ಹುಲಿವಾಹನ ಉತ್ಸವ, ಬಸವ ವಾಹನ ಉತ್ಸವ, ಬೆಳ್ಳಿ ಕಿರಿಟ ಮತ್ತು ಬಂಗಾರದ ರಥೋತ್ಸವ ಸೇರಿದಂತೆ ವಿವಿಧ ಉತ್ಸವಗಳು ನಡೆದವು. ನಂತರ ದೊಡ್ಡ ಕೊಳದಲ್ಲಿ ವಿದ್ಯುತ್ ದೀಪಾಲಂಕಾರಗಳಿಂದ ವಿಶೇಷವಾಗಿ ಸಿಂಗರಿಸಲ್ಪಟ್ಟಿದ್ದ ಪಲ್ಲಕ್ಕಿಯಲ್ಲಿ ಮಲೆ ಮಹದೇಶ್ವರ ಉತ್ಸವ ಮೂರ್ತಿಯನ್ನಿಟ್ಟು ಮೆರವಣಿಗೆ ಮಾಡಲಾಯಿತು.

ಮುನ್ನೆಚ್ಚರಿಕೆ ಕ್ರಮವಹಿಸಿ ಪೊಲೀಸ್ ಇಲಾಖೆಯಿಂದ ಕೆಎಸ್‌ಆರ್‌ಪಿ ತುಕಡಿ, ಜಿಲ್ಲೆಯ ವಿವಿಧೆಡೆಯಿಂದ ಪೊಲೀಸ್ ಅಧಿಕಾರಿಗಳು ಹಾಗೂ ಹೋಂ ಗಾರ್ಡ್ಸ್‌ಗಳನ್ನು ನಿಯೋಜಿಸಲಾಗಿತ್ತು. ಭಕ್ತರಿಗೆ ಅಲ್ಲಲ್ಲಿ ಕುಡಿಯುವ ನೀರು, ಶೌಚಗೃಹದ ವ್ಯವಸ್ಥೆ ಮಾಡಲಾಗಿತ್ತು. ಜೊತೆಗೆ ಭಕ್ತರಿಗೆ ಪ್ರಸಾದವನ್ನಾಗಿ ನೀಡುವ ಸಲುವಾಗಿ ಸುಮಾರು ನಾಲ್ಕರಿಂದ ಐದು ಲಕ್ಷ ಲಡ್ಡು ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

## ಸರಳ ಸಾಮೂಹಿಕ ವಿವಾಹ ಇಂದು ಅವಶ್ಯಕ



ವಧೂ–ವರರ ಸಮಾವೇಶಕ್ಕೆ ಶಿವಕುಮಾರಸ್ವಾಮಿ ಚಾಲನೆ ನೀಡಿದರು.

ಚಾಮರಾಜನಗರ, ನ.17– ಜಮೀನು, ನಿವೇಶನ ಮಾರಿ ದುಂದುವೆಚ್ಚ ಮಾಡಿ ಮದುವೆ ಮಾಡುವ ಬದಲು, ಸರಳ ಸಾಮೂಹಿಕ ವಿವಾಹ ಮಾಡುವುದು ಇಂದು ಅವಶ್ಯಕವಾಗಿದೆ ಎಂದು ಜೆಎಸ್‌ಎಸ್ ಸಾಮೂಹಿಕ ವಿವಾಹ ವೇದಿಕೆ ಸಂಚಾಲಕ ಉಡಿಗಾಲ ಕುಮಾರಸ್ವಾಮಿ ಸಲಹೆ ನೀಡಿದ್ದಾರೆ.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಪ್ರಥಮ ಭಾರಿಗೆ ಜೆಎಸ್‌ಎಸ್ ವಿವಾಹ ವೇದಿಕೆಯಿಂದ ಆಯೋಜನೆ ಮಾಡಿದ್ದ ವಧೂವರರ ಸಮಾವೇಶದಲ್ಲಿ ಮಾತನಾಡಿದ ಅವರು, ದುಂದುವೆಚ್ಚದ ಮದುವೆಗಳಿಗೆ ಕಡಿವಾಣ ಹಾಕಬೇಕು. ಜಮೀನು ಮಾರಿ ಮಗಳ ಮದುವೆ ಮಾಡುವುದು ಸರಿಯಲ್ಲ. ಹೆಣ್ಣು ಗಂಡಿನ ಕಡೆಯವರು ಸಮಾಲೋಚಿಸಿ ಸರಳ ವಿವಾಹಗಳಿಗೆ ಆದ್ಯತೆ ನೀಡಬೇಕು ಎಂದು ಕುಮಾರಸ್ವಾಮಿ ಸಲಹೆ ನೀಡಿದರು.

ನಗರದ ಜೆಎಸ್‌ಎಸ್ ಸೆಮಿನಾರ್ ಹಾಲ್‌ನಲ್ಲಿ ನಡೆದ ಸಮಾವೇಶಕ್ಕೆ ರಾಜೇಂದ್ರ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಶಿವಕುಮಾರಸ್ವಾಮಿ ಚಾಲನೆ ನೀಡಿದರು. ನಂತರ ಸಮಾವೇಶದಲ್ಲಿ ವಧು–ವರರು ಹಾಗೂ ಅವರ ಪೋಷಕರು ವೇದಿಕೆಗೆ ಆಗಮಿಸಿ, ತಮ್ಮ ಪರಿಚಯ ಹಾಗೂ ಸ್ವವಿವರಗಳನ್ನು ನೀಡಿದರು. ನೋಂದಣಿಯಾದ ವಧೂವರರಿಗೆ ವೆಬ್‌ಸೈಟ್ ಮುಖಾಂತರ ಮಾಹಿತಿ ನೀಡಲಾಗುತ್ತದೆ ಎಂದು ಸಂಚಾಲಕರು ತಿಳಿಸಿದರು.

ಇದು ನಗರದಲ್ಲಿ ನಡೆದ ಮೊದಲ ವಧೂವರರ ಸಮಾವೇಶವಾಗಿದ್ದು, ಪ್ರತಿ ಮೂರು ತಿಂಗಳಿಗೊಮ್ಮೆ ನಡೆಸಬೇಕೆಂಬ ಸಲಹೆ ಸಭಿಕರಿಂದ ಬಂದಿತು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಸಾರ್ವಜನಿಕ ಸಂಪರ್ಕಾಧಿಕಾರಿ ಆರ್.ಎಂ. ಸ್ವಾಮಿ, ಶರಣ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಬಿ.ಕೆ. ರವಿಕುಮಾರ್, ಮಹಿಳಾ ಕಾಲೇಜಿನ ಪ್ರಾಂಶುಪಾಲ ಪ್ರೊ. ಎನ್. ಮಹದೇವಸ್ವಾಮಿ, ವಿವಾಹ ವೇದಿಕೆಯ ಸಂಚಾಲಕಿ ಡಾ. ಮಲ್ಲಿಕಾ, ಆಶಾ ಭವಾನಿ, ಕಚೇರಿ ಅಧೀಕ್ಷಕ ಎಸ್. ಗುರುಮಲ್ಲಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಚಾ.ನಗರದಲ್ಲಿ ಬೇಕರಿಗೆ ಆಕಸ್ಮಿಕ ಬೆಂಕಿ: ಲಕ್ಷಾಂತರ ರೂ. ಪದಾರ್ಥ ಭಸ್ಮ

ಚಾಮರಾಜನಗರ, ನ.17–ಬೇಕರಿಯೊಂದಕ್ಕೆ ಆಕಸ್ಮಿಕ ಬೆಂಕಿ ತಗುಲಿ ಲಕ್ಷಾಂತರ ರೂ. ಮೌಲ್ಯದ ಪದಾರ್ಥಗಳು ಸುಟ್ಟು ಭಸ್ಮವಾಗಿರುವ ಘಟನೆಯೊಂದು ಸೋಮವಾರ ರಾತ್ರಿ ಸಂಭವಿಸಿದೆ.



ನಗರದ ದೊಡ್ಡ ಅಂಗಡಿ ಬೀದಿಯಲ್ಲಿರುವ ವೆಂಕಟೇಶ್ವರ ಬೇಕರಿ ಮಾಲೀಕರು ರಾತ್ರಿ ಬಾಗಿಲು ಹಾಕಿಕೊಂಡು ಮನೆಗೆ ಹೋದ ನಂತರ 10.30 ರ ಸಮಯದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಅಂಗಡಿಯೊಳಗಿನಿಂದ ಹೊಗೆ ಬರುತ್ತಿರುವುದನ್ನು ಕಂಡ ದಾರಿಹೋಕರೊಬ್ಬರು ಕೂಡಲೇ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾರೆ.

ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಅಗ್ನಿಯನ್ನು ನಂದಿಸಲೆತ್ನಿಸಿದರಾದರೂ ಅಷ್ಟೊತ್ತಿಗಾಗಲೇ ಬೇಕರಿಯಲ್ಲಿದ್ದ ಪರಿಕರಗಳು, ಸಿಹಿ ತಿಂಡಿ ತಿನಿಸುಗಳು ಮತ್ತಿತರೆ ಪದಾರ್ಥಗಳೆಲ್ಲ ಸುಟ್ಟು ಕರಕಲಾಗಿದ್ದವೆನ್ನಲಾಗಿದೆ. ಅಗ್ನಿ ಅನಾಹುತಕ್ಕೆ ಕಾರಣವೇನೂ ತಿಳಿದು ಬಂದಿಲ್ಲ ನಗರ ಪೊಲೀಸರು ದೂರು ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

## ವಿಜೃಂಭಣೆಯ ಲಕ್ಷ ದೀಪೋತ್ಸವ...



ಮೈಸೂರಿನ ಹಿನಕಲ್‌ನ ಶ್ರೀ ನನ್ನೇಶ್ವರ ಸ್ವಾಮಿ ದೇವರ ಕಲ್ಯಾಣಿ (ಕೊಳ)ಯಲ್ಲಿ ಕಡೇ ಕಾರ್ತಿಕ ಸೋಮವಾರದ ಅಂಗವಾಗಿ ಲಕ್ಷ ದೀಪೋತ್ಸವ ವಿಜೃಂಭಣೆಯಿಂದ ನಡೆಯಿತು.

## ಪಡುವಾರಹಳ್ಳಿಯಲ್ಲಿ ವೈಭವದ ಮಹದೇಶ್ವರ ಸ್ವಾಮಿ ತೆಪ್ಪೋತ್ಸವ



ಮೈಸೂರಿನ ಪಡುವಾರಹಳ್ಳಿ (ವಿನಾಯಕನಗರ)ಯ ಶ್ರೀ ವರಸಿದ್ಧಿ ಮಹದೇಶ್ವರ ಸ್ವಾಮಿಯ ದೇವಸ್ಥಾನದ ಕೊಳದಲ್ಲಿ ಸೋಮವಾರ ಸಂಜೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಮಹದೇಶ್ವರ ಸ್ವಾಮಿಯ ತೆಪ್ಪೋತ್ಸವ ನೆರವೇರಿತು. ಭಕ್ತರು ಉಘೇ ಮಾದಪ್ಪ ಎಂದು ಜಯಘೋಷ ಮೊಳಗಿಸುವ ಮೂಲಕ ಭಕ್ತಿಯ ಪರಾಕಾಷ್ಠೆ ಮೆರೆದರು.

# ಮೈಸೂರು ಜಿಲ್ಲಾ ಜವಾಹರ್ ಬಾಲ ಭವನಕ್ಕೆ ಗ್ರಹಣ

## ಜನಪ್ರತಿನಿಧಿಗಳು, ಅಧಿಕಾರಿಗಳ ನಿರ್ಲಕ್ಷ್ಯದಿಂದ ಸದುದ್ದೇಶಿತ ಮಕ್ಕಳ ತಾಣವೀಗ ಹಾಳು ಕೊಂಪೆ!!



ಮೈಸೂರು,17(ಎಂಕೆ)– ಚಿಣ್ಣರ ಚಿಲಿಪಿಲಿ ತಾಣದಲ್ಲಿ ಸ್ಮಶಾನ ಮೌನ ಆವರಿಸಿದ್ದು, ಅಧಿಕಾರಿ ಮತ್ತು ಜನಪ್ರತಿನಿಧಿಗಳ ಹಗ್ಗಜಗ್ಗಾಟದ ನಡುವೆ ಹಾಳು ಕೊಂಪೆಯಾದ 'ಮೈಸೂರು ಜಿಲ್ಲಾ ಜವಾಹರ್ ಬಾಲ ಭವನ'...!

ಸಾಂಸ್ಕೃತಿಕ ನಗರಿ ಮೈಸೂರಿನ ಬನ್ನಿಮಂಟಪದಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಸಂರಕ್ಷಣಾಧಿಕಾರಿಗಳ ಕಚೇರಿ ಸುತ್ತಲಿನ ಸುಮಾರು 10 ಎಕರೆ ಪ್ರದೇಶದ ನಡುವೆ ಇರುವ ಜಿಲ್ಲಾ ಜವಾಹರ್ ಬಾಲ ಭವನ ಅಕ್ಷರಶಃ ಹಾಳು ಕೊಂಪೆಯಾಗಿದ್ದು, ಮಕ್ಕಳ ಕಲರವ ಕೇಳುತ್ತಿದ್ದ ಸ್ಥಳದಲ್ಲಿ ನೀರವ ಮೌನ ಆವರಿಸಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಬಾಲಭವನ ಸೊಸೈಟಿ ನಿರ್ವಹಣೆಯಲ್ಲಿರುವ ಮೈಸೂರು ಜಿಲ್ಲಾ ಜವಾಹರ್ ಬಾಲ ಭವನ, ಅಭಿವೃದ್ಧಿಯ ಕ್ರಿಯಾ ಯೋಜನೆಗಳ ವಿಫಲತೆಗೆ ಒಳಗಾಗಿ ಕಳೆದ ಸುಮಾರು 15 ವರ್ಷಗಳಿಂದ ಪಾಳು ಬಿದ್ದಿದ್ದು, ಮರ–ಗಿಡ–ಗಂಟಿಗಳಿಂದ ಆವೃತ್ತವಾಗಿರುವ ಅರಣ್ಯ ಪ್ರದೇಶದಂತೆ ಗೋಚರವಾಗುತ್ತಿದೆ.

1979ರಲ್ಲಿ ಅಂದಿನ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ(ಸಿಐಟಿಬಿ) ಪ್ರಸ್ತುತ ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ) 10 ಎಕರೆ ಭೂಮಿಯನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಿದ್ದು, ಮತ್ತೆ 30 ವರ್ಷಗಳ ಅವಧಿಗೆ ವಿಸ್ತರಿಸಿದೆ. ಆದರೆ ಎಂಡಿಎ ಹಂತದಲ್ಲಿ ಗುತ್ತಿಗೆ ಅವಧಿ ವಿಸ್ತರಣೆಯಾಗಿದ್ದರೂ ನಗರಾಭಿವೃದ್ಧಿ ಇಲಾಖೆಯಲ್ಲಿ ಅನುಮತಿ ದೊರೆಯದ ಕಾರಣ ಯಾವುದೇ ಅಭಿವೃದ್ಧಿ ಚಟುವಟಿಕೆಗಳು ನಡೆಯದೆ ಸಂಪೂರ್ಣ ಸ್ಥಗಿತವಾಗಿದೆ.

2012–13 ರಲ್ಲಿ ಸ್ಥಳೀಯ ಶಾಸಕರಾದ ತನ್ವೀರ್ ಸೇಠ್ ಅವರ ಪರಿಕಲ್ಪನೆಯಲ್ಲಿ 4.90 ಕೋಟಿ ರೂ. ವೆಚ್ಚದಲ್ಲಿ ಬಾಲ ಭವನದ ಅಭಿವೃದ್ಧಿ ಕಾಮಗಾರಿ ನಡೆಸಲು ಅಂದಿನ ಮುಡಾ(ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಸಭೆಯಲ್ಲಿ ಚರ್ಚಿಸಿ ಅನುಮತಿ ಪಡೆಯಲಾಗಿತ್ತು. ಆದರೆ, ಮುಡಾದಿಂದ ಅನುದಾನ ದೊರೆಯದಿರುವುದು ಹಾಗೂ ಯೋಜಿತ ಪ್ಲಾನ್ ಪ್ರಕಾರ ಕಾಮಗಾರಿ ನಡೆಯದಿರುವುದು ಸೇರಿದಂತೆ ಕೆಲ ಕಾರಣಗಳಿಂದ ಕಾಮಗಾರಿ ಅರ್ಧಕ್ಕೆ ನಿಂತು ಹೋಗಿದೆ.

ಆದಾದ ನಂತರ ಅಂದರೆ 2020ರಲ್ಲಿ ಅಂದಿನ ಬಾಲಭವನ ಸೊಸೈಟಿ ಅಧ್ಯಕ್ಷರಾದ ಚಿಕ್ಕಮ್ಮ ಬಸವರಾಜ್ ಅವರ ಪ್ರಯತ್ನದಿಂದ ಮುಡಾದೊಂದಿಗೆ ಗುತ್ತಿಗೆ ಅವಧಿ ವಿಸ್ತರಣೆ ಜೊತೆಗೆ ಬಾಲ ಭವನದ ಅಭಿವೃದ್ಧಿಗೆ 11 ಕೋಟಿ ರೂ.ವೆಚ್ಚದ ಕ್ರಿಯಾ ಯೋಜನೆ ಸಿದ್ದಪಡಿಸಲಾಗಿತ್ತು. ಆಟಿಕೆ ರೈಲು, ಟ್ರ್ಯಾಕ್ ರಿಲೇಯಿಂಗ್ ಮತ್ತು ಇತರ ಕೆಲಸಗಳಿಗೆ 1.20 ಕೋಟಿ ರೂ., ಹೊಸ ಕಟ್ಟಡ ನಿರ್ಮಾಣಕ್ಕೆ 2.8 ಕೋಟಿ ರೂ., ಒಳಾಂಗಣ ಸಭಾಂಗಣ ನಿರ್ಮಾಣಕ್ಕೆ 1.8 ಕೋಟಿ ರೂ., ದೋಣಿ ವಿಹಾರ ಸೌಲಭ್ಯಕ್ಕೆ 90 ಲಕ್ಷ ರೂ., ಫಂಕ್ಷನ್ ಹಾಲ್ ನಿರ್ಮಾಣಕ್ಕೆ 70 ಲಕ್ಷ ರೂ., ಶೌಚಾಲಯ ನಿರ್ಮಾಣಕ್ಕೆ 13.5 ಲಕ್ಷ ರೂ. ಆಸನ ವ್ಯವಸ್ಥೆಗೆ 14 ಲಕ್ಷ ರೂ. ಸೇರಿದಂತೆ 11 ಕೋಟಿ ರೂ.ಕ್ರಿಯಾ ಯೋಜನೆ ಸಿದ್ದಪಡಿಸಲಾಗಿತ್ತು ಆದರೆ, ಸಿದ್ದವಾದ ಕ್ರಿಯಾ ಯೋಜನೆ ಫೈಲ್‌ಗೆ ಸಿಮೀತವಾಗಿದೆಯೇ ಹೊರತು ಇದುವರೆಗೂ ಚಾಲ್ತಿಯಾಗದಿರುವುದು ದುರದೃಷ್ಟಕರವಾಗಿದೆ.



ಬಿರುಕು ಬಿಟ್ಟಿರುವ ಗೋಡೆಗಳು

ಬಾಲ ಭವನದ ಅಭಿವೃದ್ಧಿಗೆ ಅನುದಾನದ ಕೊರತೆಯ ಜೊತೆಗೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಸಹ ಸಮ್ಮತಿ ಹಾಗೂ ಇಚ್ಛಾಸಕ್ತಿಯ ಕೊರತೆಯಿಂದಾಗಿ ಇಡೀ ಬಾಲ ಭವನದ ಆವರಣದಲ್ಲಿ ಸ್ಮಶಾನ ಮೌನ ಆವರಿಸುವಂತಾಗಿದೆ. ಮಕ್ಕಳ ಆಟಿಕೆಗಳು ಮುರಿದು ಗೆದ್ದಲು ಹಿಡಿದಿವೆ. ಆಟಿಕೆ ರೈಲೆ ಟ್ರ್ಯಾಕ್ ಗಿಡ–ಗಂಟಿಗಳಿಂದ ಮುಚ್ಚಿ ಹೋಗಿದ್ದು, ರಂಗಮಂಟಪ ಪೊದೆಗಳಿಂದ ಆವೃತವಾಗಿದೆ. ಬಾಲ ಭವನದ ಕಟ್ಟಡ ಶಿಥಿಲಗೊಂಡು ಇಂದೋ ಅಥವಾ ನಾಳೆಯೋ ಕುಸಿದು ಬೀಳುವಂತಿದೆ. ದೊಡ್ಡ ಕಾಂಪೌಂಡ್ ಹೊರತು ಬೇರೆಲ್ಲವೂ ಅಳಿದುಳಿದ ಅವಶೇಷಗಳಂತೆ ಕಾಣುತ್ತಿವೆ.

**ಬ್ಯಾರಿಕೇಡ್ ಗೋಡೌನ್:** ಪಾಳು ಬಿದ್ದಿರುವ ಬಾಲ ಭವನ ಪೊಲೀಸ್ ಇಲಾಖೆಗೆ ಮತ್ತು ಪುಂಡರಿಗೆ ಉಪಯುಕ್ತವಾಗುತ್ತಿದೆ. ದಸರಾ ಹಾಗೂ ಇನ್ನಿತರೆ ಬಂದೋಬಸ್ತ್ ವೇಳೆ ಬಳಕೆಗಾಗಿ ಬ್ಯಾರಿಕೇಡ್‌ಗಳನ್ನು ಇಟ್ಟಿದ್ದು, ಬಾಲ ಭವನ ಬ್ಯಾರಿಕೇಡ್‌ಗಳ ಗೋಡೌನ್ ಆಗಿ ಬದಲಾಗಿದೆ. ಅಲ್ಲದೆ ಬಾಲ ಭವನದ ಆವರಣದ ಪುಂಡರ, ಕುಡುಕರ ನೆಚ್ಚಿನ ತಾಣವಾಗಿರುವುದು ಶೋಚನೀಯ ಸಂಗತಿಯಾಗಿದೆ.

**ಮಕ್ಕಳ ಕಲರವ ಕಣ್ಮರೆ:** 1979 ರಿಂದಲೂ ಬಾಲ ಭವನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಒಂದಲ್ಲಾ ಒಂದು ಬಗೆಯ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿತ್ತು. ಆದರೆ, 2011 ರಿಂದೀಚೆಗೆ ಯಾವುದೇ ಚಟುವಟಿಕೆಗಳು ನಡೆಯುತ್ತಿಲ್ಲ. ನಡೆದರೂ ಅವುಗಳು ಬಾಲ ಭವನದ ಹೊರ ಆವರಣಕ್ಕೆ ಮಾತ್ರ ಸಿಮೀತವಾಗಿವೆ. ಮುಂದಾದರೂ ಮೈಸೂರಿನ ಬಾಲ ಭವನಕ್ಕೆ ಕಾಯಕಲ್ಪ ದೊರೆಯುವುದೇ ಎಂಬ ನಿರೀಕ್ಷೆಯಲ್ಲಿ ಜಾತಕ ಪಕ್ಷಿಯಂತೆ ಕಾಯುವಂತಾಗಿದೆ.

**ಅನುಮತಿ ದೊರೆತರೆ ತಾನೇ ಅಭಿವೃದ್ಧಿ:** ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ಗುತ್ತಿಗೆ ಅವಧಿ ವಿಸ್ತರಣೆಗೆ ಸಮ್ಮತಿ ನೀಡಲಾಗಿದೆ. ಆದರೆ, ಎಂಡಿಎ ಸಮ್ಮತಿಗೆ ನಗರಾಭಿವೃದ್ಧಿ ಇಲಾಖೆಯಿಂದ ಅನುಮತಿ ದೊರೆತಿಲ್ಲ. ಹಾಗಾಗಿ ಬಾಲ ಭವನದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಸರ್ಕಾರದಿಂದ ಅನುಮತಿ ನೀಡಿದರೆ ತಾನೇ ಅಭಿವೃದ್ಧಿಯಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಂಟಿ ನಿರ್ದೇಶಕ ಬಸವರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಧೂಳು ಹಿಡಿದಿರುವ ಕೊಠಡಿ ಸಾಮಗ್ರಿಗಳು

### ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಲಾಗಿದೆ...!

ಮೈಸೂರು ಜಿಲ್ಲಾ ಜವಾಹರ ಬಾಲ ಭವನವನ್ನು ಮಕ್ಕಳ ನೆಚ್ಚಿನ ತಾಣವನ್ನಾಗಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಪ್ರಾಣಿ ಮತ್ತು ಪಕ್ಷಿಯ ವಿನ್ಯಾಸವನ್ನೊಳಗೊಂಡ ಎಂಟ್ರಿ ಮತ್ತು ಎಕ್ಸಿಟ್ ಗೇಟ್‌ಗಳ ನಿರ್ಮಾಣದೊಂದಿಗೆ 4.90 ಕೋಟಿ ರೂ.ವೆಚ್ಚದ ಕ್ರಿಯಾ ಯೋಜನೆ ಸಿದ್ದಪಡಿಸಲಾಗಿತ್ತು. ಈ ಕ್ರಿಯಾ ಯೋಜನೆಗೆ ಮುಡಾದಿಂದಲೂ ಅನುಮತಿ ಪಡೆಯಲಾಗಿತ್ತು. ಆದರೆ, ಕಾಮಗಾರಿ ಮುಂದುವರೆಸಲು ಮುಡಾದಿಂದ ಅನುದಾನ ನೀಡದೆ ಇರುವುದರಿಂದ ಬಾಲ ಭವನದ ಅಭಿವೃದ್ಧಿ ಯೋಜನೆ ಅರ್ಧಕ್ಕೆ ನಿಂತು ಹೋಯಿತು. ಅಲ್ಲದೆ ಕಾಮಗಾರಿಯೂ ಆರಂಭವಾದ ಕೆಲ ದಿನದಲ್ಲೇ ಸ್ಥಗಿತವಾಯಿತು. ಬಾಲ ಭವನದ ಅಭಿವೃದ್ಧಿಗೆ ಶಾಸಕರ ಅನುದಾನವನ್ನು ನೀಡುವುದಾಗಿ ಹೇಳಿದ್ದೆ. ಆದರೆ, ಆಡಳಿತ ವ್ಯವಸ್ಥೆಯಲ್ಲಿ ಸ್ಪಂದನೆ ದೊರೆಯದೆ ಎಲ್ಲವೂ ಸ್ಥಗಿತವಾಗಿದೆ. ಹೇಗಾದರೂ ಕಾಯಕಲ್ಪ ನೀಡಲೇಬೇಕು ಎಂದು ಕಳೆದ ತಿಂಗಳ ಹಿಂದೆಯಷ್ಟೇ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ಪ್ರಸ್ತುತ ಎಂಡಿಎ ಅನುದಾನ ನೀಡಿದಿದ್ದರೆ, ಬಜೆಟ್‌ನಲ್ಲಾದರೂ ಅನುದಾನ ದೊರಕಿಸುವ ಪ್ರಯತ್ನ ಮಾಡಲಾಗುವುದು.

- **ತನ್ವೀರ್ ಸೇಠ್,** ಶಾಸಕ



ಗಿಡಗಂಟಿಗಳಿಂದ ತುಂಬಿ ಪಾಳುಬಿದ್ದಿರುವ ಕಟ್ಟಡ

# ವಿದ್ಯಾರ್ಥಿನಿಗೆ ಕಿರುಕುಳ ನೀಡಿದ ಉಪನ್ಯಾಸಕನ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು, ನ.17(ಎಸ್‌ಪಿಎನ್)– ಮೈಸೂರು ವಿವಿ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿನಿಗೆ ಕಿರುಕುಳ ನೀಡಿರುವ ಉಪನ್ಯಾಸಕನ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿ ಒತ್ತಾಯಿಸಿದೆ.

ವಿದ್ಯಾರ್ಥಿನಿಗೆ ಪದೇ ಪದೆ ಕಿರುಕುಳ ನೀಡಿ, ಯಾರಿಗಾದರೂ ಹೇಳಿದರೆ ಪರೀಕ್ಷೆಯಲ್ಲಿ ಫೇಲ್ ಮಾಡುತ್ತೇನೆ ಎಂದು ಬೆದರಿಕೆ ಒಡ್ಡಿರುವ ಉಪನ್ಯಾಸಕನನ್ನು ಈ ಕೂಡಲೇ ಸೇವೆಯಿಂದ ವಜಾಗೊಳಿಸಿ, ಕಾನೂನು ಕ್ರಮ ಜರುಗಿಸಬೇಕು.

ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೂರು ವರ್ಷಗಳ ಇತಿಹಾಸವಿದೆ. ಇಲ್ಲಿ ಪಾಠ ಮಾಡಿದ ಪ್ರಾಧ್ಯಾಪಕರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಹೆಸರಿದೆ. ಇಂತಹ ಪ್ರತಿಷ್ಠಿತ ವಿವಿಯಲ್ಲಿ ಕೆಲಸ ಮಾಡುವ ಉಪನ್ಯಾಸಕನೊಬ್ಬ ಕಿರುಕುಳ ನೀಡಿರುವುದು ಅಕ್ಷಮ್ಯ ಅಪರಾಧ ಎಂದಿದ್ದಾರೆ.

ರಾಜ್ಯದ ವಿವಿಧೆಡೆ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿನಿಯರ ಮೇಲೆ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯ, ಅಧಿಕಾರ ದುರುಪಯೋಗ ಕಡಿಮೆ ಮಾಡಲು ಕ್ರಮವಹಿಸಬೇಕು. ಘಟನೆ ಕುರಿತು ತ್ವರಿತ, ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಆರೋಪಿಯನ್ನ ಕೂಡಲೇ ಸೇವೆಯಿಂದ ವಜಾಗೊಳಿಸಬೇಕು ಎಂದು ಎಐಡಿಎಸ್‌ಓ ಮೈಸೂರು ಸಮಿತಿ ಸಂಚಾಲಕ ನಿತಿನ್ ಒತ್ತಾಯಿಸಿದ್ದಾರೆ.

# ನ.20ಕ್ಕೆ ವೀರನಗೆರೆ ಶ್ರೀ ಮನೆಮಂಚಮ್ಮ ದೇವಸ್ಥಾನದ ವಾರ್ಷಿಕೋತ್ಸವ

ಮೈಸೂರು, ನ.17(ಎಸ್‌ಪಿಎನ್)– ಮೈಸೂರು ವೀರನಗೆರೆಯ ಶ್ರೀ ವಿಶ್ವಕರ್ಮ ಸೀತಾರಾಮ ಮಂದಿರ ಮತ್ತು ಶ್ರೀ ಮನೆಮಂಚಮ್ಮ ದೇವಸ್ಥಾನದ 14 ನೇ ವಾರ್ಷಿಕೋತ್ಸವ ಪ್ರಯುಕ್ತ ವಿವಿಧ ಧಾರ್ಮಿಕ ವಿಧಿ–ವಿಧಾನಗಳು, ಅನ್ನಸಂತರ್ಪಣೆ ಕಾರ್ಯಕ್ರಮವನ್ನು ನ.20ರಂದು ಹಮ್ಮಿಕೊಳ್ಳಲಾಗಿದೆ.

ಗುರುವಾರ ಬೆಳಗ್ಗೆ 7.30ರಿಂದ ಪುರೋಹಿತರಾದ ನವೀನ್ ಅವರ ನೇತೃತ್ವದಲ್ಲಿ ಗಂಗಾವತರಣಾ ಶ್ರೀ ಮಹಾಗಣಪತಿ ಪೂಜೆ, ನವಗ್ರಹ ಪೂಜೆ, ಹೋಮ–ಹವನಗಳನ್ನು ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನ 12.15 ನಿಮಿಷಕ್ಕೆ ಮಹಾಮಂಗಳಾರತಿ ನಡೆಯಲಿದೆ. ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ 6.30ಕ್ಕೆ ಬಿಳಿಕೆರೆಯ ವಿದ್ವಾನ್ ಬಿ.ಎಸ್.ಗಂಗಾಧರ್ ಆಚಾರ್ ಮತ್ತು ತಂಡದವರಿಂದ ಭಕ್ತಿಗೀತೆ ಗಾಯನ ನಡೆಯಲಿದೆ ಎಂದು ಶ್ರೀ ಮನೆಮಂಚಮ್ಮ ದೇವಸ್ಥಾನದ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ವಿವರಗಳಿಗೆ ಎಂ.ಎಸ್.ರಾಮಚಂದ್ರು ಅವರನ್ನು (9341966324) ಸಂಪರ್ಕಿಸಬಹುದು.

# ಪಿಎಫ್ ಮೇಲಿನ ಬಡ್ಡಿ ದರ ಶೇ.7.1ಕ್ಕೆ ನಿಗದಿ

ಮೈಸೂರು, ನ.17(ಎಸ್‌ಪಿಎನ್)– ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ವಂತಿಕೆದಾರರ ಸಾಮಾನ್ಯ ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಶಿಲ್ಕಿನ ಮೇಲಿನ ಬಡ್ಡಿ ದರವನ್ನು 2025ರ ಅ.1ರಿಂದ ಡಿ.31ರವರೆಗಿನ ಅವಧಿಗೆ ವಾರ್ಷಿಕ ಶೇ.7.1ಕ್ಕೆ ನಿಗದಿಪಡಿಸಲಾಗಿದೆ ಎಂದು ಆರ್ಥಿಕ ಇಲಾಖೆ(ಆಡಳಿತ ಮತ್ತು ಮುಂಗಡಗಳು) ಅಧೀನ ಕಾರ್ಯದರ್ಶಿ ನೇತ್ರಪ್ರಭಾ ಎಂ.ಧಾಯಮಲೆ ಅಧಿಸೂಚನೆ ಹೊರಡಿಸಿದ್ದಾರೆ.

# ಜೆಎಸ್‌ಎಸ್ ಸಂಗೀತ ಸಭಾದಿಂದ ಸಂಗೀತ ಸ್ಪರ್ಧೆ

ಮೈಸೂರು,ನ.17–ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣೆಯ 30ನೇ ಸಂಗೀತ ಸಮ್ಮೇಳನದ ಅಂಗವಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆಯನ್ನು ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.

ಸೀನಿಯರ್ ಮತ್ತು ಜೂನಿಯರ್ ವಿಭಾಗದಿಂದ ವಚನಗಾಯನ, ಕರ್ನಾಟಕ ಶಾಸ್ತ್ರೀಯ ಗಾಯನ ಮತ್ತು ವಾದ್ಯ ಸಂಗೀತ ಸ್ಪರ್ಧೆಗಳನ್ನು ನಡೆಸಲಾಗಿದ್ದು, ಒಟ್ಟು 78 ವಿದ್ಯಾರ್ಥಿಗಳು ಈ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಸಂಗೀತ ಸಭಾ ಕಾರ್ಯದರ್ಶಿ ಟಿ.ಪಿ.ಪ್ರಭುಸ್ವಾಮಿ, ಖಜಾಂಚಿ ರಘುನಂದನ್‌ರಾವ್, ಟ್ರಸ್ಟಿಗಳು ಹಾಗೂ ಸ್ಪರ್ಧೆಯ ಸಂಚಾಲಕರಾದ ಎನ್.ರಾಘವನ್, ಡಾ.ಪೂರ್ಣಿಮಾ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಸಂಗೀತ ಸ್ಪರ್ಧೆಯ ತೀರ್ಪುಗಾರರಾಗಿ ವಿದುಷಿಗಳಾದ ರಾಜಲಕ್ಷ್ಮಿ ಶ್ರೀಧರ, ಪದ್ಮಾವತಿ ನರಸಿಂಹನ್, ದಿವ್ಯ ಸಚ್ಚಿದಾನಂದ, ಡಾ.ದೀಪಾ ರಘುನಂದನ್, ವಿಧು ಭಾರತಿ ಮತ್ತು ಶ್ರೀ ರೂಪನಗುಡಿ ರತ್ನತೇಜ ಆಗಮಿಸಿದ್ದರು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲಾ ಸ್ಪರ್ಧಿಗಳಿಗೂ ಸ್ಥಳದಲ್ಲೇ ಪ್ರಮಾಣ ಪತ್ರ ವಿತರಿಸಲಾಯಿತು. ವಿಜೇತರಾದ ಸ್ಪರ್ಧಿಗಳಿಗೆ ಡಿ.6ರಂದು ನಡೆಯಲಿರುವ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಬಹುಮಾನ ವಿತರಿಸಲಾಗುವುದು.

## ಸುಣ್ಣದಕೇರಿಯಲ್ಲಿ ವಿಜೃಂಭಣೆಯ ಮಹದೇಶ್ವರಸ್ವಾಮಿ ರಥೋತ್ಸವ




ಕಡೇ ಕಾರ್ತಿಕ ಸೋಮವಾರ ಪ್ರಯುಕ್ತ ಮೈಸೂರಿನ ಸುಣ್ಣದಕೇರಿಯ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ವತಿಯಿಂದ ಸುಣ್ಣದಕೇರಿಯ ಪ್ರಮುಖ ಬೀದಿಗಳಲ್ಲಿ ಮಹದೇಶ್ವರಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು. ನಗರ ಪಾಲಿಕೆ ಮಾಜಿ ಸದಸ್ಯ ಲೋಕೇಶ್‌ಪಿಯಾ, ಮುಖಂಡರಾದ ಸುಣ್ಣದಕೇರಿ ಎಸ್.ರೋಹಿತ್, ನಾಗೇಶ್ ನಾಯಕ್, ರವಿ ಮತ್ತಿತರರು ಪಾಲ್ಗೊಂಡಿರುವುದನ್ನು ಚಿತ್ರದಲ್ಲಿ ಕಾಣಬಹುದು.

# ಮದುವೆ ಮನೆಯಲ್ಲಿ ಜೂಜಾಡುತ್ತಿದ್ದವರ ಬಂಧನ 4 ಲಕ್ಷಕ್ಕೂ ಹೆಚ್ಚು ನಗದು ವಶ

ವಿರಾಜಪೇಟೆ, ನ.17–ಮದುವೆ ಮನೆಯಲ್ಲಿ ಕೆಲ ಮಂದಿ ಸ್ನೇಹಿತರು ಅಕ್ರಮವಾಗಿ ಹಣ ಇಟ್ಟು ಜೂಜಾಟ ಆಡುತ್ತಿದ್ದಾಗ ಪೊಲೀಸರು ದಾಳಿ ನಡೆಸಿ ಎಂಟು ಮಂದಿಯನ್ನು ಬಂಧಿಸಿ ಪಣಕ್ಕಿಟ್ಟಿದ್ದ ನಾಲ್ಕು ಲಕ್ಷಕ್ಕೂ ಹೆಚ್ಚು ರೂಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಪಟ್ಟಣದ ಮೊಗರಗಲ್ಲಿರುವ ಕಲ್ಯಾಣ ಮಂಟಪದಲ್ಲಿ ಮದುವೆ ನಡೆಯುತ್ತಿದ್ದಾಗ, ಕೊಠಡಿಯೊಂದರಲ್ಲಿ ಸ್ಥಳೀಯರು ಹಣ ಪಣಕ್ಕಿಟ್ಟು ಜೂಜಾಟದಲ್ಲಿ ತೊಡಗಿದ್ದರು. ಖಚಿತ ಮಾಹಿತಿ ಅರಿತ ಪೊಲೀಸರು ಏಕಾಏಕಿ ಕಲ್ಯಾಣ ಮಂಟಪದ ಮೇಲೆ ದಾಳಿ ನಡೆಸಿ ಜೂಜಾಟದಲ್ಲಿ ತೊಡಗಿದ್ದ ವ್ಯಕ್ತಿಗಳನ್ನು ಬಂಧಿಸಿ ಅವರಿಂದ ಒಟ್ಟು 4,25,545,00 ರೂ. ಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಅಕ್ರಮ ಜೂಜಾಟದಲ್ಲಿ ತೊಡಗಿದ್ದ 8 ಮಂದಿಯನ್ನು ಠಾಣೆಗೆ ಕರೆದೊಯ್ದು ಪೊಲೀಸರು ಪ್ರಕರಣ ದಾಖಲಿಸಿಕೊಂಡು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ವಿರಾಜಪೇಟೆ ಉಪ ವಿಭಾಗದ ಪ್ರಭಾರ ಪೊಲೀಸ್ ಉಪ ಅಧೀಕ್ಷಕರಾದ ಪಿ.ಚಂದ್ರಶೇಖರ್ ಅವರ ನಿರ್ದೇಶನದ ಮೇರೆಗೆ ವಿರಾಜಪೇಟೆ ವೃತ್ತ ನಿರೀಕ್ಷಕರಾದ ಪಿ.ಅನೂಪ್ ಮಾದಪ್ಪ ಅವರ ಮಾರ್ಗದರ್ಶನದಲ್ಲಿ ವಿರಾಜಪೇಟೆ ನಗರ ಠಾಣೆಯ ಪಿ.ಎಸ್.ಐ. ಹೆಚ್.ಎಸ್. ಪ್ರಮೋದ್, ಮತ್ತು ಅಪರಾಧ ವಿಭಾಗದ ಪಿ.ಎಸ್.ಐ. ಟಿ.ಎಂ. ಕಾವೇರಪ್ಪ ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

# ಜನರಿಂದ ಸಂಗ್ರಹಿಸಿದ ಗ್ರಂಥಾಲಯ ಸೆಸ್ ದುರ್ಬಳಕೆಯಾಗುತ್ತಿದೆ; ಐಎಎಸ್ ಅಧಿಕಾರಿಗಳಲ್ಲಿ ಯಾವುದರ ಬಗ್ಗೆಯೂ ಸ್ಪಷ್ಟತೆ ಇಲ್ಲ

## ಪ್ರಕಾಶಕರು, ಲೇಖಕರ ನೋವಿನ ಅಳಲು

ಮೈಸೂರು,ನ.17(ಎಸ್‌ಪಿಎನ್)–ತಮ್ಮ ಇಲಾಖೆಗೆ ಬರಬೇಕಾದ ಹಣವನ್ನು ಪಡೆಯಲು ಸಾರ್ವಜನಿಕ ಗ್ರಂಥಾಲಯ ಇಲಾಖೆ ಆಯುಕ್ತರು ಆಸಕ್ತಿ ವಹಿಸುತ್ತಿಲ್ಲ. ಹೀಗಾಗಿ ರಾಜ್ಯಾದ್ಯಂತ ಸ್ಥಳೀಯ ಸಂಸ್ಥೆಗಳು ಜನರಿಂದ ವಸೂಲಿ ಮಾಡಿರುವ ಶೇ.6ರಷ್ಟು ಸೆಸ್ ಹಣ ಬೇರೆಬೇರೆ ಕೆಲಸಗಳಿಗೆ ಉಪಯೋಗವಾಗುತ್ತಿದೆ. ಹಾಗಾಗಿ ರಾಜ್ಯದ ಸಾರ್ವಜನಿಕ ಗ್ರಂಥಾಲಯಗಳು ಅನುದಾನವಿಲ್ಲದೆ ಸೊರಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂಬ ಆರೋಪ ಪ್ರಕಾಶಕರು, ಲೇಖಕರ ವಲಯದಿಂದ ಕೇಳಿ ಬರುತ್ತಿದೆ.

ಈ ಹಿಂದೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರು, ಇಲಾಖೆಯ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡಿದ್ದರು. ಆದರೆ, ಈ ಹುದ್ದೆಯಿಂದ ಸಾರ್ವಜನಿಕರ ಗ್ರಂಥಾಲಯ ಇಲಾಖೆಯ ಅಭಿವೃದ್ಧಿಗೆ ಈ ಅಧಿಕಾರ ಸಾಕಾಗುವುದಿಲ್ಲ ಎಂಬುದನ್ನು ಅರಿತ ರಾಜ್ಯ ಸರ್ಕಾರ, ಈ ಹುದ್ದೆಯನ್ನು ನಿರ್ದೇಶಕರ ಸ್ಥಾನದಿಂದ ಆಯುಕ್ತರ ಹುದ್ದೆಗೆ ಉನ್ನತೀಕರಿಸಿ, ಐಎಎಸ್ ಅಧಿಕಾರಿಗಳನ್ನು ನೇಮಿಸುತ್ತಿದೆ. ಆದರೂ, ಸಾರ್ವಜನಿಕ ಗ್ರಂಥಾಲಯ ಇಲಾಖೆ ಅಭಿವೃದ್ಧಿ ಕಾಣುತ್ತಿಲ್ಲ ಎನ್ನುತ್ತಾರೆ ಕರ್ನಾಟಕ ರಾಜ್ಯ ಪ್ರಕಾಶಕರ ಸಂಘದ ಕಾರ್ಯದರ್ಶಿ ನಾ.ರವಿಕುಮಾರ್.

ಜಿಬಿಎ, ರಾಜ್ಯದ ಆರು ನಗರ ಪಾಲಿಕೆಗಳು ಸೇರಿದಂತೆ ಸ್ಥಳೀಯ ಸಂಸ್ಥೆಗಳು ಜನರಿಂದ ವಸೂಲಿ ಮಾಡುತ್ತಿರುವ ಶೇ.6 ರಷ್ಟು ತೆರಿಗೆ ಹಣವನ್ನು ಏಕೀಕೃತ ಬ್ಯಾಂಕ್‌ಗೆ ವರ್ಗಾಯಿಸಲು ತಾಂತ್ರಿಕ ಸಮಸ್ಯೆಯಿಂದ ಸಾಧ್ಯವಾಗುತ್ತಿಲ್ಲ. ಈ ಕುರಿತು ಸಾಹಿತಿಗಳು, ಲೇಖಕರು, ಚಿಂತಕರು 2024ರಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಾರ್ವಜನಿಕ ಗ್ರಂಥಾಲಯ



ಇಲಾಖೆ ಮಂತ್ರಿಗಳಾದ ಮಧುಬಂಗಾರಪ್ಪ ಅವರನ್ನು ಭೇಟಿ ಮಾಡಿ ರಾಜ್ಯಮಟ್ಟದ ಏಕೀಕೃತ ಬ್ಯಾಂಕ್ ಅಕೌಂಟ್ ತೆರೆಯಲು ಮನವಿ ಮಾಡಲಾಗಿತ್ತು.

ಈ ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಮಧುಬಂಗಾರಪ್ಪ ಅವರು ಸ್ಪಂದಿಸಿ, 2024ರಲ್ಲೇ ಹಣಕಾಸು ಇಲಾಖೆಗೆ ಮುಂದಿನ ಕ್ರಮಕ್ಕಾಗಿ ಎಂದು ಉಲ್ಲೇಖಿಸಿ, ಶಿಫಾರಸ್ಸು ಮಾಡಿದ್ದರು. ಆದರೆ, ಹಣಕಾಸಿನ ಇಲಾಖೆ ಅಧಿಕಾರಿಗಳು ಈ ಶಿಫಾರಸ್ಸಿಗೆ ಒಂದಿಷ್ಟು ಬೆಲೆ ನೀಡಿಲ್ಲ. ಇನ್ನು ಸಾರ್ವಜನಿಕರ ಗ್ರಂಥಾಲಯ ಇಲಾಖೆ ಆಯುಕ್ತರು, ಏಕೀಕೃತ ಬ್ಯಾಂಕ್ ಮಾಡಿಸಲು ಮುತುವರ್ಜಿ ವಹಿಸುತ್ತಿಲ್ಲ. ಹಾಗಾಗಿ ಪ್ರಕಾಶಕರು, ಲೇಖಕರು ಬಹುದಿನಗಳ ಬೇಡಿಕೆ ಹಾಗೆಯೇ ಉಳಿದಿದೆ ಎಂದು ತಮ್ಮ ಅಳಲನ್ನು 'ಮೈಸೂರು ಮಿತ್ರ'ನಲ್ಲಿ ತೋಡಿಕೊಂಡರು.

ಈ ಇಲಾಖೆಗೆ ಬರುವ ಐಎಎಸ್ ಅಧಿಕಾರಿಗಳು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಭಿವೃದ್ಧಿ ಕುರಿತು ಒಬ್ಬರೂ ಪ್ರಯತ್ನಿಸುತ್ತಿಲ್ಲ. ಅವರಲ್ಲೇ ಸ್ಪಷ್ಟತೆಯಿಲ್ಲ. ಅಲ್ಲದೆ, ಸ್ಥಳೀಯ ಸಂಸ್ಥೆಗಳಲ್ಲಿ ಕೊಳೆಯುತ್ತಿರುವ ತಮ್ಮ ಇಲಾಖೆಗೆ ಸೇರಿದ ಅನುದಾನವನ್ನು ಪಡೆಯಲೂ ಮುಂದಾಗುತ್ತಿಲ್ಲ. 2020ರಲ್ಲಿ 7 ಕೋಟಿ ಅನುದಾನ ಬಳಸದೇ ಹಣಕಾಸು ಇಲಾಖೆಗೆ ವಾಪಸ್ಸು ಹೋಗಿದೆ. ಈ ಹಣ ತರುವ ಬಗ್ಗೆ ಯಾವೊಬ್ಬ ಅಧಿಕಾರಿಗಳು ತಲೆಕೆಡಿಸಿಕೊಂಡಿಲ್ಲ. 2022, 2023, ಹಾಗೂ 2024 ವರ್ಷದಲ್ಲಿ ಪುಸ್ತಕ ಆಯ್ಕೆ ಸಮಿತಿಯಿಂದ ವಿವಿಧ ಲೇಖಕರು, ಪ್ರಕಾಶಕರು ಪ್ರಕಟಿಸಿರುವ ಆಯಾಯ ವರ್ಷದ 300 ಪುಸ್ತಕಗಳ ಖರೀದಿಗೆ ಶಿಫಾರಸ್ಸು ಮಾಡಲಾಗಿತ್ತು. ಇದರ ಬಗ್ಗೆ ಇಲಾಖಾ ಅಧಿಕಾರಿಗಳು ಒಂದಿಷ್ಟು ಗಮನಹರಿಸಿಲ್ಲ. ಕೇಳಿದರೆ ನಮ್ಮ ಬಳಿ ಅನುದಾನ ಇಲ್ಲ ಎನ್ನುತ್ತಾರೆ. ಇದರಿಂದ ಪ್ರಕಾಶಕರು ಆರ್ಥಿಕ ಸಂಕಷ್ಟಕ್ಕೊಳಗಾಗಿದ್ದಾರೆ ಎಂದು ನಾ.ರವಿ ಕುಮಾರ್ ಅವರು ಅಧಿಕಾರಿಗಳ ಕನ್ನಡ ವಿರೋಧಿ ಮನಸ್ಥಿತಿಯನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ವಿವಿಧ ಸ್ಥಳೀಯ ಸಂಸ್ಥೆಗಳು ಸಂಗ್ರಹಿಸುವ ಶೇ.6ರಷ್ಟು ಗ್ರಂಥಾಲಯ ಸೆಸ್ ಹಣವನ್ನು ತಮ್ಮಲ್ಲಿಯೇ ಇಟ್ಟುಕೊಂಡು ಬೇರೆಬೇರೆ ಕೆಲಸಗಳಿಗೆ ಉಪಯೋಗಿಸುತ್ತಿವೆ. ಈ ತೆರಿಗೆ ಹಣವನ್ನು ಇಲಾಖೆ ಕೊಡಿಸಲು ಕಳೆದ 7 ವರ್ಷಗಳಿಂದ ಲೇಖಕರು, ಪ್ರಕಾಶಕರು ಸತತ ಹೋರಾಟ ಮಾಡುತ್ತಿದ್ದರೂ ಐಎಎಸ್ ಅಧಿಕಾರಿಗಳು ನಮ್ಮ ಹೋರಾಟಕ್ಕೆ ಸಾಥ್ ನೀಡುತ್ತಿಲ್ಲ ಹಾಗೂ ಇಲಾಖಾ ಅಭಿವೃದ್ಧಿ ಬಗ್ಗೆಯೂ ತಲೆಕೆಡಿಸಿಕೊಳ್ಳುತ್ತಿಲ್ಲ. ಈಗಾದರೆ ಸಾರ್ವಜನಿಕ ಗ್ರಂಥಾಲಯ ಅಭಿವೃದ್ಧಿಗೆ ಅಧಿಕಾರಿಗಳ ಕೊಡುಗೆ ಏನು? ಎನ್ನುತ್ತಾರೆ ಪ್ರಕಾಶಕ ನಿಂಗರಾಜು ಚಿತ್ತಣ್ಣವರ್.

> ರಾಜ್ಯಮಟ್ಟದ ಪ್ರಕಾಶಕರು, ಲೇಖಕರು ಪ್ರಕಟಿಸುವ ಪುಸ್ತಕಗಳ ಖರೀದಿಗೆ ರಾಜ್ಯ ಸರ್ಕಾರ ಮುಂದಾಗುತ್ತಿಲ್ಲ. ಅಂತೆಯೇ ಸಾರ್ವಜನಿಕ ಗ್ರಂಥಾಲಯ ಇಲಾಖಾ ಹೆಸರಿನಲ್ಲಿ ಹೆಡ್ ಆಫ್ ಬ್ಯಾಂಕ್ ಅಕೌಂಟ್ ತೆರೆಯಲು ಸರ್ಕಾರ ಅನುಮತಿ ನೀಡುತ್ತಿಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ಸುಳ್ಳುಸುದ್ದಿ ಹರಡಲಾಗುತ್ತಿದೆ. ಇದು ವಾಸ್ತವ ಅಲ್ಲ. ಈ ಇಲಾಖೆಯ ಆಯುಕ್ತರಾದ ಬಸವರಾಜೇಂದ್ರ ಅವರು, ಇಲಾಖಾ ನಿರ್ವಹಣೆಗೆ ಸ್ಥಳೀಯ ಸಂಸ್ಥೆಗಳು ಸಂಗ್ರಹಿಸುವ ಸೆಸ್ ಹಣವನ್ನು ಸಾರ್ವಜನಿಕ ಗ್ರಂಥಾಲಯ ಇಲಾಖಾ ವ್ಯಾಪ್ತಿಗೆ ಪಡೆದುಕೊಳ್ಳಲು ರಾಜ್ಯ ಸರ್ಕಾರದ ಗಮನಕ್ಕೆ ತಂದು ಕಾನೂನಿಗೆ ತಿದ್ದುಪಡಿ ತರಬೇಕು. ಆ ಕೆಲಸವನ್ನು ಮಾಡುತ್ತಿಲ್ಲ. ಆ ಕೆಲಸ ಮಾಡಿದರೆ, ಈ ಸಾರ್ವಜನಿಕ ಗ್ರಂಥಾಲಯ ಅಭಿವೃದ್ಧಿಗೆ ನೂರಾರು ಕೋಟಿ ಹಣ ಸಂಗ್ರಹವಾಗುತ್ತದೆ.
>
> - **ಡಾ.ಮಾನಸ,** ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

> ನಮ್ಮ ಸಂಘದಿಂದ 3 ಬೇಡಿಕೆಗಳನ್ನು ಈಡೇರಿಸುವಂತೆ ಹಲವು ವರ್ಷಗಳಿಂದ ಬಿ.ಎಸ್.ಯಡಿಯೂರಪ್ಪ ಜಗದೀಶ್ ಶೆಟ್ಟರ್, ಡಿ.ವಿ.ಸದಾನಂದಗೌಡ ಹೆಚ್.ಡಿ.ಕುಮಾರಸ್ವಾಮಿ, ಸಿದ್ದರಾಮಯ್ಯರನ್ನು ಭೇಟಿ ಮಾಡಿ ಮನವಿ ಮಾಡಲಾಗಿದೆ. ನಾವು ಮನವಿ ಕೊಟ್ಟಾಗ ಮುಖ್ಯ ಮಂತ್ರಿಗಳು ಕಾನೂನು ವ್ಯಾಪ್ತಿಯಲ್ಲಿ ಪರಿಹರಿಸಿ ಎಂದು ಹಣಕಾಸು ಇಲಾಖೆಗೆ ಶಿಫಾರಸ್ಸು ಮಾಡುತ್ತಾರೆ. ಆ ಮನವಿಯನ್ನು ಸ್ವೀಕರಿಸುವ ಅಧಿಕಾರಿಗಳು ನಮ್ಮ ಬೇಡಿಕೆ ಪತ್ರವನ್ನು ಗಮನಿಸದೇ ಮೂಲೆಗೆಸೆಯುತ್ತಿರುವುದು ಬೇಸರದ ಸಂಗತಿ.
>
> - **ನಾ.ರವಿಕುಮಾರ್,** ಕಾರ್ಯದರ್ಶಿ ಕರ್ನಾಟಕ ರಾಜ್ಯ ಪ್ರಕಾಶಕರ ಸಂಘ

ಮೈಸೂರು ಮಿತ್ರ


# ಶ್ರೀಕಂಠೇಶ್ವರನಿಗೆ ಹೂವಿನ ಪಲ್ಲಕ್ಕಿ ಉತ್ಸವ

## ನಯನ ಕ್ಷತ್ರಿಯ ಸಮುದಾಯದಿಂದ ಆಕರ್ಷಕ ಬಾಣ-ಬಿರುಸು ಪ್ರದರ್ಶನ

ನಂಜನಗೂಡು, ನ.17– ಕಡೇ ಕಾರ್ತಿಕ ಸೋಮವಾರದ ಪ್ರಯುಕ್ತ ಶ್ರೀ ಕಂಠೇಶ್ವರ ಸ್ವಾಮಿಯವರ ಹೂವಿನ ಪಲ್ಲಕ್ಕಿ ಉತ್ಸವ ಮೂರ್ತಿಯ ಮೆರವಣಿಗೆಯು ರಥದ ಬೀದಿಯಲ್ಲಿ ಸಂಜೆ ವೈಭವಯುತವಾಗಿ ನೆರವೇರಿತು.

ನಂತರ ಉತ್ಸವ ಮೂರ್ತಿಯ ಮೆರವಣಿಗೆಯು ರಥಬೀದಿಯಲ್ಲಿ ಸಾಗಿ ಶ್ರೀ ಶ್ರೀಕಂಠೇಶ್ವರ ಸ್ವಾಮಿಯ ದೇವಸ್ಥಾನದ ಸನ್ನಿಧಿಯಲ್ಲಿರುವ ದಾಸೋಹ ಭವನದ ಆವರಣದ ಮುಂಭಾಗ ಬರುತ್ತಿದ್ದಂತೆ ನಯನ ಕ್ಷತ್ರಿಯ ಸಮುದಾಯದ ವತಿಯಿಂದ ನೂರಾರು ವರ್ಷಗಳಿಂದ ಸಂಪ್ರದಾಯ ಬದ್ಧವಾಗಿ ನಡೆಸಿಕೊಂಡು ಬರುತ್ತಿರುವ ಬಾಣ-ಬಿರುಸು ಸೇವೆ ಇಂದು ರಾತ್ರಿ ನಡೆದು ಸಾವಿರಾರು ಭಕ್ತಾಧಿಗಳು ವೀಕ್ಷಿಸಿ ಸಂಭ್ರಮಿಸಿ, ರೋಮಾಂಚನಗೊಂಡರು.

ನಯನ ಕ್ಷತ್ರಿಯ ಸಮುದಾಯದಿಂದ ಏರ್ಪಡಿಸಿದ್ದ ಹೂವಿನ ಪಲ್ಲಕ್ಕಿ ಉತ್ಸವ ಮತ್ತು ಪಟಾಕಿ ಬಾಣ ಬಿರುಸುಗಳ ಕಾರ್ಯಕ್ರಮವನ್ನು ಶಾಸಕ ದರ್ಶನ್ ಧ್ರುವನಾರಾಯಣ ಪಟಾಕಿ ಹಚ್ಚುವ ಮೂಲಕ ಚಾಲನೆ ನೀಡಿ ಶುಭ ಹಾರೈಸಿದರು.

**ಮನಮೋಹಕ ಬಾಣ-ಬಿರುಸು:** ಆಕರ್ಷಕ ಬಾಣ-ಬಿರುಸು ಕಾರ್ಯಕ್ರಮವು ದಾಸೋಹ ಭವನ ಆವರಣದಲ್ಲಿ ಸಂಜೆ 8 ರಿಂದ 9.30ರ ವರಗೆ ನಡೆದು ಸಾವಿರಾರು ಭಕ್ತಾಧಿಗಳು ವೀಕ್ಷಿಸಿ ರೋಮಾಂಚನಗೊಂಡು ಬಾನಂಚಿನಲ್ಲಿ ಮೂಡುವ ಮನೋಹರ, ಮನಮೋಹಕ ಚಿತ್ತಾರದ ಆಕೃತಿಯನ್ನು ಕಂಡು ಪುಳಕಿತಗೊಂಡರು.


ಶ್ರೀಕಂಠೇಶ್ವರಸ್ವಾಮಿಯ ಹೂವಿನ ಪಲ್ಲಕಿ ಉತ್ಸವ ಮೂರ್ತಿಯ ಮೆರವಣಿಗೆ.

ಬಾಣ ಬಿರುಸು ನೋಡುವ ಸಲುವಾಗಿಯೆ ತಾಲೂಕಿನ ಅಕ್ಕ-ಪಕ್ಕದ ಗ್ರಾಮ ಹಾಗೂ ನಗರದ ಪ್ರದೇಶದಿಂದ ಆಗಮಿಸಿದ ಭಕ್ತರು, ಮೈನವಿರೇಳಿಸುವ, ಹಾಗೂ ಕಣ್ಣು ಕೋರೈಸುವ ಬಣ್ಣ-ಬಣ್ಣದ ಚಿತ್ತಾರದ ಆಕಾಶದಲ್ಲಿ ನಡೆಯುವ ವಿಚಿತ್ರಗಳನ್ನು ನೋಡುತ್ತಾ ಮನರಂಜನೆಯಲ್ಲಿ ಮುಳುಗಿ ತಲ್ಲೀನರಾಗಿ ಚಪ್ಪಾಳೆ ಮೂಲಕ ಸ್ವಾಗತಿಸಿದರು.

ಮುಡಿ ಕಟ್ಟೆ ಹಾಗೂ ನಯನ ಕ್ಷತ್ರಿಯ ಮಂಡಳಿ ಕಾರ್ಯದರ್ಶಿ ಶ್ರೀನಿವಾಸ್ ಮಾತನಾಡಿ, ಕಳೆದ ಎರಡು ವರ್ಷಗಳಿಂದ ಸರ್ಕಾರ ಪಟಾಕಿಗೆ ನಿಷೇಧ ಹೇರಿದ್ದರಿಂದಾಗಿ ಬರೀ ಉತ್ಸವ ಪೂಜೆಗೆ ಮಾತ್ರ ಸೀಮಿತಗೊಳಿಸಲಾಗಿತ್ತು. ಈ ವರ್ಷ ಬಾಣ ಬಿರುಸು ಕಾರ್ಯಕ್ರಮವನ್ನು ನಡೆಸಿರುವುದು ಸಂತಸ ತಂದಿದೆ. ಈ ಕಾರ್ಯಕ್ರಮವು ನಯನ ಕ್ಷತ್ರಿಯರ ಸೇವಾರ್ಥ ಪ್ರತಿವರ್ಷ ವೈಶಿಷ್ಟಪೂರ್ಣವಾದ ಕಾರ್ಯಕ್ರಮವನ್ನು ನಡೆಸಲಾಗುತ್ತದೆ ಎಂದರು.

ಜಿಲ್ಲಾ ಸವಿತಾ ಸಮಾಜದ ಮುಖಂಡ ನಾಗೇಶ್ ಮಾತನಾಡಿ, ಕಳೆದ ನೂರಾರು ವರ್ಷಗಳಿಂದ ಪಾರಂಪರಿಕವಾಗಿ ನಯನ ಕ್ಷತ್ರಿಯ ಮಂಡಳಿಯವರು ಕಡೇ ಕಾರ್ತಿಕ ಸೋಮವಾರದಂದು ಶ್ರೀಕಂಠೇಶ್ವರ ಪಲ್ಲಕ್ಕಿ ಉತ್ಸವ ಮತ್ತು ಬಾಣ ಬಿರುಸುಗಳ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ ಎಂದರು. ಪಟಾಕಿ ಸಿಡಿಸುವ ಸಂಭ್ರಮದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.


ಇದೇ ಸಂದರ್ಭದಲ್ಲಿ ದೇಗುಲದ ಇಓ ಜಗದೀಶ್‌ಕುಮಾರ್, ನಯನ ಕ್ಷತ್ರಿಯ ಮಂಡಳಿ ಅಧ್ಯಕ್ಷ ರಾಚಪ್ಪ, ಮುಡಿಕಟ್ಟೆ ಮತ್ತು ನಯನ ಕ್ಷತ್ರಿಯ ಸಂಘದ ಕಾರ್ಯದರ್ಶಿ ಶ್ರೀನಿವಾಸ್, ಪ್ರಕಾಶ್, ಚಂದ್ರಶೇಖರ್, ಲೋಕಿ ಸೇರಿದಂತೆ ನಯನ ಕ್ಷತ್ರಿಯ ಮತ್ತು ಮುಡಿಕಟ್ಟೆ ಸಂಘದ ಪದಾಧಿಕಾರಿಗಳು ಮುಖಂಡರು ಹಾಗೂ ಅನೇಕ ಭಕ್ತರು ಉಪಸ್ಥಿತರಿದ್ದರು.

# ತಿ.ನರಸೀಪುರದಲ್ಲಿ ವಿಜೃಂಭಣೆಯ ಶ್ರೀಗುಂಜಾ ನರಸಿಂಹಸ್ವಾಮಿ ತೆಪ್ಪೋತ್ಸವ

ತಿ.ನರಸೀಪುರ, ನ.17– ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ಸೇವಾ ಸಮಿತಿಯಿಂದ ಕಾಶಿಗಿಂತ ಗುಲಗಂಜಿ ಗಾತ್ರವೆನಿಸಿರುವ ಕಾವೇರಿ ಕಪಿಲಾ ನದಿ ದಡದಲ್ಲಿರುವ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಕಾರ್ತಿಕ ಮಾಸದ 4ನೇ ವಾರ 14ನೇ ವರ್ಷದ ಲಕ್ಷ ದೀಪೋತ್ಸವ ಮತ್ತು ತೆಪ್ಪೋತ್ಸವ ಸೋಮವಾರ ರಾತ್ರಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ದೀಪೋತ್ಸವ ಮತ್ತು ತೆಪ್ಪೋತ್ಸವ ಅಂಗವಾಗಿ ಮುಂಜಾನೆಯಿಂದಲೇ ದೇವಾಲಯದಲ್ಲಿ ಶ್ರೀ ಗುಂಜಾ ನರಸಿಂಹ ಸ್ವಾಮಿ ಅವರಿಗೆ ಹೋಮ ಹವನದೊಂದಿಗೆ ವಿವಿಧ ಅಭಿಷೇಕ ನೆರವೇರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಮಾಡಲು ಅವಕಾಶ ಮಾಡಿಕೊಡಲಾಯಿತು.

ಅಲ್ಲದೇ ದೇವಾಲಯದ ಆವರಣದಲ್ಲಿ ನರಸಿಂಹಸ್ವಾಮಿ ಉತ್ಸವ ಮೂರ್ತಿ ಮೆರವಣಿಗೆ ನಡೆಸಲಾಯಿತು. ಈ ವೇಳೆ ಸೇವಾ ಸಮಿತಿ ವತಿಯಿಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.


ತಿ.ನರಸೀಪುರದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಕಪಿಲಾ ನದಿಯಲ್ಲಿ ತೆಪ್ಪೋತ್ಸವ ಸೋಮವಾರ ರಾತ್ರಿ ವಿಜೃಂಭಣೆಯಿಂದ ನೆರವೇರಿತು.

**ದೀಪೋತ್ಸವ, ತೆಪ್ಪೋತ್ಸವ:** ಶ್ರೀಗುಂಜಾ ನರಸಿಂಹಸ್ವಾಮಿ ಸೇವಾ ಸಮಿತಿಯಿಂದ ಸಂಜೆ ಲಕ್ಷ ದೀಪೋತ್ಸವಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಮಹಿಳೆಯರು, ಮಕ್ಕಳು ಸೇರಿದಂತೆ ಸಾರ್ವಜನಿಕರು ದೀಪ ಹಚ್ಚಿ ಸಂಭ್ರಮಿಸಿ, ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸಿದರು. ಅಲ್ಲದೇ ದೇವಾಲಯದ ಆವರಣವನ್ನು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದಲೂ ಅಲಂಕರಿಸಲಾಗಿತ್ತು. ಬಳಿಕ ಕಪಿಲಾ ನದಿಯಲ್ಲಿ ಬಗೆ ಬಗೆಯ ಹೂಗಳಿಂದ ಸಿಂಗರಿಸಿದ್ದ ತೆಪ್ಪದಲ್ಲಿ ಶ್ರೀಗುಂಜಾ ನರಸಿಂಹಸ್ವಾಮಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ನದಿಯಲ್ಲಿ ಮೂರು ಸುತ್ತು ಪ್ರದಕ್ಷಿಣೆ ಹಾಕುವ ಮೂಲಕ ಅದ್ಧೂರಿಯಾಗಿ ತೆಪ್ಪೋತ್ಸವ ನಡೆಸಲಾಯಿತು.

ಈ ವೇಳೆ ಕಪಿಲಾ ನದಿ ದಡದಲ್ಲಿ ನೆರೆದಿದ್ದ ಸಾವಿರಾರು ಭಕ್ತರು ತೆಪ್ಪೋತ್ಸವ ಕಣ್ತುಂಬಿಕೊಂಡು ತಮ್ಮ ಇಷ್ಟಾರ್ಥ ಸಿದ್ದಿಗಾಗಿ ನರಸಿಂಹ ಸ್ವಾಮಿಗೆ ಪ್ರಾರ್ಥನೆ ಸಲ್ಲಿಸಿದರು. ಅಲ್ಲದೇ ತೆಪ್ಪೋತ್ಸವದ ವೇಳೆ ಸಿಡಿದ ಬಾಣ ಬಿರುಸು ನೋಡುಗರ ಗಮನ ಸೆಳೆಯಿತು. ಈ ವೇಳೆ ದೇವಾಲಯದ ಅರ್ಚಕ ಶ್ರೀಧರ ಭಟ್ಟರು, ಪಾರುಪತ್ತೆಗಾರ್ ತಿರುಮಕೂಡಲು ದೀಪು. ಸಿಬ್ಬಂದಿಗಳು ಹಾಜರಿದ್ದರು.

# ಬಿಜೆಪಿ ಕಚೇರಿಯಲ್ಲಿ ಶ್ರೀ ಚನ್ನಬಸವಸ್ವಾಮೀಜಿ, ಸಾಲುಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ

ನಂಜನಗೂಡು, ನ.17– ಕಾಯಕ ಮತ್ತು ದಾಸೋಹದ ಮಹತ್ವವನ್ನು ಸಮಾಜಕ್ಕೆ ತಿಳಿಸಿಕೊಡುವ ಜೊತೆಗೆ ಸರಳ ಜೀವನ ಶೈಲಿಯ ಮೂಲಕ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಲಕ್ಷಾಂತರ ಸಂಖ್ಯೆಯ ಭಕ್ತರ ಆರಾಧ್ಯ ದೈವವಾಗಿ ಗುರು ಕಂಬಳೀಶ್ವರ ಮಠಾಧ್ಯಕ್ಷರಾದ ಶ್ರೀ ಚನ್ನಬಸವ ಸ್ವಾಮೀಜಿಯವರು ನೆಲೆಸಿದ್ದರು ಎಂದು ಮಾಜಿ ಶಾಸಕ ಹರ್ಷವರ್ಧನ್ ಹೇಳಿದರು.

ಅವರು ಸೋಮವಾರ ನಗರದ ಬಿಜೆಪಿ ಕಚೇರಿಯಲ್ಲಿ ಆಯೋಜಿಸಿದ್ದ ಶ್ರೀ ಚನ್ನಬಸವೇಶ್ವರ ಸ್ವಾಮೀಜಿ ಹಾಗೂ ಸಾಲುಮರದ ತಿಮ್ಮಕ್ಕ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಸಂತಾಪ ಸೂಚಿಸಿ ಮಾತನಾಡಿದರು.

ಚನ್ನಬಸವ ಸ್ವಾಮೀಜಿಯವರು ಭೌತಿಕವಾಗಿ ಮರೆಯಾಗಿದ್ದರೂ ಅವರು ನಡೆಸಿರುವ ಸಾಮಾಜಿಕ ಸೇವಾ ಕಾರ್ಯಗಳಿಂದಾಗಿ ಜನರ ಮನದಲ್ಲಿ ಸದಾ ಕಾಲಕ್ಕೂ ಉಳಿಯಲಿದ್ದಾರೆ. 2013ರಿಂದ ನನಗೆ ಸ್ವಾಮೀಜಿಯವರ ಪರಿಚಯವಿದ್ದು, ಆಗ ನಂಜನಗೂಡು ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ವಿ.ಶ್ರೀನಿವಾಸ್ ಪ್ರಸಾದ್ ಅವರು ಸ್ವಾಮೀಜಿಯವರ ಸೇವಾ ಕಾರ್ಯಗಳ ಬಗ್ಗೆ ಮಾಹಿತಿ ನೀಡಿದ್ದರು. ಆನಂತರ ನಾನು ಶಾಸಕನಾದ ಬಳಿಕ ಅವರೊಡನೆ ಹೆಚ್ಚು ಸಮಾಲೋಚನೆ ನಡೆಸಿದ್ದೇನೆ ಎಂದು ಸ್ಮರಿಸಿದರು. ಇದೇ ರೀತಿ ಪರಿಸರ ಪ್ರೇಮಿ ಸಾಲುಮರ ತಿಮ್ಮಕ್ಕನವರು ತನ್ನ ಜೀವನವನ್ನೇ ಪರಿಸರ ಉಳಿವಿಗೆ ಮುಡುಪಾಗಿಟ್ಟರು. ಅವರ ಪರಿಸರ ಪ್ರೇಮ ನಮ್ಮೆಲ್ಲರಿಗೂ ಮಾರ್ಗದರ್ಶನವಾಗಬೇಕು ಎಂದರು.



ಶ್ರೀ ಚೆನ್ನಬಸವಸ್ವಾಮೀಜಿ ಹಾಗೂ ಸಾಲುಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವೀರಶೈವ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಸಿ.ಬಸವಣ್ಣ, ಬಿಜೆಪಿ ನಗರಾಧ್ಯಕ್ಷ ಸಿದ್ದರಾಜು, ಬಾಲಚಂದ್ರ, ವಕೀಲ ಮಹೇಶ್‌ಬಾಬು, ಬದನವಾಳು ರಾಮು, ವಳಗೆರೆ ಪುಟ್ಟಸ್ವಾಮಿ, ನಂದಿನಿ ಮಾತನಾಡಿದರು. ಕಾರ್ಯಕ್ರಮದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಕೆಂಡಗಣ್ಣಪ್ಪ, ನಗರಸಭೆ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಸದಸ್ಯ ಮಹದೇವಪ್ರಸಾದ್, ನಿಕಟ ಪೂರ್ವ ಅಧ್ಯಕ್ಷ ಹೊರಳವಾಡಿ ಪಿ.ಮಹೇಶ್, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ, ಮುಖಂಡರಾದ ಶ್ರೀನಿವಾಸ್ ರೆಡ್ಡಿ, ವಳಗೆರೆ ಪುಟ್ಟಸ್ವಾಮಿ, ಗಿರೀಶ್, ಮಹೇಶ್, ಶಿವರುದ್ರ, ಶ್ರೀರಾಂಪುರ ಮಣಿ, ದೇವು, ಆನಂದಪುರ ಜಯರಾಮು, ಸೇರಿದಂತೆ ಹಲವರು ಭಾಗವಹಿಸಿದ್ದರು.

# ಕ್ಷೇತ್ರಕ್ಕೆ ಹೆಚ್ಚು ಅನುದಾನ ತಂದು ಅಭಿವೃದ್ಧಿಪಡಿಸುತ್ತಿದ್ದೇನೆ

## ಶಾಸಕ ಜಿ.ಡಿ.ಹರೀಶ್‌ಗೌಡ

ಹುಣಸೂರು, ನ.17– ಗ್ಯಾರಂಟಿ ಯೋಜನೆಯಿಂದಾಗಿ ಕ್ಷೇತ್ರಗಳಿಗೆ ಅನುದಾನದ ಕೊರತೆಯ ನಡುವೆಯೂ ಹುಣಸೂರು ಕ್ಷೇತ್ರಕ್ಕೆ ಹೆಚ್ಚು ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಶಾಸಕ ಜಿ.ಡಿ. ಹರೀಶ್‌ಗೌಡ ಹೇಳಿದರು.

ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಬಾಗವಹಿಸಿ, ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ 56 ಸಾವಿರ ಕೋಟಿ ಅನುದಾನ ನೀಡುತ್ತಿದ್ದು, ಇದರ ನಡುವೆಯೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿ ನಮ್ಮ ಕ್ಷೇತ್ರಕ್ಕೆ ಅನುದಾನ ತರುತ್ತಿರುವುದನ್ನು ಸಹಿಸದ ಕೆಲವರು ಇದಕ್ಕೂ ಅಡ್ಡಿಪಡಿಸುತ್ತಿದ್ದಾರೆ. ಇದರ ನಡುವೆಯೂ ಡಿಕೆಶಿ ನೀರಾವರಿಗೆ 140 ಕೋಟಿಗೂ ಹೆಚ್ಚು ಅನುದಾನವನ್ನು ನೀಡಿದ್ದಾರೆ ಎಂದರು.

ಸತತ 6 ಬಾರಿ ಗೆದ್ದಿರುವ ಕಾಂಗ್ರೆಸ್ ಪಕ್ಷದ ಬಿ.ಆರ್. ಪಾಟೀಲ್ ಹಾಗೂ ರಾಜು ಕಾಗೆಯವರು ಪ್ರತ್ಯೇಕ ಅನುದಾನ ಕೊಡಿ ಎಂದರೆ, ಗೃಹ ಸಚಿವರು ಸರ್ಕಾರದಲ್ಲಿ ಹಣವಿಲ್ಲ, ಎಂದು ಹೇಳುತ್ತಾರೆ. ಕೆ.ಆರ್.ನಗರದ ಶಾಸಕರು ಕೂಡ ನಮಗೆ ಅನುದಾನ ನೀಡುತ್ತಿಲ್ಲ ಎಂದು ತಮ್ಮ ನೋವನ್ನು ತೋಡಿಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಕ್ಷೇತ್ರಕ್ಕೆ ಹೆಚ್ಚು ಅನುದಾನ ತಂದು ಅಭಿವೃದ್ಧಿ ಮಾಡುತ್ತಿದ್ದೇನೆ ಎಂದರು.

ಹಿರೀಕ್ಯಾತನಹಳ್ಳಿ ಗ್ರಾಮದ ಕೆರೆ ರಸ್ತೆಯಲ್ಲಿ ವಾಹನಗಳು ಹೆಚ್ಚು ಓಡಾಡುವುದರಿಂದ ಅದರ ವಿಸ್ತರಣೆಗೆ 2 ಕೋಟಿ ಅನುದಾನದಲ್ಲಿ ಟೆಂಡರ್ ಕರೆಯಲಾಗುವುದು. ಗ್ರಾಮದಲ್ಲಿ ಹತ್ತಾರು ಬಡಾವಣೆಗಳಿದ್ದು, ಹಲವು ಬಡಾವಣೆಗಳಲ್ಲಿ ಮನೆಗಳಿಗೆ ನಿರಂತರ ಜ್ಯೋತಿ ಕಲ್ಪಿಸಲಾಗುವುದು. ಈಗಾಗಲೇ 50 ಲಕ್ಷ ರೂ ವೆಚ್ಚದಲ್ಲಿ ಪಶು ಆಸ್ಪತ್ರೆ ನಿರ್ಮಾಣಕ್ಕೆ ಟೆಂಡರ್ ಆಗಿ ಇಷ್ಟರಲ್ಲೇ ಪಶು ಸಂಗೋಪನಾ ಸಚಿವರಿಂದ ಭೂಮಿ ಪೂಜೆ ನೆರವೇರಿಸಲಾಗುವುದು ಎಂದರು.


ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಹಿರೀಕ್ಯಾತನಹಳ್ಳಿ ಗ್ರಾಮಸ್ಥರು ಸನ್ಮಾನಿಸಿದರು.

ಗ್ರಾಮದ ಎರಡು ರಸ್ತೆಗಳು ಹಾಗೂ ಚರಂಡಿ ನಿರ್ಮಾಣದ ಜೊತೆಗೆ ಹೆಚ್ಚು ಆದ್ಯತೆ ನೀಡುವುದರ ಜೊತೆಗೆ ರೈತರು ಜಮೀನಿಗೆ ಹೋಗುವ ರಸ್ತೆ ಕಾಮಗಾರಿ ಕೆಲಸ ಪ್ರಾರಂಭಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಚುನಾವಣಾ ಮುನ್ನ ನೀಡಿದ ಭರವಸೆಯಂತೆ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಶ್ರೀ ಮಲೈ ಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ 10 ಲಕ್ಷ ರೂಗಳನ್ನು ವೈಯಕ್ತಿಕವಾಗಿ ನೆರವು ನೀಡಿದರು.

ಸಮಾಜ ಸೇವಕ ಹಾಗೂ ತಾಲೂಕು ಜೆಡಿಎಸ್ ಮುಖಂಡ ಹರವೆ ಶ್ರೀಧರ್ 1 ಲಕ್ಷ, ದಿವಂಗತ ಎಸ್. ಚಿಕ್ಕಮಾದುರವರ ಪುತ್ರಿ ರಂಜಿತ ಚಿಕ್ಕಮಾದು ಅವರು ದೇವಸ್ಥಾನಕ್ಕೆ 50 ಸಾವಿರ ದೇಣಿಗೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಮಣಿ ಯಮ್ಮ, ಮಾಜಿ ಶಾಸಕ ದಿ.ಕೋಡಿ ಪಾಪಣ್ಣರವರ ಪುತ್ರ ಸತೀಶ್ ಪಾಪಣ್ಣ, ಗ್ರಾಮದ ಯಜಮಾನರಾದ ಜಗದೀಶ್ ಪಾಪಣ್ಣ, ಮುಖಂಡರುಗಳಾದ ವಿಜಯ ಕುಮಾರ್, ನಾಗೇಶ್, ಪುಟ್ಟರಾಜು, ಶ್ರೀಧರ್, ಸತೀಶ್ ಕಾಳೇಗೌಡ, ಪ್ರಕಾಶ್ ಸೇರಿದಂತೆ ಹಲವಾರು ಮುಖಂಡರು ಗ್ರಾಮಸ್ಥರು ಹಾಜರಿದ್ದರು.

## ಹುಟ್ಟು ಹಬ್ಬದ ಶುಭ ಹಾರೈಕೆ


ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ ಅಶ್ವಿನ್‌ಕುಮಾರ್ ಅವರ ಹುಟ್ಟು ಹಬ್ಬಕ್ಕೆ ಬಿಜೆಪಿ ಹಿರಿಯ ಮುಖಂಡ ಕೆಂಪಯ್ಯನಹುಂಡಿ ಅಂದಾನಿ ಗೌಡ ಶುಭ ಹಾರೈಸಿದರು. ಈ ವೇಳೆ ಶಾಸಕ ಜಿ.ಡಿ.ಹರೀಶ್ ಗೌಡ, ಮಾಜಿ ಶಾಸಕ ಕೆ ಮಹದೇವ್, ಯರಗನಹಳ್ಳಿ ಮಹೇಶ್, ಬೋಗಾದಿ ಸುರೇಶ್, ಟಿ ರವಿ, ಸುರೇಶ್ ಇನ್ನಿತರರಿದ್ದರು

## ಕೆ.ಆರ್.ನಗರದಲ್ಲಿ ನ.22ಕ್ಕೆ ಚಿತ್ರಕಲಾ ಸ್ಪರ್ಧೆ

ಕೆ.ಆರ್.ನಗರ, ನ.17– ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಮೈಸೂರು ದೃಶ್ಯ ಕಲಾವಿದರ ಸಂಘದ ವತಿಯಿಂದ ಇಲ್ಲಿನ ವಾಲ್ಮೀಕಿ ಸಮುದಾಯ ಭವನದಲ್ಲಿ ನ.22ರಂದು ಬೆಳಿಗ್ಗೆ 9.30ಕ್ಕೆ ಶಾಲಾ ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಎಂ.ಬಾಲಸ್ವಾಮಿ ತಿಳಿಸಿದ್ದಾರೆ. ಸಂಘ ನೀಡುವ ವಿಷಯ ಆಧಾರದ ಮೇಲೆ ಸ್ಥಳದಲ್ಲಿಯೇ ಚಿತ್ರ ರಚಿಸಬೇಕು. ವಿಜೇತರಿಗೆ ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರ ನೀಡಲಾಗುತ್ತದೆ. ಸ್ಪರ್ಧೆಗೆ ಬೇಕಾಗುವ ಬಣ್ಣ, ಬಣ್ಣದ ಪೆನ್ಸಿಲ್, ಬ್ರಷ್ ಹಾಗೂ ಇನ್ನಿತರ ಪರಿಕರಗಳನ್ನು ಸ್ಪರ್ಧಿಗಳೇ ತರಬೇಕು. ಆಸಕ್ತರು ನ.21ರೊಳಗೆ ದೂ. 9008963333, 9686616819ಗೆ ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ.

# ಕಸ್ತೂರ್‌ಬಾ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಡಾರ್ಮೆಟರಿ ಕಟ್ಟಡ ಉದ್ಘಾಟನೆ

ನಂಜನಗೂಡು, ನ.17– ನಗರದ ಕಸ್ತೂರ್‌ಬಾ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ 1.08 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಡಾರ್ಮೆಟರಿ ಕಟ್ಟಡವನ್ನು ಶಾಸಕ ದರ್ಶನ್ ಧ್ರುವನಾರಾಯಣ ಉದ್ಘಾಟಿಸಿದರು.

ನಂತರ ಅವರು ಮಾತನಾಡಿ, ಬಡತನ ರೇಖೆಗಿಂತ ಕೆಳಗಿರುವ ಬಡವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ 2004ರಲ್ಲಿ ಕಸ್ತೂರಿ ಬಾ ಶಾಲೆಗಳನ್ನು ತೆರೆಯಲಾಯಿತು, ನಂಜನಗೂಡಿನಲ್ಲಿರುವ ಕೆಜಿಬಿವಿ ಶಾಲೆಯಲ್ಲಿ ಸಾಕಷ್ಟು ಕೊಠಡಿಗಳ ಲಭ್ಯವಿಲ್ಲದ ಕಾರಣ ವಸತಿ ಸಮಸ್ಯೆ ಹೆಚ್ಚಾಗಿತ್ತು, ಅದನ್ನು ಪರಿಹರಿಸುವ ಸಲುವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯರವರ ಮನ ವೊಲಿಸಿ ಕಳೆದ ಫೆಬ್ರವರಿ ತಿಂಗಳಲ್ಲಿ ಒಂದು ಕೋಟಿ ಎಂಟು ಲಕ್ಷ ವೆಚ್ಚದಲ್ಲಿ ಡಾರ್ಮೆಟರಿ ಕಟ್ಟಡ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿತ್ತು. 9 ತಿಂಗಳ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಂಡಿದೆ, ಆದರೆ, ಶೌಚಾಲಯದಲ್ಲಿ ಅಳವಡಿಸಿರುವ ಪರಿಕರಗಳು ಗುಣಮಟ್ಟದಿಂದ ಇಲ್ಲವಾದ ಕಾರಣ ಅದನ್ನು ಬದಲಾಯಿಸಿ, ಗುಣಮಟ್ಟದ ಪರಿಕರ ಅಳವಡಿಸುವಂತೆ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ರವರಿಗೆ ಸೂಚನೆ ನೀಡಲಾಗಿದೆ ಎಂದರು



ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವ ಶಾಸಕ ದರ್ಶನ್ ದ್ರುವನಾರಾಯಣ್.

ಚಳಿಗಾಲದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸೋಲಾರ್ ಅಳವಡಿಸಿ ಶೌಚಾಲಯದಲ್ಲಿ ಬಿಸಿನೀರು ಪೂರೈಸಲು ಕ್ರಮವಹಿಸುವಂತೆ ಸೂಚನೆ ನೀಡಲಾಗಿದೆ ಎಂದರಲ್ಲದೆ, ಈ ಕಟ್ಟಡ ಉದ್ಘಾಟನೆ ಗೊಂಡಿರುವುದರಿಂದ ಇಲ್ಲಿ ವ್ಯಾಸಂಗ ಮಾಡುವ ಬಾಲಕಿಯರಿಗೆ ವಸತಿ ಸಮಸ್ಯೆ ಬಗೆಹರಿಯಲಿದೆ. ಮುಂದಿನ ದಿನಗಳಲ್ಲಿ ಅವಶ್ಯಕವಾದ ಮೂಲ ಸೌಕರ್ಯಗಳನ್ನು ಒದಗಿಸಲಾಗುವುದು ಎಂದು ಭರವಸೆ ನೀಡಿದರು.

# ವಾಣಿಜ್ಯ ಬೆಳೆಗಳಿಗೆ ಪ್ರಾಮುಖ್ಯತೆ ನೀಡಿದರೆ ಉತ್ತಮ ಫಲಿತಾಶ

## ತೋಟಗಾರಿಕೆ ಇಲಾಖೆ ಅಪರ ನಿರ್ದೇಶಕ ಎಂ.ಪ್ರಕಾಶ್ ಸಲಹೆ

ಬನ್ನೂರು, ನ.17– ದೇಶದ ಪ್ರತಿಯೊಬ್ಬ ರೈತರೂ ಸಾವಯವ ಕೃಷಿ ಮಾಡಿ, ವಾಣಿಜ್ಯ ಬೆಳೆಗಳಿಗೆ ಪ್ರಾಮುಖ್ಯತೆ ನೀಡಿ ವ್ಯವಸಾಯ ಮಾಡಿದರೆ ಉತ್ತಮ ಫಲಿತಾಂಶ ಪಡೆಯಬಹುದು ಎಂದು ತೋಟಗಾರಿಕೆ ಇಲಾಖೆ ಅಪರ ನಿರ್ದೇಶಕ ಎಂ.ಪ್ರಕಾಶ್ ಸಲಹೆ ನೀಡಿದರು.

ಪಟ್ಟಣದ ಸಮೀಪದ ಯಾಚೇನಹಳ್ಳಿ ಗ್ರಾಮದಲ್ಲಿರುವ ಅರ್ಚನಾ ಫಾರಂನಲ್ಲಿ ಮೈಸೂರು ಆಕಾಶವಾಣಿ, ಅಗ್ರಿಯಾನ ಟೂರಿಸಂ ಪ್ರೈ.ಲಿಮಿಟೆಡ್, ವಿಶ್ವೇಶ್ವರಯ್ಯ ಡೆವಲಪ್‌ಮೆಂಟ್, ಮೈಸೂರು ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಾಥಮಿಕ ಸಹಕಾರ ಸಂಘಗಳ ಒಕ್ಕೂಟ, ಸಮುದ್ಯತಾ ಶ್ರೋತೃ ಸಂಘದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಬಾನುಲಿ ಕೃಷಿ ಬೆಳಗು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.


ವೈ.ಎಸ್.ರಾಮಸ್ವಾಮಿ ದಂಪತಿಯನ್ನು ಸನ್ಮಾನಿಸಲಾಯಿತು.

ಹಳೆಯ ಪದ್ದತಿಯಂತೆ ಕೃಷಿ ಮಾಡುವ ಬದಲು ವಾಣಿಜ್ಯ ಬೆಳೆಗಳು ಸೇರಿದಂತೆ ವಿವಿಧ ತೋಟಗಾರಿಕಾ ಬೆಳೆಗಳಿಗೆ ಪ್ರಾಮುಖ್ಯತೆ ನೀಡುವ ಮೂಲಕ ವ್ಯವಸಾಯದಲ್ಲಿ ಉತ್ತಮ ಫಲಿತಾಂಶ ಕಾಣಬಹುದು ಎಂದು ತಿಳಿಸಿದರು.

ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಅರ್ಚನಾ ಫಾರಂನ ಮುಖ್ಯಸ್ಥ ವೈ.ಎಸ್.ರಾಮಸ್ವಾಮಿ, ಹೆಚ್.ಆರ್. ಮಂಜುಳಾ ದಂಪತಿಗೆ 'ಕೃಷಿ ರತ್ನ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ವಿವೇಕಾನಂದ ಶಿಕ್ಷಣ ಸಂಸ್ಥೆಯ ಎಂ. ಪ್ರಕಾಶ್, ಆಯುರ್ವೇದ ವೈದ್ಯ ಡಾ.ಗುರು ಬಸವರಾಜು, ಸಾರ್ವಜನಿಕ ಆರೋಗ್ಯ ಇಲಾಖೆಯ ನಿವೃತ್ತ ಕಾರ್ಯದರ್ಶಿ ಡಾ.ಪಿ. ಬೋರೇಗೌಡ, ಐಪಿಎಸ್ ಅಧಿಕಾರಿ ಟಿ.ಪಿ. ಶಿವಕುಮಾರ್, ಇನ್ವೆಂಟಿಕ್ ಇನ್ಫೋ ಸಲ್ಯೂಷನ್ ಮುಖ್ಯ ಕಾರ್ಯ ನಿರ್ವಾಹಕ ವೈ.ಎಸ್. ಕೆಂಪೇಗೌಡ, ಆಕಾಶವಾಣಿ ಕೃಷಿ ಕಾರ್ಯಕ್ರಮ ನಿರ್ವಾಹಕ ಎನ್.ಕೇಶವಮೂರ್ತಿ, ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘಗಳ ಒಕ್ಕೂಟದ ನಿರ್ದೇಶಕ ರಂಗಸಮುದ್ರ ಪಿ. ರಮೇಶ್, ಸಮುದ್ಯತಾ ಶ್ರೋತೃ ಸಂಘದ ಅಧ್ಯಕ್ಷ ಕಣ್ಣೂರು ವಿ.ಗೋವಿಂದಚಾರಿ, ಆಕಾಶವಾಣಿ ನಿವೃತ್ತ ಸಹಾಯಕ ನಿರ್ದೇಶಕ ವಿದ್ಯಾಶಂಕರ್, ನೇಗಿಲಯೋಗಿ ರವಿಕುಮಾರ, ಯಾಚೇನಹಳ್ಳಿ ಗ್ರಾಪಂ ಅಧ್ಯಕ್ಷ ಶಿವಣ್ಣ ಹಾಗೂ ಸದಸ್ಯರು ಇದ್ದರು.

## ಬೆಣಗನಹಳ್ಳಿಯಲ್ಲಿ ಉಚಿತ ಅರೋಗ್ಯ ತಪಾಸಣಾ ಶಿಬಿರ

ಕಂಪಲಾಪುರ, ನ.17– ಡೆಕ್ಕನ್ ಟೊಬ್ಯಾಕೋ ಕಂಪನಿ ಸಹಯೋಗದಲ್ಲಿ ಮೈಕಾಪ್ಸ್ ಹಾಗೂ ಆರೋಗ್ಯ ಇಲಾಖೆ ವತಿಯಿಂದ ಸಮೀಪದ ಬೆಣಗನಹಳ್ಳಿ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಶಿಬಿರದಲ್ಲಿ 120 ಮಂದಿಗೆ ಆರೋಗ್ಯ ತಪಾಸಣೆ ಮಾಡಲಾಯಿತು. ನೇತ್ರ ತಪಾಸಣೆಯಲ್ಲಿ 40 ಮಂದಿಗೆ ಕನ್ನಡಕ ನೀಡಲಾಯಿತು. 25 ಮಂದಿಯನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು.

ಕಾರ್ಯಕ್ರಮದಲ್ಲಿ ಡೆಕ್ಕನ್ ಕಂಪನಿ ಮ್ಯಾನೇಜರ್ ಅಫ್ರೋಜ್ ಪಾಷಾ, ಮೈಕಾಪ್ಸ್‌ನ ಕಾರ್ಯಕಾರಿ ನಿರ್ದೇಶಕ ಅಶ್ರಫುಲ್ಲಾ ಖಾನ್, ಆರೋಗ್ಯ ಇಲಾಖೆಯ ಡಾ. ನಟರಾಜ್ ಸೇರಿದಂತೆ ಹಲವು ರೈತರು ಹಾಜರಿದ್ದರು.

# ವಿಜೃಂಭಣೆಯ ಶ್ರೀ ಬಿಳಿಕೆರೆ ಮಹದೇಶ್ವರ ರಥೋತ್ಸವ

ಸುತ್ತೂರು, ನ.17– ನಂಜನಗೂಡು ತಾಲೂಕು ಹದಿನಾರು ಗ್ರಾಮದಲ್ಲಿ ಜೀರ್ಣೋದ್ದಾರಗೊಂಡು ನಿರ್ಮಾಣವಾಗಿರುವ ಶ್ರೀ ಬಿಳಿಕೆರೆ ಮಹದೇಶ್ವರ ದೇವಸ್ಥಾನದಲ್ಲಿ ಇಂದು ರಥೋತ್ಸವ ವಿಜೃಂಭಣೆಯಿಂದ ನೆರವೇರಿತು. ಇದೇ ವೇಳೆ ಸುತ್ತೂರು ಶ್ರೀಗಳು ಧಾರ್ಮಿಕ ಸಭೆ ಉದ್ಘಾಟನೆ ಮಾಡಿದರು.

ಇಂದು ಮುಂಜಾನೆಯಿಂದಲೇ ದೇವಾಲಯದಲ್ಲಿ ಶ್ರೀ ಮಹದೇಶ್ವರ ಸ್ವಾಮಿಗೆ ವಿಶೇಷ ಅಭಿಷೇಕ, ಹೂವಿನ ಅಲಂಕಾರ, ಹೋಮ ಹವನಗಳು ಸೇರಿದಂತೆ ಹಲವಾರು ಧಾರ್ಮಿಕ ಕೈಂಕರ್ಯಗಳು ನಡೆಯಿತು.

ನಂತರ ಸುತ್ತೂರು ಶ್ರೀಗಳು ಮಾತನಾಡುತ್ತಾ, ಈ ದೇವಸ್ಥಾನವು ಶಿಥಿಲಗೊಂಡಿತ್ತು. ಆ ವೇಳೆ ಇದೇ ಗ್ರಾಮದವರಾದ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಹದಿನಾರು ಗ್ರಾಮಸ್ಥರ ಇಚ್ಛೆಯಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೆಚ್ಚಿನ ಕಾಳಜಿ ವಹಿಸಿ ಮನರ್ ನಿರ್ಮಾಣಗೊಳಿಸಿದ್ದು, ರಾಜಗೋಪುರ, ಕಲ್ಯಾಣಮಂಟಪ, ಶೌಚಾಲಯ, ಕಛೇರಿ, ಕಲ್ಯಾಣಿ, ವಿಶ್ರಾಂತಿ ಗೃಹ, ಸೇರಿದಂತೆ ಜೀರ್ಣೋದ್ದಾರಗೊಳಿಸಲಾಗಿದ್ದು, ಮುಂದಿನ ದಿನಗಳಲ್ಲಿ ಸುತ್ತಮುತ್ತಲ ಗ್ರಾಮಗಳ ಭಕ್ತರುಗಳಿಗೆ ವಿಶೇಷ ಧಾರ್ಮಿಕ ಕೇಂದ್ರವಾಗಲಿದ್ದು, ಪ್ರವಾಸಿ ತಾಣವಾಗಲಿದೆ ಎಂದು ಭಕ್ತರಿಗೆ ಆಶೀರ್ವಚನ ನೀಡಿದರು.


ನಂಜನಗೂಡು ತಾಲೂಕಿನ ಹದಿನಾರು ಗ್ರಾಮದ ಶ್ರೀ ಬಿಳಿಕೆರೆ ಮಹದೇಶ್ವರ ರಥೋತ್ಸವ

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಮಾತನಾಡುತ್ತಾ, ಗ್ರಾಮಗಳಲ್ಲಿ ದೇವಾಲಯಗಳು ಅಭಿವೃದ್ಧಿಗೊಂಡರೆ ಜನರಿಗೆ ಶಾಂತಿ ಸೌಹಾರ್ದತೆಯನ್ನು ರೂಪಿಸಿಕೊಳ್ಳಲು ಉತ್ತಮ ಪರಿಸರ ನಿರ್ಮಾಣವಾದಂತಾಗುತ್ತದೆ ಹಾಗೂ ಗ್ರಾಮವು ಧಾರ್ಮಿಕ ಪ್ರವಾಸಿ ಕೇಂದ್ರವಾಗಲು ಅನುಕೂಲಕರವಾಗಿದೆ ಎಂದರು.

ಇದೇ ವೇಳೆ ವೀರಶೈವ ಮಹಾಸಭಾದ ನಿರ್ದೇಶಕರಾಗಿ ಆಯ್ಕೆಗೊಂಡಿರುವ ಹೆಚ್.ಎನ್.ನಂಜಪ್ಪ ಹಾಗೂ ಗ್ರಾಮದ ಗೌಡರಾದ ಶಿವಣ್ಣ ಮತ್ತು ದೇವಸ್ಥಾನ ಕಾಮಗಾರಿಯ ಗುತ್ತಿಗೆದಾರ ಮಾಲಂಗಿ ನಾಗರಾಜು ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ವಿವಿಧ ಮಠಾಧಿಪತಿಗಳು, ಜಿಲ್ಲಾ ಉಸ್ತುವಾರಿ ಸಚಿವ ಡಾ|.ಮಹದೇವಪ್ಪ ಅವರ ಪತ್ನಿ ವಿನೋದಮ್ಮ, ಚಾಮರಾಜನಗರ ಡಿಸಿಸಿ ಕಾರ್ಯದರ್ಶಿ ರಮ್ಯ, ಗ್ರಾಮದ ಗೌ|.ಶಿವಣ್ಣ, ಜಿ.ಪಂ ಮಾಜಿ ಸದಸ್ಯ ಹೆಚ್.ಎನ್.ನಂಜಪ್ಪ, ಗ್ರಾ.ಪಂ ಮಾಜಿ ಅಧ್ಯಕ್ಷ ಬಸವಣ್ಣ, ಅಭಿ, ಗುರುಮಲ್ಲಪ್ಪ ಶಿವಕುಮಾರ್, ಪ್ರವೀಣ್ ಕುಮಾರ್, ಡಿ.ಕೆ.ಶಿವಕುಮಾರ, ಮಹೇಶ್ ಸೇರಿದಂತೆ ಅಕ್ಕ ಪಕ್ಕ ಗ್ರಾಮಗಳ ಸಾವಿರಾರು ಸಂಖ್ಯೆಯ ಭಕ್ತಾದಿಗಳು, ಗ್ರಾಮದ ಎಲ್ಲಾ ಮುಖಂಡರುಗಳು, ಯುವಕ ಸಂಘದ ಪದಾಧಿಕಾರಿಗಳು, ಸಾರ್ವಜನಿಕರು, ಗ್ರಾಮಸ್ಥರು ಪಾಲ್ಗೊಂಡಿದ್ದರು. ಇದೇ ವೇಳೆ ಭಕ್ತಾದಿಗಳಿಗೆ ದೇವಾಲಯ ಸೇವಾ ಸಮಿತಿಯ ವತಿಯಿಂದ ಅನ್ನಸಂತರ್ಪಣೆ ನೆರವೇರಿಸಲಾಯಿತು.

# ಮಂಟಿಬಿಳಗುಲಿ ಡೇರಿ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ


ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು.

ಬೆಟ್ಟದಪುರ, ನ.17– ಪಿರಿಯಾಪಟ್ಟಣ ತಾಲೂಕಿನ ಮಂಟಿಬಿಳಗುಲಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಗಳಿಗೆ ಸೋಮವಾರ ಚುನಾವಣೆ ನಡೆಯಿತು.

ಅಧ್ಯಕ್ಷ ಸ್ಥಾನಕ್ಕೆ ರಾಮೇಗೌಡ, ಉಪಾಧ್ಯಕ್ಷರ ಸ್ಥಾನಕ್ಕೆ ಮಲ್ಲೇಶ್ ಮಾತ್ರ ನಾಮ ಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಹಿತೇಂದ್ರ ಅವರು ಇವರಿಬ್ಬರ ಅವಿರೋಧ ಆಯ್ಕೆ ಘೋಷಣೆ ಮಾಡಿದರು.

ಜಯ ಕರ್ನಾಟಕ ಸಂಘಟನೆ ತಾಲೂಕು ಅಧ್ಯಕ್ಷ ಕುಮಾರ್ ನಾಯಕ್, ಮಾಜಿ ಅಧ್ಯಕ್ಷರಾದ ತಮ್ಮೇಗೌಡ, ಕುಮಾರ್, ನಿರ್ದೇಶಕರಾದ ಸುರೇಶ್, ಕಾಳೇಗೌಡ, ಗೋವಿಂದೇಗೌಡ, ಜಗದೀಶ್, ಗೌರಮ್ಮ, ಮಹಾದೇವಮ್ಮ, ಆನಂದ್ ಕುಮಾರ್, ರವೀಂದ್ರ, ಗಾಪಂ ಸದಸ್ಯ ಕಿರಣ್, ಹಾಲು ಉತ್ಪಾದಕರ ಸಹಕಾರ ಸಂಘದ ಮುಖಂಡರಾದ ಶಿವಣ್ಣೇಗೌಡ, ಎಂಎಸ್ ಮಲ್ಲೇಶ್, ಸುಬ್ಬು, ರಾಜೇಗೌಡ, ರಾಜು, ಇಕ್ರೆಗೌಡ, ಮಂಜು, ಪ್ರಕಾಶ್, ಲೋಕೇಶ್, ಮರೀಗೌಡ, ಕಾಳೇಗೌಡ ಹಾಜರಿದ್ದರು.

# ಸುಸ್ಥಿರ ಮೆದುಳಿನ ಆರೋಗ್ಯ ಕುರಿತು ಶಾಲಾ-ಕಾಲೇಜಲ್ಲಿ ಕಲಿಕೆ ಅಗತ್ಯ

## ಪಾಂಡಿಚೇರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಪಿ.ಪ್ರಕಾಶ್ ಬಾಬು ಸಲಹೆ

ಮೈಸೂರು, ನ.17(ಬಿಎಲ್‌ಯು)- ಸುಸ್ಥಿರ ಮೆದುಳಿನ ಆರೋಗ್ಯದ ಬಗ್ಗೆ ಶಾಲಾ-ಕಾಲೇಜುಗಳಲ್ಲಿ ಕಲಿಕೆ ಅಗತ್ಯ ಎಂದು ಪಾಂಡಿಚೇರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಪಿ.ಪ್ರಕಾಶ್ ಬಾಬು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಬನ್ನಿಮಂಟಪದ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಇಂದು ಜೆಎಸ್‌ಎಸ್-ಎಸ್‌ಎನ್ ಸಿಐ-ಕಾನ್ 2025 ಆಯೋಜಿಸಿದ್ದ ಸುಸ್ಥಿರ ಮಿದುಳಿನ ಆರೋಗ್ಯ, ನರ ರಸಾಯನ ಶಾಸ್ತ್ರ ಮತ್ತು ನರ ಔಷಧಶಾಸ್ತ್ರದಲ್ಲಿ ಪ್ರಗತಿ ಕುರಿತ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯನ ಆರೋಗ್ಯ ಚೆನ್ನಾಗಿರಬೇಕಾದರೆ, ಮೆದುಳಿನ ಆರೋಗ್ಯ ಕೂಡ ಚೆನ್ನಾಗಿರಬೇಕು. ಈ ಹಿನ್ನೆಲೆಯಲ್ಲಿ ಮೆದುಳಿನ ಆರೋಗ್ಯದ ಬಗ್ಗೆ ವಿದ್ಯಾರ್ಥಿ ದೆಸೆಯಲ್ಲೇ ಅರಿವು ಮೂಡಿಸಬೇಕು ಎಂದು ಹೇಳಿದರು.

ಭಾರತದಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದೆ. ಈ ದೇಶದ ಮನುಷ್ಯನ ಜೀವಿತಾವಧಿ 78 ರಿಂದ 88 ವರ್ಷ. ವಯಸ್ಸಾದಂತೆ ಮೆದುಳಿನ ಸಮಸ್ಯೆ ಎದುರಾಗುತ್ತದೆ. ಬಹಳಷ್ಟು ಜನರು ಮರೆವಿನ ಖಾಯಿಲೆ ಸೇರಿದಂತೆ ಮೆದುಳಿಗೆ ಸಂಬಂಧಿಸಿದ ಹಲವು ರೋಗಗಳಿಂದ ಬಳಲುತ್ತಿದ್ದಾರೆ.



ಮೈಸೂರಿನ ಬನ್ನಿಮಂಟಪದ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಸೋಮವಾರ ಜೆಎಸ್‌ಎಸ್-ಎಸ್‌ಎನ್ ಸಿಐ-ಕಾನ್ 2025 ಆಯೋಜಿಸಿದ್ದ ಸುಸ್ಥಿರ ಮಿದುಳಿನ ಆರೋಗ್ಯ, ನರ ರಸಾಯನಶಾಸ್ತ್ರ ಮತ್ತು ನರ ಔಷಧ ಶಾಸ್ತ್ರದಲ್ಲಿ ಪ್ರಗತಿ ಕುರಿತ ಅಂತರಾಷ್ಟ್ರೀಯ ಸಮ್ಮೇಳನವನ್ನು ಪಾಂಡಿಚೇರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಪಿ.ಪ್ರಕಾಶ್ ಬಾಬು ಉದ್ಘಾಟಿಸಿದರು.

ರೋಗ ಉಲ್ಬಣಗೊಂಡು ಮೆದುಳಿಗೆ ತೀವ್ರ ರೀತಿಯ ಹಾನಿಯಾಗುತ್ತದೆ. ಈ ಹಿನ್ನೆಲೆ ಮೆದುಳಿನ ಆರೋಗ್ಯದ ಮಹತ್ವವನ್ನು ತಿಳಿಸಬೇಕು ಎಂದು ಡಾ.ಪ್ರಕಾಶ್ ಬಾಬು ಸಲಹೆಯಿತ್ತರು.

ರೋಗಗಳು ಬಂದಾಗ ಔಷಧೋಪಚಾರ ಪಡೆಯುವ ಬದಲು, ರೋಗ ಬರುವ ಮುನ್ನವೆ ಎಚ್ಚೆತ್ತುಕೊಂಡು ಚಿಕಿತ್ಸೆ ಪಡೆದರೆ ಆರೋಗ್ಯದ ಮೇಲೆ ಮುಂದೆ ಆಗಬಹುದಾದ ತೊಂದರೆಯನ್ನು ನಿವಾರಣೆ ಮಾಡಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿ ದೆಸೆಯಲ್ಲೆ ಮಕ್ಕಳಿಗೆ ಮೆದುಳಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಜಾಗೃತಿ ಅತ್ಯವಶ್ಯ ಎಂದು ಅಭಿಪ್ರಾಯಪಟ್ಟರು.

ಎಐ (ಕೃತಕ ಬುದ್ಧಿಮತ್ತೆ) ಆಧಾರಿತ ಆವಿಷ್ಕಾರದಿಂದ ನಾವು ಪರಿವರ್ತಿತ ಬದಲಾವಣೆಗಳಿಗೆ ಸಾಕ್ಷಿಯಾಗಿದ್ದೇವೆ. ಈ ಹಿನ್ನೆಲೆ ಆಧುನಿಕ ತಂತ್ರಜ್ಞಾನ ಆಧಾರಿತ ಚಿಕಿತ್ಸಾ ಸೌಲಭ್ಯವನ್ನು ತಿಳಿದುಕೊಳ್ಳಬೇಕು. ಶೀಘ್ರ ರೋಗ ನಿರ್ಣಯ ಮಾಡಿ, ಪರಿಣಾಮಕಾರಿ ಚಿಕಿತ್ಸೆ ನೀಡುವ ಮೂಲಕ ಮಿದುಳಿಗೆ ಸಂಬಂಧಿಸಿದ ರೋಗಗಳನ್ನು ಗುಣಪಡಿಸಬೇಕು ಎಂದು ಡಾ. ಪ್ರಕಾಶ್ ಬಾಬು ಸಲಹೆ ನೀಡಿದರು.

ಇದೇ ವೇಳೆ ಮಾತನಾಡಿದ ನರ ರೋಗ ಶಾಸ್ತ್ರ ತಜ್ಞ ವೈದ್ಯ ಡಾ.ರವಿ, ಇಂದು ಚಿಕ್ಕ ವಯಸ್ಸಿನ ಮಕ್ಕಳಲ್ಲೆ ಮೆದುಳಿಗೆ ಸಂಬಂಧಿಸಿದ ರೋಗಗಳು ಬರುತ್ತಿವೆ.. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಸ್ವಾಸ್ಥ್ಯ ಆರೋಗ್ಯ ಕಾಪಾಡುವುದು ದೊಡ್ಡ ಸಮಸ್ಯೆಯಾಗಿದೆ. ಈ ಮೂಲಕ ಭಾರತದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಎದುರಾಗುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ತಿಳಿಸಿದರು.

ಅಂತರಾಷ್ಟ್ರೀಯ ಸಮ್ಮೇಳನದಲ್ಲಿ 13 ದೇಶಗಳ ಹಾಗೂ ಭಾರತದ ಹಲವು ರಾಜ್ಯಗಳ 135 ಪ್ರತಿನಿಧಿಗಳು ಭಾಗ ವಹಿಸಿದ್ದರು. ಮೆದುಳಿಗೆ ಸಂಬಂಧಿಸಿದಂತೆ 43 ವಿಚಾರಗಳನ್ನು ಮಂಡನೆ ಮಾಡಿದ್ದು, ಸಮಸ್ಯೆ ಪರಿಹಾರಕ್ಕೆ ತಜ್ಞ ವೈದ್ಯರೊಡನೆ ಸಮಾಲೋಚನೆ ನಡೆಸಿದರು.

ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ ನ ಕುಲಪತಿ ಡಾ.ಬಸವನಗೌಡಪ್ಪ, ಸೆಂಟರ್ ಫಾರ್ ಬ್ರೈನ್ ರಿಸರ್ಚ್ ನ ನಿರ್ದೇಶಕ ಡಾ.ಕೆ.ವಿ.ಎಸ್.ಹರಿ, ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಡಾ.ಜಿ. ಹರೀಶ್ ಕುಮಾರ್, ಅಮೇರಿಕಾದ ಐಎನ್‌ಪಿ ನಿರ್ದೇಶಕಿ ಡಾ.ಸುಲಿ ಎಲ್.ಚಾಂಗ್, ಊಟಿಯ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಪಿ.ಧನಪಾಲ್, ಮೈಸೂರು ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ. ಪ್ರಮೋದ್ ಕುಮಾರ್, ಉಪ ಪ್ರಾಂಶುಪಾಲ ಡಾ.ಜಿ.ವಿ.ಪೂಜಾರ್, ಪ್ರಾಧ್ಯಾಪಕ ಡಾ.ಸರವಣ ಬಾಬು ಚಿದಂಬರಂ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಆರೋಪಿಗೆ 20 ವರ್ಷ ಜೈಲು ಶಿಕ್ಷೆ

ಮೈಸೂರು,17(ಎಂಕೆ)-ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ, ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಗೆ ಪೋಕ್ಸೋ ಕಾಯ್ದೆಯಡಿ 20 ವರ್ಷ ಸಜೆ ಹಾಗೂ 15 ಸಾವಿರ ರೂ. ದಂಡ ವಿಧಿಸಿ ಮೈಸೂರು ಜಿಲ್ಲಾ ಅಧಿಕ ಮತ್ತು ಸತ್ರ ನ್ಯಾಯಾಲಯ ಆದೇಶಿಸಿದೆ.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿದ ಹಲಗನಹಳ್ಳಿ ಗ್ರಾಮದ ಅಪ್ರಾಪ್ತ ಬಾಲಕಿಯನ್ನು ದಡಘಟ್ಟ ಗ್ರಾಮದ ಆರೋಪಿ ಕಿರಣ, 2022ರ ಮಾ.23 ರಂದು ಪುಸಲಾಯಿಸಿ ಹುಬ್ಬಳ್ಳಿಗೆ ಕರೆದೊಯ್ದು ತನಗೆ ಈಗಾಗಲೇ ಮದುವೆಯಾಗಿದ್ದರೂ ಅಪ್ರಾಪ್ತ ಬಾಲಕಿಗೆ ತಾಳಿ ಕಟ್ಟಿ ಹಲವು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ.

ಈ ಸಂಬಂಧ ಬಾಲಕಿ ತಾಯಿ ನೀಡಿದ ದೂರಿನ ಮೇರೆಗೆ ವಿಚಾರಣೆ ನಡೆಸಿದ ಬೈಲುಕುಪ್ಪೆ ವೃತ್ತ ನಿರೀಕ್ಷಕ ಬಿ.ಜಿ.ಪ್ರಕಾಶ್, ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ನ.15 ರಂದು ಪ್ರಕರಣದ ವಿಚಾರಣೆ ನಡೆಸಿದ ಮೈಸೂರು ಜಿಲ್ಲಾ ಅಧಿಕ ಮತ್ತು ಸತ್ರ ನ್ಯಾಯಾಲಯ ಎಫ್.ಟಿ.ಎಸ್.ಸಿ.1 ರ ನ್ಯಾಯಾಧೀಶರಾದ ಆನಂದ್ ಪಿ.ಹೊಗಾಡೆ ಪೋಕ್ಸೋ ಕಾಯ್ದೆಯಡಿ ಆರೋಪಿ ಕಿರಣ ಹೆಚ್.ಎಂ. 20 ವರ್ಷ ಕಠಿಣ ಸಜೆ ಹಾಗೂ 15 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ. ಪೋಕ್ಸೋ ವಿಶೇಷ ನ್ಯಾಯಾಲಯದ ಸರ್ಕಾರಿ ಅಭಿಯೋಜಕರಾದ ಕೆ.ಬಿ.ಜಯಂತಿ ವಾದ ಮಂಡಿಸಿದ್ದರು.

# ಮಹಾಯುತಿಯಲ್ಲಿ ಬಿರುಕು: ಶರದ್ ಪವಾರ್ ಎನ್‌ಸಿಪಿ ಜತೆ ಏಕನಾಥ್ ಶಿಂಧೆ ಶಿವಸೇನೆ ಮೈತ್ರಿ!

**ನಾಸಿಕ್:** ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಯೆಯೋಲಾದಲ್ಲಿ ಆಡಳಿತಾರೂಢ ಮಹಾಯುತಿ ಮೈತ್ರಿಕೂಟ ವಿಭಜನೆಯಾಗಿದ್ದು, ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರ ಶಿವಸೇನೆಯು ಪ್ರತಿಪಕ್ಷದ ಭಾಗವಾಗಿರುವ ಎನ್‌ಸಿಪಿ(ಎಸ್‌ಪಿ) ಜೊತೆ ಕೈಜೋಡಿಸಲು ನಿರ್ಧರಿಸಿದೆ. ಈ ಹೊಸ ಮೈತ್ರಿಯು, ಭಾರತೀಯ ಜನತಾ ಪಕ್ಷ(ಬಿಜೆಪಿ) ಮತ್ತು ಅಜಿತ್ ಪವಾರ್ ಅವರ ಎನ್‌ಸಿಪಿಯ ವಿರುದ್ಧ ಸ್ಪರ್ಧಿಸಲಿದೆ.

ಯೆಯೋಲಾ, ಸಚಿವ ಮತ್ತು ಎನ್‌ಸಿಪಿ ನಾಯಕ ಛಗನ್ ಭುಜಬಲ್ ಅವರ ತವರು ಕ್ಷೇತ್ರವಾಗಿದೆ. ಮಹಾಯುತಿಯಲ್ಲಿ ಬಿಜೆಪಿ, ಶಿವಸೇನೆ ಮತ್ತು ಎನ್‌ಸಿಪಿ ಇದ್ದರೆ, ವಿರೋಧ ಪಕ್ಷವಾದ ಮಹಾ ವಿಕಾಸ್ ಅಘಾಡಿಯಲ್ಲಿ ಉದ್ಧವ್ ಠಾಕ್ರೆ ಅವರ ಶಿವಸೇನೆ(ಯುಬಿಟಿ), ಶರದ್ ಪವಾರ್ ಅವರ ಎನ್‌ಸಿಪಿ(ಎಸ್‌ಪಿ) ಮತ್ತು ಕಾಂಗ್ರೆಸ್ ಇವೆ ಡಿ.2 ರಂದು ಯೆಯೋಲಾ ಸೇರಿದಂತೆ 246 ಪುರಸಭೆಗಳು, 42 ನಗರ ಪಂಚಾಯತ್‌ಗಳಿಗೆ ಚುನಾವಣೆ ನಡೆಯಲಿದೆ.

# ಪ್ರಪಂಚದ ಶ್ರೇಷ್ಠ 25 ಭಾಷೆಗಳಲ್ಲಿ ಕನ್ನಡವೂ ಒಂದು

## ಅಮೆರಿಕಾ ಸಂಸ್ಥೆಯ ಸಂಶೋಧನಾ ವರದಿ: ಪ್ರೊ.ಎಂ.ಕೃಷ್ಣೇಗೌಡ ಮಾಹಿತಿ

ಮೈಸೂರು,17(ಎಂಕೆ)- ಪ್ರಪಂಚದ ನಾಲ್ಕೂವರೆ ಸಾವಿರ ಭಾಷೆಗಳಲ್ಲಿ ಕನ್ನಡಕ್ಕೆ ವಿಶೇಷ ಸ್ಥಾನಮಾನ ದೊರೆತಿದ್ದು, ಅಮೆರಿಕದ ಸಂಸ್ಥೆಯೊಂದು ನಡೆಸಿದ ಸಂಶೋಧನೆ ಪ್ರಕಾರ ಪ್ರಪಂಚದ ಶ್ರೇಷ್ಠ 25 ಭಾಷೆಗಳಲ್ಲಿ ಕನ್ನಡವೂ ಒಂದಾಗಿದೆ ಎಂದು ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಆಯೋಜಿಸಿದ್ದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವು ಕನ್ನಡ ಮಾತನಾಡುತ್ತಿದ್ದೇವೆ ಎಂದರೆ ಬರೀ ಭಾಷೆಯನ್ನಷ್ಟೆ ಮಾತನಾಡುತ್ತಿಲ್ಲ. ಬದಲಿಗೆ ಕನ್ನಡದ ಅಲೋಚನೆಗಳು, ಸಂಸ್ಕಾರ, ವಿವೇಕ, ಜ್ಞಾನವನ್ನು ಮಾತನಾಡುತ್ತಿದ್ದೇವೆ ಎಂದರ್ಥ. ಹಾಗಾಗಿ ಈ ನಾಡಿನ ಪರಂಪರೆಯೇ ಕನ್ನಡದೊಳಗಿದೆ ಎಂದರು.

ಕನ್ನಡ ನಾಡಿನಲ್ಲಿ ಶಾಲೆಗೆ ಹೋಗದವರು, ಅನಕ್ಷರಸ್ಥರು ಕೂಡ ಹಾಡುಗಳನ್ನು ಕಟ್ಟುತ್ತಾರೆ. ಏಕೆಂದರೆ ಈ ಕನ್ನಡ ಭಾಷೆಯಲ್ಲೆ ಸಂಗೀತ ಗುಣವಿದೆ. ಡಾ.ರಾಜ್‌ಕುಮಾರ್ ಅವರು ಯಾವುದೇ ವಿಶ್ವವಿದ್ಯಾಲಯದಲ್ಲಿ ಓದಿದವರಲ್ಲ.



ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಆದರೆ, ಅವರು ಕನ್ನಡ ಮಾತನಾಡುವುದನ್ನು ಕೇಳುವುದೇ ರೋಮಾಂಚನವಾಗುತ್ತಿತ್ತು ಎಂದು ಸ್ಮರಿಸಿದರು.

ಕುವೆಂಪು ಅವರು ಬರೆದ 'ಬಾರಿಸು ಕನ್ನಡ ಡಿಂಡಿಮವ' ಪದ್ಯದಲ್ಲಿಯೇ ದೊಡ್ಡ ಫಿಲಾಸಫಿ ಅಡಗಿದೆ. ಈ ಪದ್ಯವನ್ನು ಮೊದಲಿಗೆ ಓದಿದ್ದು ಮೈಸೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್ ಉದ್ಘಾಟನೆಯ ಸಂದರ್ಭದಲ್ಲಿ. ಈ ಪದ್ಯದ ಪ್ರತಿ ಪದವನ್ನು ಕುವೆಂಪು ಬಹಳ ಎಚ್ಚರಿಕೆಯಿಂದ ಬರೆದಿದ್ದಾರೆ. ಕನ್ನಡದ ಕವಿಗಳು ವಿಶ್ವ ಕವಿಗಳು, ವಿಶ್ವ ಮಾನವರು. ಅವರು ಯಾವುದೇ ಜಾತಿ, ಮತ, ಪಂಥ, ಧರ್ಮ, ಭಾಷೆ, ಭೌಗೋಳಿಕತೆ ಯಾವುದಕ್ಕೂ ಸೇರುವುದಿಲ್ಲ. ಇಂದು ನಾವೆಲ್ಲರೂ ಸಣ್ಣ ಸಣ್ಣ ವಿಚಾರಕ್ಕೂ ಕೆರಳುತ್ತೇವೆ. ಆದರೆ, ನಮ್ಮದು ಕೆರಳುವ ಸಂಸ್ಕೃತಿ ಅಲ್ಲ ಎಂದು ತಿಳಿಸಿದರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ಎಂ.ಕೆ. ಸವಿತಾ ಮತ್ತಿತರರಿದ್ದರು.

## ಮೈಸೂರು ರಾಜರ ಕಾಲದ ಗತ ವೈಭವದ ವಸ್ತುಗಳು, ಮೈಸೂರು ರೇಷ್ಮೆ ಸೀರೆಗೆ ಜಾಗತಿಕ ಮನ್ನಣೆ

# ಬ್ರಿಟನ್‌ನ ವಿಕ್ಟೋರಿಯಾ, ಆಲ್ಬರ್ಟ್ ಮ್ಯೂಸಿಯಂ ಮೂಲಕ ಪ್ರಚಾರ

## ಬ್ರಿಟನ್ ಮಾಜಿ ಪ್ರಧಾನಿ ರಿಷಿ ಸುನಕ್ ಪತ್ನಿ ಅಕ್ಷತಾ ಮೂರ್ತಿ ಅವರಿಂದ ವೀಡಿಯೊ ಸೀರಿಸ್ ಆರಂಭ

### ಮೈಸೂರು- ಬ್ರಿಟನ್ ನಡುವೆ ಸಾಂಸ್ಕೃತಿಕ ಸೇತುವೆ

### "ಕಥೆಗಳು+ 10 ವಸ್ತುಗಳು" ವೀಡಿಯೊ ಸೀರಿಸ್

### ತಾಯ್ನಾಡಿನ ಪ್ರೀತಿ ಮಮತೆಯ ಅನಾವರಣ

### ಸ್ಥಳೀಯರಿಗಿಂತ ದೇಶ- ವಿದೇಶದ ಪ್ರವಾಸಿಗರ ಅಚ್ಚುಮೆಚ್ಚಿನ ಸೀರೆ

ಮೈಸೂರು, ನ.17(ಬಿಎಲ್‌ಯು)- ಇನ್ಫೋಸಿಸ್ ಸಂಸ್ಥೆ ಸಂಸ್ಥಾಪಕ ನಾರಾಯಣ ಮೂರ್ತಿ, ಸುಧಾ ಮೂರ್ತಿ ಪುತ್ರಿಯೂ ಆದ ಬ್ರಿಟನ್ ಮಾಜಿ ಪ್ರಧಾನಿ ರಿಷಿ ಸುನಕ್ ಪತ್ನಿ ಅಕ್ಷತಾ ಮೂರ್ತಿ ಅವರು ಮೈಸೂರು ಮಹಾರಾಜರ ಕಾಲದ ಗತ ವೈಭವ ಹಾಗೂ ಮೈಸೂರು ರೇಷ್ಮೆ ಸೀರೆಯ ವರ್ಣ ವೈಭವವನ್ನು ವಿಶ್ವಕ್ಕೆ ಪರಿಚಯಿಸುವ ಕಾರ್ಯ ಕೈಗೆತ್ತಿಕೊಂಡಿದ್ದಾರೆ.

ಬ್ರಿಟನ್‌ನಲ್ಲಿ ಭಾರತದ ಸಂಸ್ಕೃತಿ, ಪರಂಪರೆಯ ರಾಯಭಾರಿಯಂತೆ ಕರ್ತವ್ಯ ನಿರ್ವಹಿಸುತ್ತಿರುವ ಅಕ್ಷತಾ ಮೂರ್ತಿ ಅವರು ತಾಯಿ ನಾಡಿನ ಪ್ರೀತಿಯ ಮಮತೆಯನ್ನು ಈ ಮೂಲಕ ಅನಾವರಣಗೊಳಿಸುತ್ತಿದ್ದಾರೆ.

ಬ್ರಿಟನ್‌ನಲ್ಲಿರುವ ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂ ವಿಶ್ವದ ವಿಶಿಷ್ಟ ವಸ್ತುಗಳ ವಿನ್ಯಾಸ ಹಾಗೂ ಸೃಜನ ಶೀಲತೆಯನ್ನು ಪ್ರದರ್ಶಿಸುವ ಅದ್ಭುತ ವಸ್ತು ಸಂಗ್ರಹಾಲಯವಾಗಿದೆ. ಅಕ್ಷತಾ ಮೂರ್ತಿ ಅವರು ಈ ಮ್ಯೂಜಿಯಂ ಮೂಲಕ ಭಾರತದ ಪರಂಪರೆಗೆ ಹತ್ತಿರವಾದ ಅದರಲ್ಲೂ ವೈಶಿಷ್ಟತೆಯ ಪ್ರತೀಕವಾಗಿ ಮೈಸೂರಿನ ಪರಂಪರೆಯನ್ನು ವಿಶ್ವಕ್ಕೆ ಪರಿಚಯ ಮಾಡುವ ಪ್ರಯತ್ನಕ್ಕೆ ಅಡಿ ಇಟ್ಟಿದ್ದಾರೆ.

ಬ್ರಿಟನ್‌ನ ಪ್ರತಿಷ್ಠಿತ ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಜಿಯಂ ಟ್ರಸ್ಟಿಯಾಗಿರುವ ಅಕ್ಷತಾ ಮೂರ್ತಿ, ದಕ್ಷಿಣ ಏಷ್ಯಾ ಮೂಲದ 10 ವಸ್ತುಗಳನ್ನು ಜಗತ್ತಿಗೆ ಪರಿಚಯಿಸಲು ವಿಶಿಷ್ಟ ವೀಡಿಯೊ ಸೀರಿಸ್ ಆರಂಭಿಸಿದ್ದಾರೆ.

"ಕಥೆಗಳು+ 10 ವಸ್ತುಗಳು" ಶೀರ್ಷಿಕೆಯ ವಿಡೀಯೊ ಸೀರಿಸ್ ಮೂಲಕ ಮೈಸೂರಿನ ವೈಶಿಷ್ಟೆ ಹಾಗೂ ಬ್ರಿಟನ್‌ನ ಸೃಜನಶೀಲತೆ ನಡುವೆ ಸಾಂಸ್ಕೃತಿಕ ಸೇತುವೆ ನಿರ್ಮಾಣ ಮಾಡುವ ಹೊಸ ಪ್ರಯೋಗಕ್ಕೆ ಕೈ ಹಾಕಿದ್ದಾರೆ.

ಮೈಸೂರು ರಾಜರ ಕಾಲದ ಆಟಿಕೆ ಪೆಟ್ಟಿಗೆಯಿಂದ ಹಿಡಿದು ಮೈಸೂರು ರೇಷ್ಮೆ ಸೀರೆವರೆಗೆ ಅದರ ಮಹತ್ವವನ್ನು ಸಾರಿ ಹೇಳಲಿದ್ದಾರೆ. ಅಷ್ಟೆ ಅಲ್ಲದೆ ತನ್ನ ಅಜ್ಜನ ಮನೆಯ ಮಾವಿನ ಮರವನ್ನು ನೆನಪಿಸುವ ಸುಗಂಧ ದ್ರವ್ಯದ ವಿಶಿಷ್ಟತೆಯನ್ನು ಅಕ್ಷತಾ ಮೂರ್ತಿ ಅವರ ತಮ್ಮ ವೀಡಿಯೊ ಸೀರಿಸ್ ನಲ್ಲಿ ವಿವರಿಸಲಿದ್ದಾರೆ.

ಮೈಸೂರು ರಾಜರ ಕಾಲದ ಐತಿಹಾಸಿಕ ವಸ್ತುಗಳು ಹಾಗೂ ಮೈಸೂರು ರೇಷ್ಮೆ ಸೀರೆಯ ಗತಕಾಲದ ಮಹತ್ವ ಭವಿಷ್ಯಕ್ಕೆ ಸ್ಫೂರ್ತಿ ನೀಡಲು ಈ ಕೆಲಸ ಕೈಗೆತ್ತಿಕೊಂಡಿದ್ದಾರೆ.



ಬ್ರಿಟನ್ ಮಾಜಿ ಪ್ರಧಾನಿ ರಿಷಿ ಸುನಕ್ ಪತ್ನಿ ಅಕ್ಷತಾ ಮೂರ್ತಿ ಅವರು ಮೈಸೂರು ರೇಷ್ಮೆ ಸೀರೆ ಬಗ್ಗೆ ವಿದೇಶಿಗರಿಗೆ ಮಾಹಿತಿ ನೀಡುತ್ತಿರುವುದು

ಸಾಮಾನ್ಯವಾಗಿ ವಿದೇಶಕ್ಕೆ ಹೋದ ಬಹಳಷ್ಟು ಭಾರತೀಯರು ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಮರೆಯುತ್ತಾರೆ. ಪಾಶ್ಚಿಮಾತ್ಯ ಸಂಸ್ಕೃತಿಗೆ ಜೋತು ಬಿದ್ದು, ಅಲ್ಲಿನ ಉಡುಗೆ-ತೊಡುಗೆ ಧರಿಸುತ್ತಾರೆ. ಈ ಮೂಲಕ ತಾವು ಭಾರತಿಯರೇ ಅಲ್ಲವೆಂಬಂತೆ ಬಿಂಬಿಸಿಕೊಳ್ಳುತ್ತಾರೆ. ಕೆಲವರಂತೂ ತಾವು ಭಾರತೀಯರು ಎಂದೇಳಿಕೊಳ್ಳಲು ಹಿಂಜರಿಯುತ್ತಾರೆ.

ಆದರೆ ಅಕ್ಷತಾ ಮೂರ್ತಿ ಅವರಿಗೆ ಭಾರತದ ಪರಂಪರೆ ಮೇಲೆ ಅಪಾರ ಪ್ರೀತಿ. ಮೈಸೂರು ರೇಷ್ಮೆ ಸೀರೆ ಎಂದರೆ ಅವರಿಗೆ ಬಲು ಪ್ರಿಯವಾದ ಉಡುಗೆ. ತಮ್ಮ ಪತಿ ರಿಷಿ ಸುನಕ್ ಅವರು ಪ್ರಧಾನಿಯಾಗಿದ್ದಾಗ ಲಂಡನ್ ನ ಡೌನಿಂಗ್ ಸ್ಟ್ರೀಟ್‌ನಲ್ಲಿ ದೀಪಾವಳಿ ಆಚರಣೆ ವೇಳೆ ಅಕ್ಷತಾಮೂರ್ತಿ ಅವರು ನೀಲಿ ಬಣ್ಣದ ಮೈಸೂರು ರೇಷ್ಮೆ ಸೀರೆ ಧರಿಸಿದ್ದರು. ಅಷ್ಟೆ ಅಲ್ಲದೆ ಮೈಸೂರು ರಾಜ ಸಂಸ್ಥಾನದ ರಾಜ ಲಾಂಛನ ಗಂಡ ಭೇರುಂಡದ ಪದಕ ಕೂಡ ಧರಿಸಿದ್ದರು.

# ಈ ಒಂದೇ ಕಾರಣಕ್ಕೆ ಮೈಸೂರು ರೇಷ್ಮೆ ಸೀರೆ ಜಗತ್ತಿನಲ್ಲೇ ಪ್ರಖ್ಯಾತಿ

ಕಳೆದ ಕೆಲವು ವರ್ಷಗಳ ಹಿಂದೆ ಮೈಸೂರು ರೇಷ್ಮೆ ಸೀರೆಗೆ ಅಷ್ಟಾಗಿ ಬೇಡಿಕೆ ಇರಲಿಲ್ಲ. ಹಾಗಾಗಿ ಕೆಎಸ್‌ಐಸಿ ನಷ್ಟದಲ್ಲಿತ್ತು. ಮೈಸೂರು ರೇಷ್ಮೆ ಸೀರೆ ಮಾರಾಟ ಮಾಡಲು ಅಲ್ಲಿನ ಅಧಿಕಾರಿಗಳು ಪ್ರಯಾಸಪಡುತ್ತಿದ್ದರು.

ದುಬೈ ಸೇರಿದಂತೆ ಇತರೆ ದೇಶಗಳಿಗೆ ಹೋಗಿ ಮೈಸೂರು ರೇಷ್ಮೆ ಸೀರೆ ಮಾರಾಟ ಮಾಡುತ್ತಿದ್ದರು. ಆದರೆ ಹೆಚ್ಚಿನ ರೇಷ್ಮೆ ಸೀರೆ ಮಾರಾಟವಾಗದೆ ಅಧಿಕಾರಿಗಳ ಖರ್ಚು ಹಾಗೂ ವಿಮಾನ ಪ್ರಯಾಣದ ವೆಚ್ಚ ಹೊರೆಯಾಗಿತ್ತು. ಕೆಎಸ್‌ಐಸಿಯಲ್ಲಿ ಭ್ರಷ್ಟಾಚಾರವಾಗಿ ದಾಖಲಾತಿ ಕಡತಗಳ ಕೊಠಡಿಗೆ ಬೆಂಕಿ ಹಾಕಲಾಗಿತ್ತು.

ಆದರೆ ಇಂದು ಮೈಸೂರು ರೇಷ್ಮೆ ಸೀರೆಯ ಅದೃಷ್ಟವೇ ಬದಲಾಗಿದೆ. ಬೇಡಿಕೆಗೆ ತಕ್ಕಂತೆ ಸೀರೆ ಒದಗಿಸಲು ಸಾಧ್ಯವಾಗದ ಪರಿಸ್ಥಿತಿ ಇದೆ. ಗಂಟೆ ಗಂಟಲೆ ಕ್ಯೂನಲ್ಲಿ ನಿಂತರೂ ಎಲ್ಲರಿಗೂ ಸೀರೆ ನೀಡಲು ಸಾಧ್ಯವಾಗುತ್ತಿಲ್ಲ.

ಮೈಸೂರು ರೇಷ್ಮೆ ಸೀರೆಯ ಮಹತ್ವ ನಮ್ಮ ಜನರಿಗೆ ನಿಧಾನವಾಗಿ ಅರ್ಥವಾಗಿದೆ. ಸ್ಥಳಿಯರಿಗಿಂತ ದೇಶ-ವಿದೇಶದ ಪ್ರವಾಸಿಗರು ಮೈಸೂರು ರೇಷ್ಮೆ ಸೀರೆ ಖರೀದಿಗೆ ಮುಗಿಬೀಳುತ್ತಿದ್ದಾರೆ.

ಮೈಸೂರು ರೇಷ್ಮೆ ಸೀರೆಯ ವಿಶಿಷ್ಟತೆ ಇದಕ್ಕೆ ಪ್ರಮುಖ ಕಾರಣ. ಶುದ್ಧ ಚಿನ್ನ ಮತ್ತು ಬೆಳ್ಳಿಯಿಂದ ತಯಾರಿಸಿರುವ ಝರಿ ಇರುವುದು ಮೈಸೂರು ರೇಷ್ಮೆ ಸೀರೆಯ ವೈಶಿಷ್ಟೆ. ಇತರೆ ಸೀರೆಗಳಿಗಿಂತ ಮೈಸೂರು ರೇಷ್ಮೆ ಸೀರೆ ಬೆಲೆ ದುಬಾರಿಯಾದರೂ ಜನರು ಬೇಡಿಕೆ ಕಡಿಮೆ ಆಗಿಲ್ಲ.

ಭಾರತದ ಇತರೆ ರಾಜ್ಯಗಳ ಸೀರೆಗಳಿಗಿಂತ ಮೈಸೂರು ರೇಷ್ಮೆ ಸೀರೆ ಹಲವು ವಿಧಗಳಲ್ಲಿ ವಿಭಿನ್ನ, ಮೃದುವಾದ ಹೊಳಪು, ಚಿನ್ನದ ಝರಿಯ ಕುಸುರಿ ಮತ್ತು ರಾಜವೈಭೋಗದ ವಿನ್ಯಾಸಕ್ಕೆ ಮೈಸೂರು ರೇಷ್ಮೆ ಸೀರೆ ಪ್ರಖ್ಯಾತಿಯಾಗಿದೆ.



ನೀಲಿ ರೇಷ್ಮೆ ಸೀರೆಯಲ್ಲಿ ಕಂಗೊಳಿಸುತ್ತಿರುವ ಅಕ್ಷತಾ

ಮೈಸೂರು ರೇಷ್ಮೆ ಸೀರೆಯ ಝರಿಯಲ್ಲಿ ಶೇಕಡ 65 ರಷ್ಟು ಶುದ್ಧ ಬೆಳ್ಳಿ ಹಾಗೂ ಶೇಕಡ 0.65 ರಷ್ಟು ಚಿನ್ನ ಒಳಗೊಂಡಿದೆ. ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1912 ರಲ್ಲಿ ಕೆಎಸ್‌ಐಸಿ ಸ್ಥಾಪಿಸಿ, ಅಲ್ಲಿ ರೇಷ್ಮೆ ಸೀರೆ ತಯಾರಿಕೆಗೆ ನಾಂದಿಯಾಡಿದರು. ಭಾರತದ ಅತ್ಯಂತ ದುಬಾರಿ ಹಾಗೂ ಪ್ರತಿಷ್ಠಿತ ರೇಷ್ಮೆ ಸೀರೆಗಳಲ್ಲಿ ಇದು ಒಂದಾಗಿದೆ. ಇಂತಹ ವೈಶಿಷ್ಟ ಹಾಗೂ ವರ್ಣಮಯ ಮೈಸೂರು ರೇಷ್ಮೆ ಸೀರೆಯ ಮಹತ್ವವನ್ನು ಅಕ್ಷತಾ ಮೂರ್ತಿ ಅವರು ಈಗ ವಿಶ್ವ ಮಟ್ಟದಲ್ಲಿ ಪ್ರಚಾರ ಮಾಡುತ್ತಿದ್ದಾರೆ.

ಇದು ಮೈಸೂರಿನ ಪರಂಪರೆ ಬಗ್ಗೆ ಅಕ್ಷತಾ ಮೂರ್ತಿ ಅವರಿಗಿದ್ದ ಆಸಕ್ತಿಯನ್ನು ಬಿಂಬಿಸಿತ್ತು.

ಈ ಹಿನ್ನೆಲೆ ಅಕ್ಷತಾ ಮೂರ್ತಿ ಅವರು ತಮ್ಮ ವೀಡಿಯೊ ಸೀರಿಸ್ ನಲ್ಲಿ ಮೈಸೂರು ರೇಷ್ಮೆ ಸೀರೆಯ ವರ್ಣನೆ ಮಾಡಲಿದ್ದಾರೆ. ಈ ಮೂಲಕ ಮೈಸೂರು ರೇಷ್ಮೆ ಜಾಗತಿಕ ಮನ್ನಣೆ ನೀಡಲು ಮುಂದಾಗಿದ್ದಾರೆ. ಅದೂ ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂ ನಲ್ಲಿರುವ ಮೈಸೂರು ರಾಜರ ಕಾಲದ ವಸ್ತುಗಳು ಹಾಗೂ ಮೈಸೂರು ರೇಷ್ಮೆ ಸೀರೆಯನ್ನು ವೀಡಿಯೊ ಸೀರಿಸ್ ಮೂಲಕ ಪ್ರಚಾರ ಮಾಡಲು ಮುಂದಾಗಿದ್ದಾರೆ.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | **(ದೂ: 2521923)** |
| ದಾವೂದ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | **(ದೂ: 2422871)** |
| ಐ ಆ್ಯಮ್ ಗಾಡ್ (ಕ) | 4 ಪ್ರದರ್ಶನಗಳು |
| **ಬಾಲಾಜಿ** | **(ದೂ: 2497199)** |
| ದೇ ದೇ ಪ್ಯಾರ್ ದೇ-2 (ಹಿ) | 3 ಪ್ರದರ್ಶನಗಳು |
| **ಮಹದೇಶ್ವರ** | **(ಮೊ:9900820093)** |
| ಬ್ರ್ಯಾಟ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಕಾಂತಾರ ಚಾಪ್ಟರ್-1 (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಅದರ್ಸ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ಗತವೈಭವ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಬ್ರ್ಯಾಟ್ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| - | - |
| **ಪ್ರಭಾ** | |
| ಯಜಮಾನ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್

ದೂ : 4240422/4241800

| | |
|---|---|
| ಸ್ಕ್ರೀನ್ 1 | **ಕಾಂತಾರ ಚಾಪ್ಟರ್ 1(ಕ):** ಮ.1.25ಕ್ಕೆ, ಸಂ.4.45ಕ್ಕೆ |
| | **ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ):** ಬೆ.11.00ಕ್ಕೆ, ರಾ.8.05, ರಾ.10.25ಕ್ಕೆ |
| ಸ್ಕ್ರೀನ್ 2 | **ಡೈಸ್ ಇರೇ (ಮ):** ಬೆ.10.40ಕ್ಕೆ, **ಆರೊಮಲೆ (ತ):** ಮ.1.25ಕ್ಕೆ, **ಬ್ರ್ಯಾಟ್(ಕ):** ಸಂ.4.05ಕ್ಕೆ, ಸಂ.7.15ಕ್ಕೆ **ಜಟಾಧರ (ತೆ):** ರಾ.10.20ಕ್ಕೆ |
| ಸ್ಕ್ರೀನ್ 3 | **ಹಕ್ (ಹಿ):** ಬೆ.10.35ಕ್ಕೆ, ಮ. 1.25ಕ್ಕೆ, ಸಂ. 7.15ಕ್ಕೆ **ಲವ್ ಯು ಮುದ್ದು(ಕ):** ಸಂ. 4.20ಕ್ಕೆ, **ಇನ್ನೊಸೆಂಟ್ (ಮ):** ರಾ.10.10ಕ್ಕೆ, |
| ಸ್ಕ್ರೀನ್ 4 | **ಕಾಂತಾರ ಚಾಪ್ಟರ್ 1(ಕ):** ಸಂ. 7.00ಕ್ಕೆ, **ಬ್ರ್ಯಾಟ್(ಕ):** ಬೆ.10.20ಕ್ಕೆ, **ಯಜಮಾನ(ಕ):** ಮ.1.30ಕ್ಕೆ, **ದಿ ಗರ್ಲ್‌ಫ್ರೆಂಡ್ (ತೆ):** ಸಂ.4.10ಕ್ಕೆ, ರಾ. 10.20ಕ್ಕೆ |

### ಮೈಸೂರು ವಿಷನ್ ಸಿನಿಮಾ

ದೂ : 0821-2973519

**ಕಾಂತಾರ -1(ಕ):** ಬೆ.10.30, ಮ.1.35, ರಾ.7.15ಕ್ಕೆ
**ಬ್ರ್ಯಾಟ್ (ಕ):** ಬೆ.10.45ಕ್ಕೆ, ಮ.1.45, ಸಂ.4.45, ರಾ.7.45ಕ್ಕೆ
**ನಿಷಿದ್ಧ (ಕ):** ಬೆ.10.50ಕ್ಕೆ, **ದಿ ಗರ್ಲ್‌ಫ್ರೆಂಡ್ (ತೆ):** ಬೆ.11, ಸಂ.6.30, ರಾ.9.15ಕ್ಕೆ
**ಕೋಣ (ಕ):** ಮ.1.15ಕ್ಕೆ, **ಐ ಆ್ಯಮ್ ಗಾಡ್ (ಕ):** ಸಂ.3.40ಕ್ಕೆ,
**ಲವ್ ಯು ಮುದ್ದು(ಕ):** ಸಂ.6.40ಕ್ಕೆ, **ಡೈಸ್ ಇರೇ (ಮ):** ರಾ. 9.15ಕ್ಕೆ,

### ನೆಕ್ಸಸ್ ಮಾಲ್

**ಕಾಂತಾರ ಚಾಪ್ಟರ್ 1(ಕ) :** ಬೆ: 10.00ಕ್ಕೆ, ಸಂ.4.15ಕ್ಕೆ, ರಾ.10.30ಕ್ಕೆ
**ಬ್ರ್ಯಾಟ್ (ಕ):** ಬೆ: 9.45ಕ್ಕೆ, ಸಂ.4.05ಕ್ಕೆ.
**ದಿ ಗರ್ಲ್‌ಫ್ರೆಂಡ್ (ತೆ):** ಬೆ: 9.55ಕ್ಕೆ, ಮ.12.50ಕ್ಕೆ, ಸಂ.6.55, ರಾ: 9.50ಕ್ಕೆ
**ಹಕ್ (ಹಿ):** ಬೆ: 10.05ಕ್ಕೆ, ಮ.1.25, ಸಂ.7.40, ರಾ.10.00ಕ್ಕೆ
**ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ):** ಬೆ. 10.05ಕ್ಕೆ, ಮ.12.30, ಸಂ.7.15, ರಾ.9.40ಕ್ಕೆ
**ದಿ ತಾಜ್ ಸ್ಟೋರಿ (ಹಿ):** ಬೆ: 10.05, ಮ: 3.50ಕ್ಕೆ,
**ಯಜಮಾನ (ಕ):** ಮ: 12.40ಕ್ಕೆ, **ಜಟಾಧರ (ತೆ):** ಮ: 1.00ಕ್ಕೆ,
**ಡೈಸ್ ಇರೇ (ಮ):** ಮ. 1.35ಕ್ಕೆ, ರಾ: 7.40ಕ್ಕೆ, **ಬಾಹುಬಲಿ (ಹಿ):** ಮ. 2.55ಕ್ಕೆ,
**ತಮ್ಮಾ (ಹಿ):** ಮ.3.45ಕ್ಕೆ, **ಚೆನ್ನೈ ಎಕ್ಸ್‌ಪ್ರೆಸ್ (ಹಿ):** ಸಂ. 4.05ಕ್ಕೆ,
**ಆರೊಮಲೆ (ತ):** ಸಂ.7.15ಕ್ಕೆ, **ಏಕ್ ದಿವಾನೆ ಕಿ ದೀವಾನಿಯಾತ್ (ಹಿ):** ಸಂ.7.15ಕ್ಕೆ
**ಇನ್ನೋಸೆಂಟ್(ಮ):** ರಾ.10.10ಕ್ಕೆ, **ಮರ್ಡ್‌ರ್ ರಿಪೋರ್ಟ್(ಕೋ):** ರಾ.10.20ಕ್ಕೆ,

### ಗರುಡ ಮಾಲ್

**ಕಾಂತಾರ ಚಾಪ್ಟರ್ 1(ಕ) :** ಬೆ: 9.50ಕ್ಕೆ, ಮ.1.10ಕ್ಕೆ, ಸಂ.7.05
**ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ):** ಬೆ. 10.00ಕ್ಕೆ, ಸಂ.4.45, ರಾ.10.20ಕ್ಕೆ
**ದಿ ಗರ್ಲ್‌ಫ್ರೆಂಡ್ (ತೆ):** ಬೆ: 10.10ಕ್ಕೆ, ಸಂ.7.05, ರಾ.10.00ಕ್ಕೆ
**ಹಕ್ (ಹಿ):** ಬೆ: 10.40ಕ್ಕೆ, ಸ.4.15, ರಾ.10.30ಕ್ಕೆ
**ಬಾಹುಬಲಿ (ತೆ):** ಮ. 12.25ಕ್ಕೆ,
**ಬ್ರ್ಯಾಟ್ (ಕ):** ಮ. 1.05ಕ್ಕೆ, ಸಂ.7.10ಕ್ಕೆ
**ಜಟಾಧರ (ತೆ):** ಮ: 1.30ಕ್ಕೆ,
**ಲವ್ ಯು ಮುದ್ದು(ಕ):** ಸಂ.4.20ಕ್ಕೆ, **ಡೈಸ್ ಇರೇ (ಮ):** ಸಂ.4.35, ರಾ.10.10ಕ್ಕೆ
**ಐ ಆ್ಯಮ್ ಗಾಡ್ (ಕ):** ಸಂ.7.05ಕ್ಕೆ,

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ವಿಶೇಷಚೇತನ ಮಕ್ಕಳಿಗೆ ಊಟದ ವ್ಯವಸ್ಥೆ



ಮೈಸೂರು ಲಷ್ಕರ್ ಮೊಹಲ್ಲಾದ ಗರಡಿಕೇರಿಯ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ ವತಿಯಿಂದ ಕಡೇ ಕಾರ್ತಿಕ ಸೋಮವಾರದ ಅಂಗವಾಗಿ ತಿಲಕ್‌ನಗರದ ವಿಶೇಷಚೇತನ ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಲಾಯಿತು. ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ರವಿಕುಮಾರ್, ಮುಖಂಡರಾದ ರಾಚಯ್ಯ, ರಾಜೇಂದ್ರ, ಜಗನ್ನಾಥ್, ನಾಗೇಂದ್ರ ಸುರೇಶ್ ಬಾಬು, ಮಹದೇವ, ರವಿ, ಶಿವಶಂಕರ, ರಾಜು, ಕುಮಾರ್ ಮತ್ತಿತರರಿದ್ದರು.

# ಎನ್‌ಡಿಎಗೆ ಲಾಲೂ ಪ್ರಸಾದ್ ಪುತ್ರ ತೇಜ್ ಪ್ರತಾಪ್ ಯಾದವ್ ಬೆಂಬಲ!



**ಪಾಟ್ನಾ:** ಬಿಹಾರ ವಿಧಾನಸಭೆ ಚುನಾವಣೆ ಬಳಿಕ ಅಲ್ಲಿ ದಿನಕ್ಕೊಂದು ತಿರುವು ಪಡೆಯುತ್ತಿದ್ದು, ಆಘಾತಕಾರಿ ಸೋಲಿನ ಬಳಿಕ ಲಾಲು ಪ್ರಸಾದ್ ಯಾದವ್ ಕುಟುಂಬದಲ್ಲಿ ಅಲ್ಲೋಲ-ಕಲ್ಲೋಲ ಸೃಷ್ಟಿಯಾಗಿದೆ. ಇತ್ತೀಚೆಗಷ್ಟೇ ಲಾಲು ಪ್ರಸಾದ್ ಯಾದವ್ ಪುತ್ರಿ ರೋಹಿಣಿ ಆಚಾರ್ಯ ತಮ್ಮದೇ ಕುಟುಂಬಸ್ಥರ ವಿರುದ್ಧ ಕಿಡಿಕಾರಿ ಇನ್ನು ಮುಂದೆ ನಾನು ಆ ಕುಟುಂಬದ ಭಾಗವಲ್ಲ ಎಂದು ಘೋಷಿಸಿದ್ದಾರೆ.

ಈ ವಿಚಾರ ವ್ಯಾಪಕ ವೈರಲ್ ಆಗಿರುವಂತೆಯೇ ಇದೀಗ ಲಾಲು ಪ್ರಸಾದ್ ಯಾದವ್ ಕುಟುಂಬದ ಮತ್ತೊಂದು ಕುಡಿ ಹಾಗೂ ಹಿರಿಯ ಪುತ್ರ ತೇಜ್ ಪ್ರತಾಪ್ ಯಾದವ್ ಕೂಡ ಇದೀಗ ತಮ್ಮದೇ ಕುಟುಂಬದ ವಿರುದ್ಧ ತಿರುಗಿಬಿದ್ದಿದ್ದಾರೆ.


ಕುಟುಂಬದಿಂದ ಹೊರಗೆ ಬಂದು ತಮ್ಮದೇ ಆದ ಜೆಜೆಡಿ (ಜನಶಕ್ತಿ ಜನತಾದಳ) ಪಕ್ಷ ಸ್ಥಾಪಿಸಿರುವ ತೇಜ್ ಪ್ರತಾಪ್ ಇದೀಗ ಪ್ರಧಾನಿ ಮೋದಿ ಮತ್ತು ನಿತೀಶ್ ಕುಮಾರ್ ಅವರ ಎನ್ಡಿಎಗೆ ಬೆಂಬಲ ನೀಡಲು ಸಜ್ಜಾಗಿದ್ದು, ಸಹೋದರಿ ರೋಹಿಣಿ ಆಚಾರ್ಯಗೂ ಬಿಗ್ ಆಫರ್ ನೀಡಿದ್ದಾರೆ.

## ಇಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರ ಮೈಸೂರು ಜಿಲ್ಲಾ ಪ್ರವಾಸ



ಮೈಸೂರು,ನ.17–ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿ ಮಲೆ ನ.18ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ನ.18 ರಂದು ಬೆಳಗ್ಗೆ 10.30 ಗಂಟೆಗೆ ಮೈಸೂ ರಿಗೆ ಆಗಮಿಸಲಿದ್ದಾರೆ. ಬೆಳಗ್ಗೆ 11 ಗಂಟೆಗೆ ಕುವೆಂಪು ಸಭಾಂಗಣ, ಪ್ರಸಾರಾಂಗ, ಮಾನಸಗಂಗೋತ್ರಿ ಇಲ್ಲಿ 'ಧರೆಗೆ ದೊಡ್ಡವರ ಏಳು ಪತ್ಯಗಳು ಮತ್ತು ನಾವು ಕೂಗುವಾ ಕೂಗು' ಎರಡು ಕೃತಿಗಳ ಲೋಕಾರ್ಪಣೆ, ಮೈಸೂರು ಗುರುರಾಜು ತಂಡದವರು 20 ಗಂಟೆಗಳ ಕಾಲ ಹಾಡಿರುವ ಮಂಟೇ ಸ್ವಾಮಿಯ ದೃಶ್ಯ ಶ್ರವ್ಯ ಸರಣಿ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸುವರು.








### ಸಾರ್ವಜನಿಕ ತಿಳುವಳಿಕೆ ನೋಟೀಸು

ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಡಾ: ಸಿ.ಎಸ್. ಕೃಷ್ಣಮೂರ್ತಿ, ಬಿನ್ ಲೇಟ್. ಸಿ.ಆರ್ ಶಾಮಣ್ಣ, ವಾಸ: ಮನೆ ನಂ. 954/7, ಶೇಷಾದ್ರಿ ಐಯ್ಯರ್ ರಸ್ತೆ, ಲಕ್ಷ್ಮೀಪುರಂ ಚಾಮರಾಜ ಮೊಹಲ್ಲಾ, ಮೈಸೂರು ರವರ ಸಂಪೂರ್ಣ ಹಕ್ಕು, ಮಾಲೀಕತ್ವಕ್ಕೊಳಪಟ್ಟ ಹಾಗೂ ಯಾವುದೇ ಋಣಭಾರಗಳಿಲ್ಲದ ಷೆಡ್ಯೂಲ್ ಸ್ವತ್ತನ್ನು ಸದರಿ ಡಾ: ಸಿ.ಎಸ್.ಕೃಷ್ಣಮೂರ್ತಿ ರವರಿಂದ ಕ್ರಯಕ್ಕೆ ಪಡೆಯಲು ಹೊರಟಿರುತ್ತಾರೆ. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ವಿಧವಾದ ಹಕ್ಕು, ಬಾಧ್ಯತೆ, ಆಕ್ಷೇಪಣೆಗಳೇನಾದರೂ ಇದ್ದ ಪಕ್ಷದಲ್ಲಿ ಸದರಿ ಹಕ್ಕು, ಬಾಧ್ಯತೆ, ಆಕ್ಷೇಪಣೆಗಳನ್ನು ಪುಷ್ಠೀಕರಿಸುವಂತಹ ಸೂಕ್ತ ದಾಖಲಾತಿಗಳೊಂದಿಗೆ ಈ ನೋಟೀಸು ಪ್ರಕಟವಾದ 7 (ಏಳು) ದಿನಗಳ ಒಳಗೆ ಕೆಳಕಂಡ ವಕೀಲರ ಕಛೇರಿಗೆ ಸಲ್ಲಿಸತಕ್ಕದ್ದು, ನಂತರ ಬರುವ ಆಕ್ಷೇಪಣೆಗಳು ನಮ್ಮ ಕಕ್ಷಿದಾರರನ್ನು ಬದ್ಧ ಪಡಿಸುವುದಿಲ್ಲವೆಂದು ಈ ಮೂಲಕ ಶೃತಪಡಿಸಿರುತ್ತದೆ.

**'ಷೆಡ್ಯೂಲ್ ಸ್ವತ್ತಿನ ವಿವರ"**

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಬೋಗಾದಿ ಬಡಾವಣೆಯಲ್ಲಿ ಆನಂದ ಗೃಹ ನಿರ್ಮಾಣ ಸಹಕಾರ ಸಂಘ (ನಿ)., ಮೈಸೂರು ರವರು ನಿರ್ಮಿಸಿರುವ ಆನಂದ ನಗರ ಬಡಾವಣೆಯ ಡಿ ಬ್ಲಾಕ್ ನಲ್ಲಿರುವ ನಿವೇಶನ ಸಂಖ್ಯೆ:112. ಮೈಸೂರು ಮಹಾನಗರ ಪಾಲಿಕೆ, ಮೈಸೂರು ರವರು ವಿತರಿಸಿರುವ ನಮೂನೆ–2 (ನಿಯಮ 20), ದಾಖಲೆ ಸಂಖ್ಯೆ: 25467469 ರ ಪ್ರಕಾರ ಸ್ವತ್ತಿನ ಸಂಖ್ಯೆ: 19–7–782–112, ಸ್ವತ್ತಿನ ಹಳೆ ಸಂಖ್ಯೆ: 112 D Block, ನಿರ್ಧರಣಾ ಸಂಖ್ಯೆ: 112 D Block ನೇ ನಂಬರ್ ಸ್ವತ್ತಿಗೆ ಚಕ್ಕುಬಂದಿ:ಪೂರ್ವಕ್ಕೆ: 30 ಅಡಿ ರಸ್ತೆ, ಪಶ್ಚಿಮಕ್ಕೆ : ಸ್ವತ್ತಿನ ಸಂಖ್ಯೆ: 95, ಉತ್ತರಕ್ಕೆ :ಸ್ವತ್ತಿನ ಸಂಖ್ಯೆ: 113, ದಕ್ಷಿಣಕ್ಕೆ:ಸ್ವತ್ತಿನ ಸಂಖ್ಯೆ: 111,

ಈ ಮಧ್ಯೆ ಇರುವ ಪೂರ್ವ:ಪಶ್ಚಿಮ:18.288037 ಮೀಟರ್ ಮತ್ತು ಉತ್ತರ ದಕ್ಷಿಣ: 12.192024 ಮೀಟರ್ ಒಟ್ಟು 222.9682 ಚದರ ಮೀಟರ್‌ಗಳುಳ್ಳ ಪೂರ್ತಾ ಖಾಲಿ ನಿವೇಶನ.

ಸಹಿ/– ಸೋಮಣ್ಣ.ಎಂ.ಈ, ಬಿ.ಕಾಂ, ಎಲ್.ಎಲ್.ಬಿ.
ವಕೀಲರು ಮತ್ತು ನೋಟರಿ, ಕಛೇರಿ: ನಂ. 11, 1ನೇ ಮಹಡಿ,3ನೇ ಮುಖ್ಯ ರಸ್ತೆ, 8ನೇ ಅಡ್ಡ ರಸ್ತೆ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ,ಮೈಸೂರು –570009.
ದಿನಾಂಕ: 16–11–2025 ಮೊ:9341933392

### IN THE COURT OF HON'BLE ASSISTANT COMMISSIONER AT HUNSUR.

RA No. 298/2025-2026
Appellants: Rathnamma and others
V/s
Respondents: Tahasildar and another

**DRAFT PUBLICATION FOR THE PUBLIC**

The petitioner has filed the above petition against the respondents for seeking relief of The Karnataka Land Revenue Act, 1964 the Respondent No. 2 is hereby directed to appear before the Hon'ble Assistant Commissioner at Hunsur on 26-11-2025 failing which the matter will be heard and proceed in accordance with law.

Respondent LR's No. 2
Sathyanarayana Ayar, S/o Late K.S. Ramaiah, Aged about 70 years, R/at, Brahmanara Street, Hunsur City.

By Order
Advocate for Appellants
Sd/- Ganesh B.A., L.L.B.,
ADVOCATE, KAR No. 634/2013,
Kalpataru Road, Opp Honda Showroom, Hunsur City.
MOB: 9902124673

### ಸಾರ್ವಜನಿಕ ಪ್ರಕಟಣೆ

ವಾದಿ: ಸುನಂದ, ಬಿನ್ ಲೇಟ್ ಡಿ. ಬಾಲಕೃಷ್ಣೇಗೌಡ, ಕೋಂ ಟಿ. ಲಿಂಗರಾಜೇಗೌಡ, ವಯಸ್ಸು 62 ವರ್ಷ, ವಾಸ: ಸೂರಾಪುರ ಗ್ರಾಮ, ಕಸಬಾ ಹೋಬಳಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು: ಮಹಾಲಕ್ಷ್ಮಿ ಮತ್ತು ಇತರರು.

ಪ್ರತಿವಾದಿ–1: ಮಹಾಲಕ್ಷ್ಮಿ ಬಿನ್ ಲೇಟ್ ಡಿ. ಬಾಲಕೃಷ್ಣೇಗೌಡ, ಕೋಂ ಕೆ.ಎಸ್. ಅಶೋಕ, ವಯಸ್ಸು 57 ವರ್ಷ, ವಾಸಃ ನಂ. 3/18, 2ನೇ ಕ್ರಾಸ್, ಶಂಕರ ಪುರ, ಮರಿಗೌಡ ಬಡಾವಣೆ, ಮಂಡ್ಯ ಸಿಟಿ ಮತ್ತು ತಾಲ್ಲೂಕು ಮತ್ತು ಜಿಲ್ಲೆ,

2. ವಸಂತ, ಬಿನ್ ಲೇಟ್ ಡಿ. ಬಾಲಕೃಷ್ಣೇಗೌಡ, ಕೋಂ ಮಲ್ಲುಗೌಡ, ವಯಸ್ಸು 55 ವರ್ಷ,

3. ಪ್ರಕಾಶ್, ಬಿನ್ ಲೇಟ್ ಡಿ. ಬಾಲಕೃಷ್ಣಗೌಡ, ವಯಸ್ಸು 52 ವರ್ಷ, 2 ಮತ್ತು 3ರ ವಾಸ: ಸತ್ತೇಗಾಲ ಗ್ರಾಮ, ಪಾಳ್ಯ ಹೋಬಳಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಈ ಮೇಲ್ಕಂಡ ನಮ್ಮ ಕಕ್ಷಿದಾರರಾದ ವಾದಿ ಪ್ರತಿವಾದಿಗಳ ವಿರುದ್ಧ ಕೆಳಕಂಡ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ 1/4 ನೇ ಭಾಗಾಂಶ ಹಾಗೂ ಪ್ರತ್ಯೇಕ ಸ್ವಾಧೀನ ಪರಿಹಾರ ಕೋರಿ ಕೊಳ್ಳೇಗಾಲದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 165/2025 ರಂತೆ ದಾವಾ ಹೂಡಿದ್ದು, ಸದರಿ ದಾವೆಯು ಅಂತಿಮ ತೀರ್ಪಿಗಾಗಿ ಬಾಕಿ ಇರುತ್ತದೆ. ಸದರಿ ದಾವಾ ದಲ್ಲಿ ಪ್ರತಿವಾದಿಗಳಿಗೆ ಸಮನ್ ನೀಡಿರುತ್ತಾರೆ. ಹೀಗಿರ ಬೇಕಾದರೆ ಪ್ರತಿವಾದಿಗಳ ಜೊತೆ ಯಾರೂ ಸಹ ಮಾರಾಟ ವಗ್ಗೈರೆ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಸದರಿ ಮೂರನೇ ಪ್ರತಿವಾದಿಯ ಜೊತೆ ಮಾರಾಟ ವಗ್ಗೈರೆ ವ್ಯವಹರಿಸಿದ್ದಲ್ಲಿ ನಮ್ಮ ಕಕ್ಷಿದಾರರಾದ ವಾದಿಯು ಜವಾಬ್ದಾರರಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಅದರಿಂದ ಉಂಟಾಗುವ ಕಷ್ಟ–ನಷ್ಟಗಳಿಗೆ ನಮ್ಮ ಕಕ್ಷಿದಾರರಾದ ವಾದಿಯು ಜವಾಬ್ದಾರರಲ್ಲ ಎಂದು ತಿಳಿಯತಕ್ಕದ್ದು.

ಷೆಡ್ಯೂಲ್

1. ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು, ಪಾಳ್ಯ ಹೋಬಳಿ, ಸತ್ತೇಗಾಲ ಗ್ರಾಮಕ್ಕೆ ಸೇರಿದ ಸರ್ವೆ ನಂ. 438/2 ರಲ್ಲಿ ವಿಸ್ತೀರ್ಣ 03 ಎಕರೆ 75 ಸೆಂಟ್ಸ್ ಜಮೀನು ಮಾತ್ರ, 2. ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು, ಪಾಳ್ಯ ಹೋಬಳಿ, ಸತ್ತೇಗಾಲ ಗ್ರಾಮಕ್ಕೆ ಸೇರಿದ ಸರ್ವೆ ನಂ. 436 ರಲ್ಲಿ ವಿಸ್ತೀರ್ಣ 01 ಎಕರೆ 25 ಸೆಂಟ್ಸ್ ಜಮೀನು ಮಾತ್ರ, 3. ಚಾಮರಾಜ ನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ಪಾಳ್ಯ ಹೋಳಿ, ಸತ್ತೇಗಾಲ ಗ್ರಾಮಕ್ಕೆ ಸೇರಿದ ಸರ್ವೆ ನಂ. 435 ರಲ್ಲಿ ವಿಸ್ತೀರ್ಣ 01 ಎಕರೆ 35 ಸೆಂಟ್ಸ್ ಜಮೀನು ಮಾತ್ರ.

ಸಹಿ/– ಎಂ. ಶಿವಲಿಂಗೇಗೌಡ, ಎಂ.ಎ., ಎಲ್ಎಲ್.ಬಿ., ವಕೀಲರು,
ಕಛೇರಿ: ಅಗ್ನಿಶಾಮಕದಳ ಠಾಣೆ ರಸ್ತೆ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಹತ್ತಿರ, ಚಾಮರಾಜನಗರ.
ದಿನಾಂಕ: 17–11–2025
ಚಾಮರಾಜನಗರ




### ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು







